ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-60/2025-26/55 ದಿನಾಂಕ: 12 AUG 2025

## :: ಸಿಂಡಿಕೇಟ ಸಭೆಯ ನಡಾವಳಿಗಳು ::

ಕರ್ನಾಟಕ ವಿಶ್ವವಿದ್ಯಾಲಯದ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 31 ಜುಲೈ, 2025 ರಂದು ಮುಂಜಾನೆ 11:30 ಗಂಟೆಗೆ** ಸಿಂಡಿಕೇಟ ಸಭೆಯನ್ನು ಕವಿವಿ. ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ದಿನಾಂಕ: 31.07.2025ರ ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ(ಶ್ರೀಮತಿ). ಕರೀಮುನ್ನಿಸ್ಸಾ ಸಯ್ಯದ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ | ಸದಸ್ಯರು |
| 3) | ಡಾ. ಅರವಿಂದ ಎ. ಮೂಲಿಮನಿ, ಡೀನರು | ಸದಸ್ಯರು |
| 4) | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ | ಸದಸ್ಯರು |
| 5) | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 6) | ಡಾ. ಎಮ್. ಡಿ. ವಕ್ಕುಂದ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 7) | ಡಾ. ಎಮ್. ಬಿ. ಬಾಗಡಿ, ಪ್ರಾಚಾರ್ಯರು, ನವಲಗುಂದ | ಸದಸ್ಯರು |
| 8) | ಡಾ. (ಶ್ರೀಮತಿ). ಎ. ಎಮ್. ನಾಯ್ಕ, ಪ್ರಾಚಾರ್ಯರು, ಕಾರವಾರ **(ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು)** | ಸದಸ್ಯರು |
| 9) | ಡಾ. ಲಿಂಗರಾಜ ಸಿ. ಮುಳ್ಳಳ್ಳಿ, ಪ್ರಾಚಾರ್ಯರು, ಹುಬ್ಬಳ್ಳಿ | ಸದಸ್ಯರು |
| 10) | ಡಾ(ಶ್ರೀಮತಿ). ಎಚ್.ಎಸ್.ಅನುಪಮಾ, ಹೊನ್ನಾವರ **(ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು)** | ಸದಸ್ಯರು |
| 11) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 12) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 13) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 14) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ | ಸದಸ್ಯರು |
| 15) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 16) | ಡಾ. ಶೌಖತ್ ಅಜೀಮ್, ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| 17) | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ.ಧಾರವಾಡ | ಸದಸ್ಯರು |
| 18) | ಡಾ. ಸಿ. ಕೃಷ್ಣಮೂರ್ತಿ, ಪ್ರಭಾರಿ ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 19) | ಡಾ. ಶಂಕರ ವನಿಕ್ಯಾಳ,ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು **ಅಂದರೆ 19 ಜನ ಸದಸ್ಯರುಗಳು (02 ಸದಸ್ಯರು ಆನ್‌ಲೈನ್ ಮತ್ತು 17 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:30 ಗಂಟೆಗೆ** ಸಭೆಯನ್ನು ಪ್ರಾರಂಭಿಸಲಾಯಿತು.

-

-

-

-



ಕುಲಸಚಿವರು ಕುಲಪತಿಗಳು

## ದಿನಾಂಕ 31.07.2025ರಂದು ಜರುಗುವ ಸಾಧಾರಣ ಸಿಂಡಿಕೇಟ ಸಭೆಯ ಕಾರ್ಯಸೂಚಿ

**ಕುಲಸಚಿವರು ಮೌಲ್ಯಮಾಪನ ಇವರಿಂದ ಪ್ರಾರಂಭಿಸಲಾಯಿತು:**

ಕಾರ್ಯಸೂಚಿ-1

ಮೊದಲನೆಯದಾಗಿ ಗೌರವಾನ್ವಿತ ರಾಜ್ಯಪಾಲರ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ: GS 09 KUM 2024 ದಿನಾಂಕ: 05.07.2025ರ ಪ್ರಕಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 14(4)ರ ಮೂಲಕ **ಪ್ರೊ. ಡಾ. ಐರಾನಿ ಮೊಹಮ್ಮದ್ ಖಾನ**, ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು ಇವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ನೇಮಕ ಮಾಡಲಾಗಿದ್ದು. ಅದರಂತೆ ಅವರು ದಿನಾಂಕ: 07.07.2025 ರಂದು ಕಾರ್ಯಭಾರವನ್ನು ವಹಿಸಿಕೊಂಡಿರುತ್ತಾರೆ. ಅವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದ ಸ್ವಾಗತ ಕೋರಿದರು.

**ಮಾನ್ಯ ಕುಲಪತಿಗಳು, ವಿಶ್ವವಿದ್ಯಾಲಯದ ನೂತನ ಸದಸ್ಯರಾದ ಕುಲಸಚಿವರಿಗೆ, ಜಂಟಿ ನಿರ್ದೇಶಕರು ಮತ್ತು ಪ್ರಾಚಾರ್ಯರಿಗೆ ಸ್ವಾಗತ ಕೋರಿದರು:**

ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 83 ಆಸೇವ 2025 ದಿನಾಂಕ: 02.07.2025ರ ಮೂಲಕ **ಡಾ. ಶಂಕರಪ್ಪ ವಣಿಕ್ಯಾಳ, ಕೆ.ಎ.ಎಸ್. (ಆಯ್ಕೆ ಶ್ರೇಣಿ)** ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 17(1)ರ ಅಡಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಹುದ್ದೆಗೆ ವರ್ಗಾಯಿಸಿ/ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ. ಅದರಂತೆ ದಿನಾಂಕ:08.07.2025 ರಂದು ಕಾರ್ಯಭಾರವನ್ನು ವಹಿಸಿಕೊಂಡಿರುತ್ತಾರೆ. ಅವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದ ಸ್ವಾಗತ ಕೋರಿದರು.

ಕರ್ನಾಟಕ ಸರ್ಕಾರದ ಆದೇಶದಂತೆ **ಶ್ರೀಮತಿ. ಕರೀಮುನ್ನಿಸಾ ಸೈಯ್ಯದ್**, ಇವರನ್ನು ಜಂಟೀ ನಿರ್ದೇಶಕರು, ಧಾರವಾಡ ಹುದ್ದೆಗೆ ನಿಯೋಜನೆಗೊಂಡಿರುತ್ತಾರೆ. ಇವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(b)ರ ಅಡಿಯಲ್ಲಿ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿರುತ್ತಾರೆ. ಅವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದ ಸ್ವಾಗತ ಕೋರಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತೆಯ ಅನುಗುಣವಾಗಿ **ಡಾ ಲಿಂಗರಾಜ ಸಿ. ಮುಳ್ಳಳ್ಳಿ**, ಪ್ರಾಚಾರ್ಯರು, ಕೆ.ಎಲ್.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ ಇವರನ್ನು ಮಾನ್ಯ ಕುಲಪತಿಗಳ ಆದೇಶದಂತೆ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿರುತ್ತಾರೆ. ಅವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದ ಸ್ವಾಗತ ಕೋರಿದರು.



ಕುಲಸಚಿವರು

ಕುಲಪತಿಗಳು

**ಮಾನ್ಯ ಕುಲಪತಿಗಳು ಸೇವೆಯಿಂದ ಬಿಡುಗಡೆಯಾದ ಸದಸ್ಯರುಗಳಿಗೆ ವಂದನೆ ತಿಳಿಸಿದರು:**

ಗೌರವಾನ್ವಿತ ರಾಜ್ಯಪಾಲರ ಕಾರ್ಯಾಲಯದ ಅಧಿಸೂಚನೆ ದಿನಾಂಕ: 15.05.2025ರ ಮೂಲಕ **ಡಾ. ಆರ್. ಎಲ್. ಹೈದ್ರಾಬಾದ್**, ಹಿರಿಯ ಪ್ರಾಧ್ಯಾಪಕರು & ಡೀನರು, ವಾಣಿಜ್ಯ ನಿಖಾಯ, ವಾಣಿಜ್ಯ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪರಿಚ್ಛೇದ 16(2)ರ ಅಡಿಯಲ್ಲಿ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳೆಂದು ನೇಮಕಗೊಂಡು, ದಿನಾಂಕ: 06.07.2025ರ ವರೆಗೆ ಕಾರ್ಯನಿರ್ವಹಿಸಿರುತ್ತಾರೆ. ಸದರಿಯವರಿಗೆ ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಸಚಿವರಾದ **ಡಾ. ಎ. ಚನ್ನಪ್ಪ**, ಕೆ.ಎ.ಎಸ್. ಇವರನ್ನು ಕರ್ನಾಟಕ ಸರಕಾರದ ಆದೇಶದ ದಿನಾಂಕ:18.06.2025 ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪರಿಚ್ಛೇದ 17(1)ರ ಅಡಿ ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವರೆಂದು ವರ್ಗಾವಣೆಗೊಂಡಿರುತ್ತಾರೆ. ಅವರಿಗೂ ಕೂಡ ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

**ಡಾ. ಪ್ರಕಾಶ ಎಚ್. ಹೊಸಮನಿ**, ಜಂಟೀ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಿನಿ ವಿಧಾನ ಸೌದ, ಧಾರವಾಡ ಇವರು ದಿನಾಂಕ:30.06.2025 ರಂದು ಸೇವೆಯಿಂದ ನಿವೃತ್ತಿ ಹೊಂದಿದ ಪ್ರಯುಕ್ತ, ಅವರಿಗೂ ಕೂಡ ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

**ಡಾ. ಡಿ. ಸಿ. ಮಠ**, ಪ್ರಾಚಾರ್ಯರು & ಸಿಂಡಿಕೇಟ ಸದಸ್ಯರು ಇವರು ದಿನಾಂಕ: 30.06.2025 ರಂದು ಸೇವೆಯಿಂದ ನಿವೃತ್ತಿ ಹೊಂದಿದ ಪ್ರಯುಕ್ತ, ಅವರಿಗೂ ಕೂಡ ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

-

-

-

-

ಕುಲಸಚಿವರು



ಕುಲಪತಿಗಳು

ಸಭೆಯ ಕಲಾಪವನ್ನು ಪ್ರಾರಂಭಿಸಿ, ದಿನಾಂಕ 25.02.2025, 01.03.2025 ಮತ್ತು 29.03.2025 ರಂದು ಜರುಗಿದ ಸಿಂಡಿಕೇಟ ಸಭೆಗಳ ನಿರ್ಣಯಗಳಿಗೆ ಕೈಗೊಂಡ ಸಂಕ್ಷಿಪ್ತ ವರದಿ.

| ಅ. ನಂ. | ವಿಷಯ |
|---|---|

1) ದಿನಾಂಕ 25.02.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ಎಲ್ಲ ನಡಾವಳಿಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಸಂಕ್ಷಿಪ್ತ ವರದಿಯನ್ನು ವಿವರಿಸಲಾಗಿ, ಅವುಗಳ ಪೈಕಿ ಈ ಕೆಳಗಿನ ನಿರ್ಣಯಗಳನ್ನು ತಿದ್ದುಪಡೆಗೊಳಿಸಲಾಯಿತು.

| ಅ.ಕ್ರ. | ನಿರ್ಣಯ | ತೆಗೆದುಕೊಂಡ ಕ್ರಮಗಳು | ತಿದ್ದುಪಡಿ ಮಾಡಬೇಕಾದ ಕ್ರಮಗಳು |
|---|---|---|---|
| 6 | ಮುದ್ರಣಾಲಯದಲ್ಲಿರುವ HMT 36R Double Offset Printing Machine & HMT SOM 125 Single Deny ಮುದ್ರಣ ಯಂತ್ರಗಳನ್ನು buyback ಮಾಡಿ ಹೊಸ Single Colour Sheetfed Single Dummy Offset Printing Machine ನ್ನು CPSE, e-GeM ಮುಖಾಂತರ ಖರೀದಿಸುವ ವಿಷಯವಾಗಿ ದೊಡ್ಡ ಖರೀದಿ ಸಮಿತಿ ಕೈಗೊಂಡ ನಿರ್ಣಯವನ್ನು ಹಾಗೂ Buyback ಮಾಡುವಾಗ life Certificate ನ ಪ್ರತಿಯನ್ನು ಲಗತ್ತಿಸಲು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. | ಸಿಂಡಿಕೇಟ್ ನಿರ್ಣಯದಂತೆ, ಮುದ್ರಣಾಲಯದಲ್ಲಿರುವ HMT 36R Double Offset Printing Machine & HMT SOM 125 Single Demy ಮುದ್ರಣ ಯಂತ್ರಗಳನ್ನು Buy-back ಮಾಡಿ ಹೊಸ Single Colour Sheetfed Single Dummy Offset Printing Machine CPSE, e-GEM ಮುಖಾಂತರ 01 ಬಾರಿ ಟೆಂಡರ ಕರೆಯಲಾಗಿತ್ತು. ಆದರೆ, ಯಾವ ಸಂಸ್ಥೆಯವರು ಭಾಗವಹಿಸಿರುವುದಿಲ್ಲ. ಮುಂದುವರೆದು, ಸದರಿ ಪ್ರಕ್ರಿಯೆಯನ್ನು ಮುಂಬರುವ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು. | ದಿನಾಂಕ 31.7.2025ರಂದು ನಡೆದ ಕ್ರಮ ಕೈಗೊಂಡ ವರದಿಯನ್ನು ಪರಿಶೀಲಿಸಲಾಗಿ ಮುದ್ರಣಾಲಯದಲ್ಲಿರುವ HMT 36R Double Offset Printing Machine & HMT SOM 125 Single Demy ಮುದ್ರಣ ಯಂತ್ರಗಳನ್ನು Buy-back ಮಾಡಿ ಹೊಸ Single Colour Sheetfed Single Dummy Offset Printing Machine CPSE, ಟೆಂಡರ ಮುಖಾಂತರ ಖರೀದಿಸಲು ಸಿಂಡಿಕೇಟ ಸಭೆಯು ನಿರ್ಣಯಿಸಲಾಯಿತು |
| 10 | ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ. ಶ್ಯಾಮ್ ಡಿ. ಮಲ್ಲನಗೌಡರ, ಇವರು ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಿದಾಗ, ಈ ವಿಷಯವಾಗಿ ಸಭೆಯಲ್ಲಿ ಸ್ಥಾನಿಕ ಅಭಿಯಂತರರ ಕಾರ್ಯ ವೈಖರಿಯು ತೃಪ್ತಿಕರವಾಗಿಲ್ಲವೆಂದು ಗಂಭೀರವಾಗಿ ಅಸಾಮಾಧಾನ ವ್ಯಕ್ತಪಡಿಸಿ ಅವರನ್ನು ಬದಲಾವಣೆ ಮಾಡುವ ಕುರಿತು ಸರ್ಕಾರಕ್ಕೆ ತಿಳಿಸಲು ಸಿಂಡಿಕೇಟ್ ಸಭೆಯು | ಸಿಂಡಿಕೇಟ್ ನಿರ್ಣಯದಂತೆ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ಚರಾಸ್ಥಿ ಮತ್ತು ಸ್ಥಿರಾಸ್ತಿಗಳ ದಾಖಲಾತಿಗಳನ್ನು ಸಂಗ್ರಹಿಸಿ ಅವುಗಳ ರಕ್ಷಣೆ ಮತ್ತು ನ್ಯಾಯಯುತ ಬಳಕೆಗಾಗಿ ಪ್ರಸ್ತುತವಾಗಿ ಖಾಸಗಿ ಸರ್ವೇದಾರರಿಂದ ಸರ್ವೇ ಮಾಡಿಸಿ ಆಸ್ತಿ ದಾಖಲೆಗಳನ್ನು ಪಟ್ಟಿ ಮಾಡಲು ಮಾನ್ಯ ಕುಲಪತಿಗಳ ಆದೇಶದಂತೆ ಖಾಸಗಿ ಸರ್ವೆದಾರರಿಂದ ಕೊಟೇಶನ್ ಪಡೆಯಲಾಗಿರುತ್ತದೆ. ಅದರಂತೆ | ದಿನಾಂಕ 31.7.2025ರಂದು ನಡೆದ ಸಿಂಡಿಕೇಟ ಸಭೆಯಲ್ಲಿ ಶ್ರೀ. ಶ್ಯಾಮ್ ಡಿ. ಮಲ್ಲನಗೌಡರ, ಇವರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಶೀಲಿಸಲಾಗಿ ಕಟ್ಟಡ ವಿಭಾಗಕ್ಕೆ ಸಂಬಂಧಿಸಿದಂತೆ ಚರಾಸ್ಥಿ ಮತ್ತು ಸ್ಥಿರಾಸ್ತಿಗಳ ದಾಖಲಾತಿಗಳನ್ನು ಸಂಗ್ರಹಿಸಿ ಅವುಗಳ ರಕ್ಷಣೆ ಮತ್ತು ನ್ಯಾಯಯುತ ಬಳಕೆಗಾಗಿ ಸರ್ವೆ ಮಾಡಿಸಿ ಆಸ್ತಿ ದಾಖಲೆಗಳನ್ನು |



ಕುಲಸಚಿವರು ಕುಲಪತಿಗಳು

| ಅ. ನಂ. | ವಿಷಯ | | | |
|---|---|---|---|---|
| | | ತೀರ್ಮಾನಿಸಿತು. ಮುಂದುವರೆದು, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ದಾಖಲಾತಿಗಳನ್ನು ಸಂಗ್ರಹಿಸಿ ಅವುಗಳ ರಕ್ಷಣೆ ಮತ್ತು ನ್ಯಾಯಯುತ ಬಳಕೆಗಾಗಿ ಪ್ರಸ್ತುತವಾಗಿ ಖಾಸಗಿ ಸರ್ವೇದಾರರಿಂದ ಸರ್ವೇ ಮಾಡಿಸಿ ಆಸ್ತಿ ದಾಖಲೆಗಳನ್ನು ಪಟ್ಟಿ ಮಾಡಿ ಪ್ರತಿ ತಿಂಗಳು ಚರಾಸ್ತಿ ಮತ್ತು ಸ್ಥಿರಾಸ್ತಿ ಸಮಿತಿಯ ಮುಂದೆ ಮಂಡಿಸಿ ಪ್ರತಿ ಸಿಂಡಿಕೇಟ್ ಸಭೆಗೆ ಸಲ್ಲಿಸಲು ಸಭೆಯು ನಿರ್ಣಯಿಸಿತು. | ಹಿರಿಯ ವೈಜ್ಞಾನಿಕ ಅಧಿಕಾರಿ ಕಲಬುರಗಿ ಇವರಿಗೆ ಪತ್ರ ಬರೆದಿದ್ದು ಅವರಿಂದ ಯಾವುದೇ ಉತ್ತರ ಬಂದಿರುವುದಿಲ್ಲ. | ಪಟ್ಟಿ ಮಾಡಿ ಮಂಡಿಸಲು ಆದಷ್ಟು ಬೇಗನೆ ಕ್ರಮಕೈಗೊಳ್ಳುವುದು. ಮುಂದುವರೆದು, ಪ್ರಸ್ತುತವಾಗಿ ಸ್ಥಾನಿಕ ಅಭಿಯಂತರರ ಕಾರ್ಯ ವೈಖರಿಯು ತೃಪ್ತಿಕರವಾಗಿಲ್ಲವೆಂದು ತಿಳಿಸಿರುವುದರ ಪ್ರಯುಕ್ತ ಸದರಿ ವಿಷಯದ ಕುರಿತು ಸ್ಥಾನಿಕ ಅಭಿಯಂತರರಿಗೆ ನೋಟಿಸ ಜಾರಿ ಮಾಡಿ ಅವರಿಂದ ವಿವರಣೆ ಪಡೆದು ಮುಂದಿನ ಸಿಂಡಿಕೇಟ ಸಭೆಗೆ ಮಂಡಿಸಲು ತಿರ್ಮಾನಿಸಿತು. |
| | 11 | ಧಾರವಾಡ ತಾಲೂಕು ಸಪ್ತಾಪುರ ಗ್ರಾಮದ ರಿ.ಸ.ನಂ.118/1 ನ್ನೊಳಗೊಂಡ ಕ್ಷೇತ್ರ 4 ಎಕರೆ 00 ಗುಂಟೆ ಜಮೀನಿನ ಭೂಸ್ವಾಧೀನ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ WP ನಂ:105012/2022 ಅ/ತಿ 106813/2022 and 101056/2024 ರಲ್ಲಿ ಶ್ರೀ. ರಮೇಶ ಡಿ. ಕುಲಕರ್ಣಿ ಇವರು ರಿಟ್ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ ಶ್ರೀ. ಕೆ.ಎಲ್. ಪಾಟೀಲ, ವಕೀಲರು, ಧಾರವಾಡ ಇವರು ದಿ: 18-02-2025 ರ ಪತ್ರದಲ್ಲಿ ಶ್ರೀ. ಎಸ್.ಎಸ್. ನಾಗಾನಂದ, ಹಿರಿಯ ವಕೀಲರು, ಧಾರವಾಡ ಇವರನ್ನು ನಿಯೋಜಿಸುವ ಕುರಿತು ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯಲ್ಲಿ | ಸಿಂಡಿಕೇಟ್ ನಿರ್ಣಯದಂತೆ, ಕಚೇರಿ ಪತ್ರ ಸಂಖ್ಯೆ: ಕವಿವಿ/ಕಟ್ಟಡ/ವಿಬಿಕೆ/2024-25/824 ದಿನಾಂಕ: 22.03.2025 ರಂದು ಶ್ರೀ. ಕೆ. ಎಲ್. ಪಾಟೀಲ, ವಕೀಲರು, ಧಾರವಾಡ ಇವರಿಗೆ ಪತ್ರ ಬರೆದು ಕ್ರಮ ಜರುಗಿಸಲಾಗಿದೆ. | ದಿನಾಂಕ 31.7.2025ರಂದು ನಡೆದ ಸಿಂಡಿಕೇಟ ಸಭೆಯಲ್ಲಿ ಸದರಿ ನಿರ್ಣಯಕ್ಕೆ ಸಂಬಂದಪಟ್ಟಂತೆ ಮರು ಪರಿಶೀಲಿಸಿ ಈಗಾಗಲೇ ನಿವೃತ್ತಿ ಹೊಂದಿರುವ ಶ್ರೀ.ಎಮ್.ಕೆ.ಅಂಗಡಿ ಇವರು ಕಟ್ಟಡ ವಿಭಾಗದಲ್ಲಿ ನಿರ್ವಹಿಸಿದ ಕಾರ್ಯಾಬಾರದ ದಾಖಲೆಗಳನ್ನು ಹಸ್ತಾಂತರಿಸಿದ ಮತ್ತು ಅವರಿಂದ ದಾಖಲೆಗಳನ್ನು ಪಡೆದ ಸಿಬ್ಬಂದಿಗಳಿಂದ ವಿವರಣೆ ಪಡೆದು ತಕ್ಷಣ ವರದಿಯನ್ನು ಆಡಳಿತಾಧಿಕಾರಿಗಳ ಗಮನಕ್ಕೆ ತರಬೇಕೆಂದು ಸಿಂಡಿಕೇಟ ಸಭೆಯು ನಿರ್ಣಯಿಸಿತು.<br>ಮುಂದುವರೆದು ಸದರಿಯವರು ಸ್ವವಿಸ್ತಾರವಾಗಿ ಕಾರ್ಯಾಬಾರವನ್ನು ನೀಡದೆ ಇದ್ದಲ್ಲಿ ಅವರ ನಿವೃತ್ತಿ ವೇತನವನ್ನು ತಡೆಹಿಡಿಯಲು ಕ್ರಮ ಜರುಗಿಸುವಂತೆ ಸ್ಥಾನಿಕ ಅಭಿಯಂತರರಿಗೆ ಸೂಚಿಸಲಾಯಿತು. |



ಕುಲಸಚಿವರು ಕುಲಪತಿಗಳು

| ಅ. ನಂ. | ವಿಷಯ | | | |
|---|---|---|---|---|
| | | ಚರ್ಚಿಸಿ ಅನುಮೋದಿಸಿತು. ಮುಂದುವರೆದು, ಸ್ಥಾನಿಕ ಅಭಿಯಂತರರು ಇದೇ ರೀತಿಯ ಸಮಸ್ಯೆಗಳಿರುವ ಪ್ರಕರಣಗಳ ಪಟ್ಟಿ ಮಾಡಿ ಸಿಂಡಿಕೇಟ್ ಸಭೆಗೆ ವಿವರಗಳೊಂದಿಗೆ ಕಲಂ ಮಂಡಿಸಬೇಕೆಂದು ನಿರ್ಣಯಿಸಿತು. | | |
| | 20 | ಡಾ.(ಶ್ರೀಮತಿ). ಅನಿತಾ ಎನ್. ಹಾಲಮತ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರ ವೈದ್ಯಕೀಯ ಚಿಕಿತ್ಸೆಯ ಬಿಲ್ಲಿನ ವೆಚ್ಚ ಸಿ.ಜಿ.ಎಚ್.ಎಸ್. ದರಪಟ್ಟಿ ನಂ.1198 ರ ಅನುಸಾರ ದಿನಾಂಕ.12.12.2024. ರಂದು ನಡೆದ ವೈದ್ಯಕೀಯ ಮಂಡಳಿ ಸಭೆಯಲ್ಲಿ ಮಂಜೂರಾದ ರೂ.1,26,500/- ಗಳನ್ನು ಮರು ಪಾವತಿಸುವ ವಿಷಯವನ್ನು ಪರಿಶೀಲಿಸಿ ಅನುಮೋದಿಸಿತು. | ಸಿಂಡಿಕೇಟ್ ನಿರ್ಣಯದಂತೆ, ಸದರಿಯವರ ಬಿಲ್ಲನ್ನು ಮಂಜೂರು ಮಾಡಲು ಆದೇಶಿಸಲಾಗಿದೆ. | ದಿನಾಂಕ 31.7.2025ರಂದು ನಡೆದ ಸಿಂಡಿಕೇಟ ಸಭೆಯಲ್ಲಿ ಇನ್ನು ಮುಂದೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ವಿಷಯವನ್ನು ಮರುಪರಿಶೀಲಿಸಿ ವಿಶ್ವವಿದ್ಯಾಲಯದ ಎಲ್ಲ ಶಿಕ್ಷಕ/ ಶಿಕ್ಷಕೇತರ ಸಿಬ್ಬಂದಿಗಳಿಗೆ ಅರೋಗ್ಯ ವಿಮೆಯನ್ನು ಜಾರಿಗೊಳಿಸಲು ಹಣಕಾಸು ಆಧಿಕಾರಿಗಳಿಗೆ ಮುಂದಿನ ಕ್ರಮ ವಹಿಸುವಂತೆ ನಿರ್ಣಯಿಸಿತು. |
| | 2) ದಿನಾಂಕ 01.03.2025ರ ವಿಶೇಷ ಸಿಂಡಿಕೇಟ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. | | | |
| | 3) ದಿನಾಂಕ 29.03.2025ರ ವಿಶೇಷ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಕೈಗೊಂಡ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. | | | |

-

-

-

-

-

ಕುಲಸಚಿವರು

ಕುಲಪತಿಗಳು

| ಕಾರ್ಯಸೂಚಿ ಸಂಖ್ಯೆ | 1) | ವಿಷಯ: | **ದಿನಾಂಕ 12 & 13 ಮೇ 2025 ರಂದು ಜರುಗಿದ ಸಿಂಡಿಕೇಟ ಸಭೆಯ ನಡಾವಳಿಗಳನ್ನು ದೃಢೀಕರಿಸುವಾಗ ಈ ಕೆಳಗಿನ ನಿರ್ಣಯಗಳನ್ನು ತಿದ್ದುಪಡಿ ಮಾಡಿ, ಸಭೆಯ ಇನ್ನುಳಿದ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.** |
|---|---|---|---|

| ಠರಾವು ಸಂಖ್ಯೆ | ದಾಖಲಾದ ನಿರ್ಣಯ | ತಿದ್ದುಪಡಿ ಮಾಡಿದ ನಿರ್ಣಯ |
|---|---|---|
| 4 | ವಿಶ್ವವಿದ್ಯಾಲಯಗಳ ವಿವಿಧ ವಿಭಾಗಳಿಂದ ಸ್ವೀಕೃತವಾದ ನಿಯಮಗಳು/ ಅನುಶಾಸನಗಳು/ ಪರಿನಿಯಮಗಳು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ ಸ್ವೀಕೃತವಾದ ನಿಯಮಗಳು/ ಅನುಶಾಸನಗಳು/ ಪರಿನಿಯಮಗಳು ಒಟ್ಟು 792 ಪುಟಗಳಾಗಿದ್ದು, ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಸಲುವಾಗಿ ಸುಧೀರ್ಘವಾಗಿ ಚರ್ಚಿಸಲಾಗಿ, ಕರ್ನಾಟಕ ಸರ್ಕಾರದ ಭಾಷಾಂತರ ನಿರ್ದೇಶನಾಲಯ ಬೆಂಗಳೂರು ಅಥವಾ ಭಾಷಾ ಸಂಸ್ಥಾನ ಮೈಸೂರು ಇವರಿಂದ ಭಾಷಾಂತರಗೊಳಿಸಲು ಪತ್ರ ವ್ಯವಹಾರ ಮಾಡಿ ಎರಡು ಸಂಸ್ಥೆಗಳಲ್ಲಿ ಯಾವುದಾದರೂ ಒಂದು ಸಂಸ್ಥೆಗೆ ವಹಿಸಲು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸಲು ಸಭೆಯು ನಿರ್ಣಯಿಸಿತು. | ವಿಶ್ವವಿದ್ಯಾಲಯಗಳ ವಿವಿಧ ವಿಭಾಗಳಿಂದ ಸ್ವೀಕೃತವಾದ ನಿಯಮಗಳು/ ಅನುಶಾಸನಗಳು/ ಪರಿನಿಯಮಗಳು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ ಸ್ವೀಕೃತವಾದ ನಿಯಮಗಳು/ ಅನುಶಾಸನಗಳು/ ಪರಿನಿಯಮಗಳು ಒಟ್ಟು 792 ಪುಟಗಳಾಗಿದ್ದು, ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಸಲುವಾಗಿ ಸುಧೀರ್ಘವಾಗಿ ಚರ್ಚಿಸಲಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಮತ್ತು ಇಂಗ್ಲೀಷ್ ವಿಭಾಗದ ಪ್ರಸ್ತುತ ಮತ್ತು ನಿವೃತ್ತ ಪ್ರಾಧ್ಯಾಪಕರುಗಳಿಂದ ಭಾಷಾಂತರಗೊಳಿಸಲು ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ ಸಭೆಯು ನಿರ್ಣಯಿಸಿತು. |
| 5 | ಶ್ರೀ. ಕೆ.ಎಂ.ಜೋಶಿ, ಕಚೇರಿ ಅಧೀಕ್ಷಕರು, ಬಿ.ಓ.ಎ ವಿಭಾಗ, ಕವಿವಿ, ಧಾರವಾಡ ಇವರು ಸಿಂಡಿಕೇಟ್ ವಿಭಾಗದ ಕಚೇರಿ ಅಧೀಕ್ಷಕರ ಹುದ್ದೆಯ ಕಾರ್ಯಭಾರವನ್ನು ಹೆಚ್ಚುವರಿಯಾಗಿ ನಿರ್ವಹಿಸಿದ್ದಕ್ಕಾಗಿ ಸರ್ಕಾರಿ ಆದೇಶ ನಂ. ಎಫ್‌ಡಿ 14 (ಇ) ಎಸ್‌ಆರ್‌ಎಸ್ 2022, ದಿನಾಂಕ: 23.09.2022 ರ ಪ್ರಕಾರ, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 32 ಮತ್ತು 68 ರಡಿಯಲ್ಲಿ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು ಸಿಂಡಿಕೇಟ ನಿರ್ಣಯಿಸಿತು. | ಶ್ರೀ. ಕೆ. ಎಂ. ಜೋಶಿ, ಕಚೇರಿ ಅಧೀಕ್ಷಕರು, ಬಿ.ಓ.ಎ ವಿಭಾಗ, ಕವಿವಿ, ಧಾರವಾಡ ಇವರು ಸಿಂಡಿಕೇಟ್ ವಿಭಾಗದ ಕಚೇರಿ ಅಧೀಕ್ಷಕರ ಹುದ್ದೆಯ ಕಾರ್ಯಭಾರವನ್ನು ಹೆಚ್ಚುವರಿಯಾಗಿ ನಿರ್ವಹಿಸಿದ್ದಕ್ಕಾಗಿ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು ಸದರಿಯವರು ನಿರ್ವಹಿಸಿದ ಅಧೀಕ್ಷಕ ಹುದ್ದೆ ಸಮಾನಾಂತರ ಇರುವುದರಿಂದ ಸಿಟಿಸಿ ಪಡೆಯುವ ಮತ್ತು ಕೊಡುವ ಹುದ್ದೆ ಅಲ್ಲವಾದ್ದರಿಂದ ಈ ವಿಭಾಗವನ್ನು ಹೆಚ್ಚುವರಿ ಮೇಲ್ವಿಚಾರಣೆ ಮಾಡಿರುವುದರಿಂದ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ಸಭೆಯ ನಿರ್ಣಯಿಸಿತು. |



ಕುಲಸಚಿವರು

ಕುಲಪತಿಗಳು

| | | | | | |
|---|---|---|---|---|---|
| | | | 10 | ದಿನಾಂಕ 02-09-2022 ರಂದು ಜರುಗಿದ ಸಿಂಡಿಕೇಟ್ ಸಭೆಯ ಸಂಖ್ಯೆ 18ರಲ್ಲಿ "ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕಟ್ಟಡದ ಆವರಣದಲ್ಲಿ ಹಲವಾರು ಸಂಘಟನೆಗಳು ವಿವಿಧ ಬೇಡಿಕೆಗಳಿಗಾಗಿ ಧರಣಿಯನ್ನು ನಡೆಸುತ್ತಿರುವುದರಿಂದ ದಿನನಿತ್ಯದ ಕಛೇರಿ ಕೆಲಸಕ್ಕೆ ಅಡಚಣೆ ಉಂಟಾಗುತ್ತದೆ. ಆದ್ದರಿಂದ ಸದರಿ ಆಡಳಿತ ಕಚೇರಿಯ ಆವರಣದಲ್ಲಿ ಮುಷ್ಕರಗಳನ್ನು ನಿಷೇಧಿಸಲಾಗಿದೆ ಎಂದು ಹಾಗೂ ಮುಷ್ಕರ ಅವಶ್ಯವಿದ್ದಲ್ಲಿ ಆಡಳಿತ ಕಟ್ಟಡದ ಎದುರುಗಡೆ ಇರುವ ಹಸಿರು ಗಾರ್ಡನನಲ್ಲಿ ನಿಗದಿಪಡಿಸಲಾಗಿದೆ ಎಂದು ಆಡಳಿತ ಮಂಡಳಿಯು ಒಮ್ಮತದಿಂದ ಠರಾಯಿಸಿತು."<br>ಸದರಿ ಠರಾವಿಗೆ ಈ ಕೆಳಕಂಡ ಅಂಶಗಳನ್ನು ಸೇರಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಲು ಸಭೆಯು ನಿರ್ಧರಿಸಿತು.<br>"ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕಟ್ಟಡದ ಆವರಣದಲ್ಲಿ ಹಲವಾರು ಸಂಘಟನೆಗಳು /ಶಿಕ್ಷಕರ ಸಂಘಟನೆಗಳು/ ವಿದ್ಯಾರ್ಥಿ ಸಂಘಟನೆಗಳು/ ಶಿಕ್ಷಕೇತರ ಸಂಘಟನೆಗಳು/ ಕಾರ್ಮಿಕ ಸಂಘಟನೆಗಳು ವಿವಿಧ ಬೇಡಿಕೆಗಳಿಗಾಗಿ ಧರಣಿಯನ್ನು ವಿಶ್ವವಿದ್ಯಾಲಯದ ಆಡಳಿತ ಕಛೇರಿಯ ಎದುರುಗಡೆ ಕೈಗೊಳ್ಳುತ್ತಿರುವುದರಿಂದ ದಿನನಿತ್ಯದ ಕಛೇರಿ ಕೆಲಸಕ್ಕೆ ಅಡಚಣೆ ಉಂಟಾಗುತ್ತದೆ, ವಿದ್ಯಾಸೌಧದಲ್ಲಿಯ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಸಮುದಾಯಕ್ಕೆ, ಸಂಶೋಧನಾ ವಿದ್ಯಾರ್ಥಿಗಳಿಗೆ, ವಿಜ್ಞಾನ ವಿಷಯದಲ್ಲಿ ಪ್ರಯೋಗ ನಿರತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಪರ ಊರಿನಿಂದ ಬರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ, ಗ್ರಂಥಾಲಯದಲ್ಲಿ ಅಧ್ಯಯನಶೀಲರಾಗಿರುವ ವಿದ್ಯಾರ್ಥಿ ಸಮುದಾಯಕ್ಕೆ ಅತೀವ ತೊಂದರೆಯಾಗುತ್ತದೆ. ಕಾರಣ, ಮುಷ್ಕರ ನಿರತರು ಮೈಕ್ ಬಳಸದೆ ಆವರಣದಲ್ಲಿಯ ಆಸ್ತಿ-ಪಾಸ್ತಿಗಳಿಗೆ ಧಕ್ಕೆ ಉಂಟು ಮಾಡದೇ ಅಶ್ಲೀಲ ಮತ್ತು ಅಸಂವಿಧಾನಿಕ ಪದಬಳಕೆಯನ್ನು ಮಾಡದೇ ಮುಷ್ಕರವನ್ನು ಕವಿವಿಯ ಮುಖ್ಯ ಬಸ್ ನಿಲ್ದಾಣ ಎದುರಗಡೆ ಇರುವ ಭದ್ರತಾ ಸಿಬ್ಬಂದಿಗಳ ಕಚೇರಿಯ ಪಕ್ಕದಲ್ಲಿ ಕೈಗೊಳ್ಳತಕ್ಕದ್ದು ಸದರಿ ಸಭೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಮಾತ್ರ ಜರುಗಿಸುವುದು. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ ವಿಶ್ವವಿದ್ಯಾಲಯವು ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ಸುತ್ತೋಲೆ ಹೊರಡಿಸಲು | ಸದರಿ ನಿರ್ಣಯಕ್ಕೆ ಮುಂದುವರೆದಂತೆ ಕವಿವಿ ಆಡಳಿತ ಕಚೇರಿ ಎದುರುಗಡೆ ಹಮ್ಮಿಕೊಳ್ಳುವ ಮುಷ್ಕರವನ್ನು ತಡೆಗಟ್ಟಲು ಹಾಗೂ ಈಗಾಗಲೇ ನಿಗದಿ ಪಡಿಸಿದ ಸ್ಥಳದಲ್ಲಿ ಮುಷ್ಕರವನ್ನು ಹಮ್ಮಿಕೊಳ್ಳಲು ಸೂಚಿಸಿದ್ದು ಅದರಂತೆ ಶಬ್ದ ಮುಕ್ತ ವಲಯ ಎಂಬ ಫಲವಕವನ್ನು ಅಳವಡಿಸಿ ಮುಂದಿನ ಕ್ರಮ ವಹಿಸಲು ಭದ್ರತಾ ಅಧಿಕಾರಿಗೆ ಹಾಗೂ ಪೋಲಿಸ ಇಲಾಖೆಗೆ ಪತ್ರವನ್ನು ಬರೆಯಲು ಸಭೆಯು ನಿರ್ಣಯಿಸಿತು. |



ಕುಲಸಚಿವರು

ಕುಲಪತಿಗಳು

| | | | | | |
|---|---|---|---|---|---|
| | | | | ತೀರ್ಮಾನಿಸಲಾಯಿತು". | |
| | | | 23 | ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರುಗಳ ಸಿಎಎಸ್ ಪದೋನ್ನತಿಯ ಅರ್ಹತಾ ದಿನಾಂಕವನ್ನು ಮರು ನಿಗದಿಪಡಿಸಲು ವಿನಂತಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಪ್ರಾಧ್ಯಾಪಕರುಗಳ ಅರ್ಹತಾ ದಿನಾಂಕವನ್ನು ಮರು ನಿಗದಿಪಡಿಸಲು, ಸದರಿ ವಿಷಯವನ್ನು ಈ ಒಂದು ಪ್ರಕರಣಕ್ಕೆ ಮಾತ್ರ ಸಿಮಿತಗೊಳಿಸಿ, ಒಂದು ಬಾರಿ ವಿಶೇಷ ಬಿಓಎ ಸಮಿತಿ ಸಭೆ ಕರೆದು ಅರ್ಹಾತಾದಾಯಕ ದಿನಾಂಕಗಳ ಕುರಿತು ಪರಿಶೀಲಿಸಿ ವರದಿ ನೀಡಲು ಕೋರುವಂತೆ ಸಭೆಯು ತಿರ್ಮಾನಿಸಿತು. | ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರುಗಳ ಸಿಎಎಸ್ ಪದೋನ್ನತಿಯ ಅರ್ಹತಾ ದಿನಾಂಕವನ್ನು ಮರು ನಿಗದಿಪಡಿಸಲು ವಿನಂತಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಪ್ರಾಧ್ಯಾಪಕರುಗಳ ಅರ್ಹತಾ ದಿನಾಂಕವನ್ನು ಮರು ನಿಗದಿಪಡಿಸುವ ವಿಷಯವನ್ನು ಪರಿಶೀಲಿಸಿ ಮಾನ್ಯ ಕುಲಪತಿಗಳು, ಕುಲಸಚಿವರು ಮತ್ತು ಸಂಬಂಧಪಟ್ಟ ನಿಖಾಯದ ಡೀನರು ಕೂಲಂಕುಷವಾಗಿ ಚರ್ಚಿಸಿ ಅಂತಿಮಗೊಳಿಸಲು ಸಿಂಡಿಕೇಟ ನಿರ್ಣಯಿಸಿತು. |
| | | | 24 | ಕರ್ನಾಟಕ ವಿಶ್ವವ್ದ್ಯಾಲಯ ಹಾಗೂ ಘಟಕ ಮಹಾವಿದ್ಯಾಲಯಗಳಲ್ಲಿರುವ ಶಿಕ್ಷಕರುಗಳು ಯಾವುದೆ ವಿಧವಾದ ಕಪ್ಪು ಪಟ್ಟಿಯಲ್ಲಿ ಸೇರಿದವರನ್ನು ವಿಶ್ವವಿದ್ಯಾಲಯ/ ಮಹಾವಿದ್ಯಾಲಯಗಳ ಬೇರೆ ಬೇರೆ ಜವಾಬ್ದಾರಿಗಳನ್ನು ನೀಡಬಾರದೆಂದು ಸಿಂಡಿಕೇಟ್ ಸಭೆಯು ತಿರ್ಮಾನಿಸಲಾಯಿತು.<br><br>ಮುಂದುವರಿದು ಪ್ರಾಚಾರ್ಯರು ವಿಜ್ಞಾನ ಮಹಾವಿದ್ಯಾಲಯ ಇವರು ಕಪ್ಪು ಪಟ್ಟಿಯಲ್ಲಿರುವ ಡಾ.ಆರ್.ಜಿ.ಕಲಕಾಂಬಕರ ಇವರಿಗೆ ನೀಡಲಾದ ರಸಾಯನಶಾಸ್ತ್ರ ವಿಬಾಗದ ಮುಖ್ಯಸ್ಥರ ಕಾರ್ಯಭಾರವನ್ನು ತಕ್ಷಣ ಹಿಂಪಡೆಯಲು ಸೂಚಿಸಿ ನಿಯಮಾನುಸಾರ ಅರ್ಹ ಶಿಕ್ಷಕರನ್ನು ಸದರಿ ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸಲು ಸಿಂಡಿಕೇಟ ಸಭೆಯು ನಿರ್ಣಯಿಸಿತು.<br><br>ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಕಪ್ಪು ಪಟ್ಟಿಯಲ್ಲಿರುವವರನ್ನು ನೇಮಗೊಳಿಸಿರುವುದು ಮತ್ತು ಪತ್ರ ಬರೆದಿರುವುದರ ಬಗ್ಗೆ ತನಿಖಾ ವರದಿಯನ್ನು 15ದಿನಗಳ ಒಳಗಾಗಿ ನೀಡಲು ಈ ಕೆಳಕಂಡ ತನಿಖಾ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.<br><br>1. ಶ್ರೀಮತಿ. ಅಂಜನಾ ಬಸನಗೌಡರ -- ಅಧ್ಯಕ್ಷರು<br>2.ಶ್ರೀ. ರಾಬರ್ಟ ದದ್ದಾಪೂರಿ -- ಸದಸ್ಯರು<br>3. ಡಾ. ಬಸವರಾಜ ಗೊರವರ -- ಸದಸ್ಯರು | ಸದರಿ ನಿರ್ಣಯಕ್ಕೆ ಮುಂದುವರೆದಂತೆ ಸಮಿತಿಯು ಈ ಹಿಂದೆ ಸೂಚಿಸಿದಂತೆ ತನಿಖಾ ವರದಿಯನ್ನು 15 ದಿನಗಳ ಬದಲಾಗಿ 31.7.2025 ರಿಂದ 20 ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸಲು ನಿರ್ಣಯಿಸಿತು. |



ಕುಲಸಚಿವರು

ಕುಲಪತಿಗಳು

| | | | | | |
|---|---|---|---|---|---|
| | | | | 4. ಉಪಕುಸಚಿವರು --- <br>ಸಿಆಸು ವಿಭಾಗ | |
| | | | 25 | ಡಾ. ಬಿ. ಎಚ್. ಗುಜಲಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ತತ್ವಶಾಸ್ತ್ರ, ಇವರನ್ನು ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಸಂಯೋಜಕರೆಂದು ನೇಮಿಸಲು ಹಾಗೂ ಕವಿವಿಯಲ್ಲಿರುವ ಉಳಿದ ಎಲ್ಲ ಪೀಠಗಳ ಸಂಯೋಜಕರನ್ನು ಈ ಕೆಳಗೆ ನಮೂದಿಸಿದ ನಿಯಮಾವಳಿಗಳ ಪ್ರಕಾರ ನೇಮಕ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಲಾಯಿತು.<br><br>**ನಿಯಮ:**<br><br>ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗದ ಕಚೇರಿ ಪತ್ರ ಸಂ. 1118 ದಿನಾಂಕ 02.06.2009 ರಂದು ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾಗಿರುವ ವಿವಿಧ ಪೀಠಗಳ ಕಾರ್ಯನಿರ್ವಹಣೆಗೆ ಏಕರೂಪ ಮಾರ್ಗದರ್ಶಿ ಸೂತ್ರಗಳನ್ನು ಅಳವಡಿಸಲಾಗಿದ್ದು, ಸದರ ಸೂತ್ರಗಳಲ್ಲಿ ಸಂಯೋಜಕರ ನೇಮಕಾತಿ ಹಾಗೂ ಕಾರ್ಯನಿರ್ವಹಣೆಗಾಗಿ ಈ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತದೆ.<br><br>a) The Coordinator for the respective Chair shall be a person of abilities eminence who has demonstrated his academic and administrative.<br>b) The Coordinator shall be appointed by the Vice-Chancellor for a period of three years. The Vice-Chancellor may get a panel of eminent persons from the experts related to the activities of the Chair.<br>c) The Coordinator shall be paid Rs. 2500 as an honorarium per month in case he is in active service and if he is retired he shall be paid Rs. 5000 per month.<br>d) Only academic and administrative abilities shall be considered for the appointment of the Coordinator.<br>e) If fresh qualified persons are appointed, subject to availability of funds in the respective budget of the Peetha/ Centre, appropriate salary with scale may be given, without any burden to the University. (say Lecturer/ Reader/ Professor etc.) | ಸದರಿ ನಿರ್ಣಯಕ್ಕೆ ಮುಂದುವರಿದಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವ ಎಲ್ಲ ಪೀಠಗಳ ಸಂಯೋಜಕರ ನೇಮಕ ಮಾಡುವ ಕುರಿತಂತೆ ಅನುಶಾಸನ ರಚಿಸಿ ಅನುಮೊದನೆ ಆಗುವವರಿಗೂ ಸಧ್ಯ ಖಾಲಿ ಇರುವ ಪೀಠಗಳ ಸಂಯೋಜಕರ ನೇಮಣೂಕಿ ಮಾಡಲು ಅರ್ಜಿಯನ್ನು ಅಹ್ವಾನಿಸಿ ವಿಶ್ವವಿದ್ಯಾಲಯದ ಶಿಕ್ಷಕರುಗಳಿಗೆ ಪ್ರಾತಿನಿದ್ಯ ನೀಡುವುದು ಒಂದು ವೇಳೆ ಲಭ್ಯವಿಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ಅಡಿಯಲ್ಲಿರುವ ಮಹಾವಿದ್ಯಾಲಯಗಳ ಶಿಕ್ಷಕರುಗಳು ಅಥವಾ ಹೊರಗಿನ ಸಂಶೋಧಕರು/ವಿಧ್ವಾಂಸರು ಆಯಾ ವಿಷಯಗಳಲ್ಲಿ ವಿಶೇಷ ಸಾಧನೆ ಮಾಡಿದ ಪರಿಣಿತರಿಗೆ ಆದ್ಯತೆ ನೀಡಲಾಗುವುದು, ಬಂದಂತಹ ಅರ್ಜಿಗಳನ್ನು ಪರಿಶೀಲಿಸಿ ಸಂದರ್ಶನವನ್ನು ಮಾಡಿ ಇಬ್ಬರು ಸಂಯೋಜಕರನ್ನು ಶಿಫಾರಸು ಮಾಡಲು ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು, ಮುಂದುವರಿದು ಸಮಿತಿಯ ವರಧಿಯಂತೆ ಮಾನ್ಯ ಕುಲಪತಿಗಳು ಸಂಬಂಧಿಸಿದ ಪೀಠಕ್ಕೆ ನೇಮಣೂಕಿ ಮಾಡಲು ಸಿಂಡಿಕೇಟ ಸಭೆಯು ನಿರ್ಣಯಿಸಿತು. |



ಕುಲಸಚಿವರು

ಕುಲಪತಿಗಳು

| | | | | | | |
|---|---|---|---|---|---|---|
| | | | 29 | ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ವಿಶ್ವವಿದ್ಯಾಲಯದ ಪ್ರಕರಣಗಳನ್ನು ಪ್ರತಿನಿಧಿಸುವ ಹೈಕೋರ್ಟ್ ವಕೀಲರುಗಳ ಪಟ್ಟಿಯಲ್ಲಿ ಶ್ರೀ. ಸಂತೋಷ ಬಿ. ಮಲಗೌಡರ ಇವರನ್ನು ಸೇರ್ಪಡಿಸುವ ಬಗ್ಗೆ ಪರಿಶೀಲಿಸಿದ ಸಿಂಡಿಕೇಟ್ ಅನುಮೋದಿಸಲಾಯಿತು. | ಸದರಿ ನಿರ್ಣಯಕ್ಕೆ ಮುಂದುವರೆದಂತೆ, ಈಗಾಗಲೇ ವಿಶ್ವವಿದ್ಯಾಲಯ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಪರಿಶಿಲನೆ ಮಾಡಲು ವಿಶ್ವವಿದ್ಯಾಲಯದ ಸಂಬಂಧಿಸಿದ ಪ್ರಕರಣಗಳನ್ನು ಪ್ರತಿನಿದಿಸುವ ವಕೀಲರನ್ನು ಸಭೆ ಕರೆದು ವಿಶ್ವವಿದ್ಯಾಲಯಕ್ಕೆ ಯಾವುದೇ ಹಾನಿ ಆಗದಂತೆ ಬೇರೆ ನ್ಯಾಯಾಲಯದಲ್ಲಿ ಪ್ರಕರಣಗಳು ವಿಫಲವಾಗದಂತೆ ನೋಡಿಕೊಳ್ಳುವಂತೆ ಸೂಚಿಸಲಾಯಿತು. ಇಲ್ಲಿಯವರೆಗೆ ವಿಶ್ವವಿದ್ಯಾಲಯವನ್ನು ಪ್ರತಿನಿದಿಸುವ ವಕೀಲರು ವಿಶ್ವವಿದ್ಯಾಲಯದ ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಿರುವ ಬಗ್ಗೆ ಸಭೆ ಕರೆದು ಎಲ್ಲ ಸಿಂಡಿಕೇಟ ಸದಸ್ಯರಿಗೆ ಬೇರೆ ವಕೀಲರ ಹೆಸರನ್ನು ತಿಳಿಸಲು ಈ ಕುರಿತು ಎಲ್ಲ ವಕೀಲರ ಸಮಗ್ರ ಯಾದಿಯನ್ನು ತಯಾರಿಸಲು ಸಿಂಡಿಕೇಟ ಸಭೆಯು ನಿರ್ಣಯಿಸಿತು.<br><br>ಮುಂದುವರೆದು, ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ, ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ದಾವೆಗಳ ಮೇಲ್ವಿಚಾರಣೆಗಾಗಿ Court Case Monitioring System (CCMS) ಒಬ್ಬ ಸಮನ್ವಯ ಅಧಿಕಾರಿಯನ್ನು (Nodal Officer) ನೇಮಿಸಲು ಸಿಂಡಿಕೇಟ ಸಭೆಯು ನಿರ್ಣಯಿಸಿತು. | |
| | | | 30 | ದಿನಾಂಕ 9.5.2025ರಂದು ಜರುಗಿದ ಪ್ರಕಟಣಾ ಸಮಿತಿಯ ವರದಿಯಂತೆ ಗೌರವ ಸಂಭಾವನೆ, ಉಪನ್ಯಾಸ ಭತ್ಯೆ, ದಿನ ಭತ್ಯೆ ವಾಹನ ಬಾಡಿಗೆ ಭತ್ಯೆ, ಹೆಚ್ಚಿಸುವ ಕುರಿತು ಸಿಂಡಿಕೇಟ ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು. | ದಿನಾಂಕ 9.5.2025ರಂದು ಜರುಗಿದ ಪ್ರಕಟಣಾ ಸಮಿತಿಯ ವರದಿಯಂತೆ ಗೌರವ ಸಂಭಾವನೆ, ಉಪನ್ಯಾಸ ಭತ್ಯೆ, ದಿನ ಭತ್ಯೆ ವಾಹನ ಬಾಡಿಗೆ ಭತ್ಯೆ, ಹೆಚ್ಚಿಸುವ ಕುರಿತು ಸರ್ಕಾರದ ಸುತ್ತೋಲೆಯಂತೆ ಪರಿಶೀಲಿಸಿ ಮುಂದಿನ ಸಿಂಡಿಕೇಟ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಲಾಯಿತು. | |



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 2) **ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ನೇರನೇಮಕಾತಿ ಹಾಗೂ ಬೋಧಕ ಸಿಬ್ಬಂದ್ದಿಗಳ ಪದೋನ್ನತಿಗಾಗಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ತೆ (Sitting fees) ಅನುಕೂಲ ಸೌಕರ್ಯ (Conveyance allowance) ಹಾಗೂ ಸ್ವಂತ ವಾಹನ/ ಬಾಡಿಗೆ ವಾಹನದ ಪ್ರತಿ ಕಿ.ಮೀ. ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ಪಾವತಿ ಮಾಡುವ ಸಂಬಂಧವಾಗಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಸಿದ್ಧಪಡಿಸಿದ ಕರಡು ಅನುಶಾಸನವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ಬೋಧಕ ಸಿಬ್ಬಂದಿಗಳ ನೇರನೇಮಕಾತಿ ಹಾಗೂ ಪದೋನ್ನತಿಗಾಗಿ Career Advancement Scheme (CAS) ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ರಾಜ್ಯಪಾಲರ ನಾಮಾಂಕಿತರು ಹಾಗೂ ಬಾಹ್ಯ ವಿಷಯ ಪರಿಣಿತರಿಗೆ ಆಸನ ಭತ್ತೆ (Sitting fees), ಅನುಕೂಲ ಸೌಕರ್ಯ (Conveyance allowance), ಪ್ರತಿ ಕಿ.ಮಿ ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಪಾವತಿಸುವುದು ಅವಶ್ಯವಿರುತ್ತದೆ.

ನೇರನೇಮಕಾತಿ ಹಾಗೂ ಪದೋನ್ನತಿಗಾಗಿ Career Advancement Scheme (CAS) ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ರಾಜ್ಯಪಾಲರ ನಾಮಾಂಕಿತರು ಹಾಗೂ ಬಾಹ್ಯ ವಿಷಯ ಪರಿಣಿತರಿಗೆ ಆಸನ ಭತ್ತೆ (Sitting fees), ಅನುಕೂಲ ಸೌಕರ್ಯ(Conveyance allowance), ಪ್ರತಿ ಕಿ.ಮಿ ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ಪಾವತಿ ಮಾಡುವ ಸಂಬಂಧವಾಗಿ ಲೆಕ್ಕ ತಪಾಸಣೆಯ ವೇಳೆಯಲ್ಲಿ ಅನುಶಾಸನ ರಚಿಸದೇ ಆಸನ ಭತ್ತೆ ಪಾವತಿ ಮಾಡಿರುವುದನ್ನು ಸನ್ 2017–18ನೇ ಸಾಲಿನಲ್ಲಿ ಲೆಕ್ಕ ಪರಿಶೋಧಕರು ಆಕ್ಷೇಪಣೆ ಮಾಡಿರುತ್ತಾರೆ.

ಆದ್ದರಿಂದ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ಬೋಧಕ ಸಿಬ್ಬಂದಿಗಳ ನೇರನೇಮಕಾತಿ ಹಾಗೂ ಪದೋನ್ನತಿಗಾಗಿ Career Advancement Scheme (CAS) ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ರಾಜ್ಯಪಾಲರ ನಾಮಾಂಕಿತರು ಹಾಗೂ ಬಾಹ್ಯ ವಿಷಯ ಪರಿಣಿತರಿಗೆ ಕಾಲಕಾಲಕ್ಕೆ ಚಾಲ್ತಿಯಲಿರುವ ನಿಯಮಗಳಂತೆ ಆಸನ ಭತ್ತೆ (Sitting fees), ಅನುಕೂಲ ಸೌಕರ್ಯ (Conveyance allowance), ಪ್ರತಿ ಕಿ.ಮಿ ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ಪಾವತಿ ಮಾಡುವ ಸಂಬಂಧವಾಗಿ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಸಿದ್ಧಪಡಿಸಿದ ಕರಡು ಅನುಶಾಸನವನ್ನು ಹಣಕಾಸು ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯಲ್ಲಿ ಈ ಕೆಳಗಿನಂತೆ ಠರಾಯಿಸಲಾಗಿರುತ್ತದೆ.

**ಹಣಕಾಸು ಸಮಿತಿ ಕಲಂ ಸಂಖ್ಯೆ: 3 ದಿನಾಂಕ: 20.12.2024**

**ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ನೇರನೇಮಕಾತಿ ಹಾಗೂ ಬೋಧಕ ಸಿಬ್ಬಂದ್ದಿಗಳ ಪದೋನ್ನತಿಗಾಗಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ತೆ (Sitting fees) ಅನುಕೂಲ ಸೌಕರ್ಯ (Conveyance allowance) ಹಾಗೂ ಸ್ವಂತ ವಾಹನ/ ಬಾಡಿಗೆ ವಾಹನದ ಪ್ರತಿ ಕಿ.ಮಿ ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ಪಾವತಿ ಮಾಡುವ ಸಂಬಂಧವಾಗಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಸಿದ್ಧಪಡಿಸಿದ ಕರಡು ಅನುಶಾಸನವನ್ನು ಹಣಕಾಸು ಸಭೆಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು.**



ಕುಲಸಚಿವರು ಕುಲಪತಿಗಳು

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ನೇರನೇಮಕಾತಿ ಹಾಗೂ ಬೋಧಕ ಸಿಬ್ಬಂದ್ದಿಗಳ ಪದೋನ್ನತಿಗಾಗಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ತೆ (Sitting fees) ಅನುಕೂಲ ಸೌಕರ್ಯ (Conveyance allowance) ಹಾಗೂ ಸ್ವಂತ ವಾಹನ/ ಬಾಡಿಗೆ ವಾಹನದ ಪ್ರತಿ ಕಿ.ಮಿ ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು (ಬೋರ್ಡಿಂಗ್ ಪಾಸ ಕಡ್ಡಾಯ) ಪಾವತಿ ಮಾಡುವ ಸಂಬಂಧವಾಗಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಸಿದ್ಧಪಡಿಸಿದ ಕರಡು ಅನುಶಾಸನವನ್ನು ಹಣಕಾಸು ಸಮಿತಿ ಕಲಂ ಸಂಖ್ಯೆ:03, ದಿನಾಂಕ: 20.12.2024ರ ಸಭೆಯಲ್ಲಿ ಒಪ್ಪಿ ಅನುಮೋದಿಸಿರುವ ಅಂಶವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಸಮಗ್ರವಾಗಿ ಪರಿಶೀಲಿಸಿ ಒಪ್ಪಿ ಅನುಮೋದಿಸಿತು.

ಈ ಮೇಲ್ಕಾಣಿಸಿದ ಠರಾವುಗಳನ್ವಯ ಕರಡು ಅನುಶಾಸನವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ನೇರನೇಮಕಾತಿ ಹಾಗೂ ಬೋಧಕ ಸಿಬ್ಬಂದ್ದಿಗಳ ಪದೋನ್ನತಿಗಾಗಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ತೆ (Sitting fees) ಅನುಕೂಲ ಸೌಕರ್ಯ (Conveyance allowance) ಹಾಗೂ ಸ್ವಂತ ವಾಹನ/ ಬಾಡಿಗೆ ವಾಹನದ ಪ್ರತಿ ಕಿ.ಮೀ. ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ಪಾವತಿ ಮಾಡುವ ಸಂಬಂಧವಾಗಿ ಈ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ಎಲ್ಲ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ಯೆ ಮತ್ತು ಸಂಯೋಜಕರು/ ನಿರ್ದೇಶಕರು/ ಮುಂತಾದವುಗಳು ಇದ್ದಲ್ಲಿ ಸದ್ಯ ಪಾವತಿಸುವ ದರಗಳನ್ನು ಪರಿಷ್ಕರಿಸಲು ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ ಸಭೆಯು ನಿರ್ಣಯಿಸಿತು.

–

–

–

–

–

–

–

–



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 3) **ವಿಷಯ–:** ಹಳೆಯ ವಿದ್ಯಾರ್ಥಿಗಳ ಸಂಘದ (Alumini) ಶುಲ್ಕ ಆಕರಣೆಯ ದರ ಕಡಿಮೆಗೊಳಿಸುವ ಹಾಗೂ ಶುಲ್ಕದ ಮೊತ್ತದಲ್ಲಿ ಕಾಲೇಜಿಗೆ ಹಂಚಿಕೆ ಮಾಡುವ ಕುರಿತಾಗಿ, ಸಿಂಡಿಕೇಟ್ ಸದಸ್ಯರಾದ ಡಾ. ಎಂ.ಡಿ.ಒಕ್ಕುಂದ ಇವರ ವಿನಂತಿಯ ಮೇರೆಗೆ ವಿದ್ಯಾವಿಷಯಕ ಪರಿಷತ್ ಸಭೆಯು ತೆಗೆದುಕೊಂಡ ನಿರ್ಣಯದ ಪರಿಶೀಲನೆ ಕುರಿತು.

**ಟಿಪ್ಪಣಿ :**

ಡಾ. ಎಂ.ಡಿ.ಒಕ್ಕುಂದ ಇವರ ದಿನಾಂಕ: 15.01.2025ರ ವಿನಂತಿ ಪತ್ರದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದ (Alumini) ಶುಲ್ಕ ಆಕರಿಸುವ ದರ ಕಡಿಮೆ ಮಾಡುವ ಹಾಗೂ ಶುಲ್ಕದ ಮೊತ್ತದಲ್ಲಿ ಕಾಲೇಜಿಗೆ ಹಂಚಿಕೆ ಮಾಡುವ ಕುರಿತಂತೆ ಪ್ರಸ್ತಾವನೆಯು ದಿನಾಂಕ: 26.04.2025 ರಂದು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯವಾಗಿರುತ್ತದೆ.

**ವಿದ್ಯಾವಿಷಯಕ ಪರಿಷತ್ ಸಭೆ ಠರಾವು ಸಂ: 10, ದಿನಾಂಕ: 26.04.2025**

ಹಳೆಯ ವಿದ್ಯಾರ್ಥಿಗಳ ಸಂಘದ (Alumni) ಶುಲ್ಕವನ್ನು ಆಕರಿಸುವ ಹಾಗೂ ಶುಲ್ಕದ ಮೊತ್ತದಲ್ಲಿ ಕಾಲೇಜಿಗೆ ಹಂಚಿಕೆ ಮಾಡುವ ಕುರಿತಾದ ಮಾನ್ಯ ಸದಸ್ಯರಾದ ಡಾ. ಎಂ.ಡಿ.ಒಕ್ಕುಂದ ಇವರ ಪ್ರಸ್ತಾವನೆಯ ವಿಷಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು

ಕರ್ನಾಟಕ ವಿಶ್ವವಿದ್ಯಾಲಯವು 2023–24ನೇ ಸಾಲಿನಿಂದ ಹಳೆಯ ವಿದ್ಯಾರ್ಥಿಗಳ ಶುಲ್ಕ (Alumni Fee) ಪ್ರತಿ ವಿದ್ಯಾರ್ಥಿಯಿಂದ ರೂ. 300/– ಗಳನ್ನು ಸಂಗ್ರಹಿಸುತ್ತಿದ್ದು ಸದರಿ ಶುಲ್ಕವನ್ನು ಕಡಿಮೆಗೊಳಿಸದೇ ಯಥಾವತ್ತಾಗಿ ಮುಂದುವರಿಸಲು ತೀರ್ಮಾನಿಸಲಾಯಿತು. ಹಾಗೂ ವಿಶ್ವವಿದ್ಯಾಲಯವು ಸಂಗ್ರಹಿಸುವ ಹಳೆಯ ವಿದ್ಯಾರ್ಥಿಗಳ ಸಂಘದ ಶುಲ್ಕದಲ್ಲಿ ಆಯಾ ಕಾಲೇಜುಗಳಿಗೆ 50% ರಷ್ಟು ಹಂಚಿಕೆ ಮಾಡುವ ವಿಷಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ತಿರಸ್ಕರಿಸಿರುವುದು.

**ಪ್ರಸ್ತಾವನೆಯ ವಿವರ:**

ದಿನಾಂಕ: 07.03.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 36ರ ಪ್ರಕಾರ 2024–25ನೇ ಶೈಕ್ಷಣಿಕ ಸಾಲಿನಿಂದ ಒಂದನೆಯ ಸೆಮಿಸ್ಟರ್ ಹಂತದಲ್ಲಿ ಪ್ರವೇಶ ಪಡೆಯುವ ಎಲ್ಲ ಸ್ನಾತಕ / ಸ್ನಾತಕೋತ್ತರ / ಪಿಎಚ್.ಡಿ / ಡಿಪ್ಲೋಮಾ / ಸರ್ಟಿಫಿಕೇಟ್ ಪದವಿ ಪ್ರತಿ ವಿದ್ಯಾರ್ಥಿಗಳಿಂದ ರೂ. 300/– ರಂತೆ ಹಳೆಯ ವಿದ್ಯಾರ್ಥಿಗಳ ಸಂಘದ ಶುಲ್ಕವೆಂದು ಆಕರಿಸಲು ನಿರ್ಣಯಿಸಿದ್ದು, ಅದರಂತೆ ಪ್ರಕ್ರಮ ಜಾರಿಯಲ್ಲಿದೆ.

ಅದರಂತೆ, ಸದರ ಡಾ. ಎಂ.ಡಿ.ಒಕ್ಕುಂದ, ಸಿಂಡಿಕೇಟ್ ಸದಸ್ಯರು ಹಾಗೂ ಪ್ರಾಚಾರ್ಯರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾಂಡೇಲಿ ಇವರ ಮನವಿಯು ದಿನಾಂಕ: 26.04.2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತಿರಸ್ಕರಿಸಲಾಗಿದೆ. ಆದ್ದರಿಂದ ಸದರಿಯವರ ಗೊತ್ತುವಳಿಯನ್ನು ಪರಿಶೀಲಿಸಲು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## <u>ನಿರ್ಣಯ</u>

**ಹಳೆಯ ವಿದ್ಯಾರ್ಥಿಗಳ ಸಂಘದ (Alumini) ಶುಲ್ಕ ಆಕರಣೆಯ ದರ ಕಡಿಮೆಗೊಳಿಸುವ ಹಾಗೂ ಶುಲ್ಕದ ಮೊತ್ತದಲ್ಲಿ ಕಾಲೇಜಿಗೆ ಹಂಚಿಕೆ ಮಾಡುವ ಕುರಿತಾಗಿ, ಸಿಂಡಿಕೇಟ್ ಸದಸ್ಯರಾದ ಡಾ. ಎಂ.ಡಿ.ಒಕ್ಕುಂದ ಇವರ ವಿನಂತಿಯ ಮೇರೆಗೆ ವಿದ್ಯಾವಿಷಯಕ ಪರಿಷತ್ ಸಭೆಯು ತೆಗೆದುಕೊಂಡ ನಿರ್ಣಯದ ಅನುಸಾರ ಸಿಂಡಿಕೇಟ ಸಭೆಯು ಈಗಾಗಲೇ ಇರುವ ಶುಲ್ಕ ರೂ.300/-ಗಳನ್ನು ಯು.ಯು.ಸಿ.ಎಮ್.ಎಸ್. ಮುಖಾಂತರ ಸಂದಾಯ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. ಮುಂದುವರೆದು ಗದಗ ಮತ್ತುಕಾರವರ ಸ್ನಾತಕೋತ್ತರ ಕೇಂದ್ರಗಳಲ್ಲಿಯು ಸಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸಭೆಯು ತಿರ್ಮಾನಿಸಲಾಯಿತು.**



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 4) **ವಿಷಯ–:** ಕವಿವಿಯ ಘಟಕ ಬಿ.ಎಡ್ ಮಹಾವಿದ್ಯಾಲಯದ ಹಾಗೂ ಎಂ.ಎಡ್ ವಿಭಾಗದ ಸಮಸ್ಯೆಗಳ ಸುಧಾರಣೆ ಕುರಿತಂತೆ ಸಮಿತಿ ನೀಡಿದ ವರದಿಯನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಮಾನ್ಯ ಕುಲಪತಿಗಳ ಆದೇಶದಂತೆ ಹಾಗೂ ಸಿಂಡಿಕೇಟ್ ನಿರ್ಣಯ ಸಂಖ್ಯೆ. 17 ರಂತೆ ವಿಶ್ವವಿದ್ಯಾಲಯದ ಘಟಕ ಬಿ.ಎಡ್ ಮಹಾವಿದ್ಯಾಲಯ ಹಾಗೂ ಎಂ.ಎಡ್ ಎರಡೂ ವಿಭಾಗಗಳ ವಿಲೀನಗೊಳಿಸುವ ವಿಷಯವನ್ನು ಹೊರತುಪಡಿಸಿ ಇನ್ನುಳಿದ ಶೈಕ್ಷಣಿಕ ಸಮಸ್ಯೆಗಳ ಸುಧಾರಣೆಗಾಗಿ ಪರಾಮರ್ಶಿಸಿ ವರದಿ ನೀಡುವ ಸಲುವಾಗಿ ಕಚೇರಿ ಆದೇಶ ಸಂಖ್ಯೆ. KU/Aca(S&T)/JS-166/BOS/B.Ed/2025-26/230, ದಿನಾಂಕ: 30.05.2025ರ ಆದೇಶದನ್ವಯ ಈ ಕೆಳಗಿನಂತೆ ಸಮಿತಿ ರಚಿಸಲಾಗಿರುತ್ತದೆ.

| | | |
|---|---|---|
| 1. | ಡಾ. ಬಸವರಾಜ ಗೊರವರ, ಸಿಂಡಿಕೇಟ್ ಸದಸ್ಯರು | ಅಧ್ಯಕ್ಷರು |
| 2. | ಶ್ರೀ ಶ್ಯಾಮ ಮಲ್ಲನಗೌಡರ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. | ಡಾ. ಶಿವಾನಂದ ನಾಯಕ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 4. | ಶ್ರೀ ಮಹೇಶ ಹುಲ್ಲನ್ನವರ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 5. | ಉಉಪಕುಲಸಚಿವರು, ಸಿಆಸು ವಿಭಾಗ | ವಿಶೇಷ ಅಹ್ವಾನಿತರು |
| 6. | ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ. ಧಾರವಾಡ | ಸಂಚಾಲಕರು |

ದಿನಾಂಕ: 02.06.2025 ಹಾಗೂ 10.06.2025 ರಂದು ಜರುಗಿದ ಸಮಿತಿ ಸಭೆಯಲ್ಲಿ ಕಾರ್ಯಸೂಚಿಗೆ ಸಂಬಂಧಿಸಿದಂತೆ ಸುದೀರ್ಘವಾಗಿ ಚರ್ಚಿಸಿ ದಿನಾಂಕ: 10.06.2025 ರಂದು ನಡುವಳಿಯ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಅಧ್ಯಕ್ಷರು ಸಲ್ಲಿಸಿರುವರು. ಈ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ಸಮಿತಿಯ ವರದಿಯನ್ನು ಪರಿಶೀಲಿಸಿ ಮುಂದಿನ ಹಂತದ ಕ್ರಮದ ನಿರ್ಣಯಕ್ಕಾಗಿ ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲಗೆ ಮಂಡಿಸಲಾಯಿತು.

**ನಿರ್ಣಯ**

**ಕವಿವಿಯ ಘಟಕ ಬಿ.ಎಡ್. ಮಹಾವಿದ್ಯಾಲಯದ ಹಾಗೂ ಎಂ.ಎಡ್ ವಿಭಾಗದ ಸಮಸ್ಯೆಗಳ ಸುಧಾರಣೆ ಕುರಿತಂತೆ ರಚಿಸಲಾದ ಸಮಿತಿಯು ನೀಡಿದ ವರದಿಯಂತೆ ಕ್ರಮವಹಿಸುವುದು, ಮುಂದುವರೆದು ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಡ್ ಮಹಾವಿದ್ಯಾಲಯವು ಅನುದಾನಿತ ಮಹಾವಿದ್ಯಾಲಯವಾಗಿರುವುದರಿಂದ ಬಿ.ಎಡ್. ವಿದ್ಯಾರ್ಥಿಗಳ ಅನುಪಾತದ ಪ್ರಕಾರ 75% ವಿದ್ಯಾರ್ಥಿಗಳನ್ನು ಸರಕಾರಕ್ಕೆ ಮತ್ತು 25% ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಕ್ಕೆ ನೀಡುವಂತೆ ಸರ್ಕಾರಕ್ಕೆ ಪತ್ರವನ್ನು ಬರೆಯುಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**

–

–

–

–

–



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 5) **ವಿಷಯ**–: 2024–25 ನೇ ಸಾಲಿನ ಸ್ನಾತಕ ಪ್ರಥಮ ಸೆಮಿಸ್ಟರ್ ಕನ್ನಡ ಭಾಷೆಯ 'ಬೆಳಗು–1' ಪಠ್ಯಪುಸ್ತಕ ("ರಾಷ್ಟ್ರೀಯತೆಯ ಆಚರಣೆಯ ಸುತ್ತ" ಘಟಕ–1 ರ ನಾಲ್ಕನೆಯ ಅಧ್ಯಾಯದ ಲೇಖನ) ಸಿದ್ಧಪಡಿಸಿದವರ ಕುರಿತಂತೆ ಸತ್ಯಶೋಧನ ಸಮಿತಿಯ ನಡುವಳಿಗಳನ್ನೊಳಗೊಂಡ ಸಲ್ಲಿಸಿರುವ ವರದಿಯನ್ನು ಪರಿಶೀಲನೆ ಕುರಿತು.

**ಟಿಪ್ಪಣಿ :**

ಉದಯವಾಣಿ ಹಾಗೂ ವಿಜಯವಾಣಿ ಪತ್ರಕೆಗಳಲ್ಲಿ ಪ್ರಕಟವಾದ ಕರ್ನಾಟಕ ವಿಶ್ವವಿದ್ಯಾಲಯದ 2024–25 ನೇ ಸಾಲಿನ ಸ್ನಾತಕ ಪ್ರಥಮ ಸೆಮಿಸ್ಟರ ಕನ್ನಡ ಭಾಷೆಯ 'ಬೆಳಗು–1' ಪಠ್ಯ ಪುಸ್ತಕದಲ್ಲಿ ಇರುವ ರಾಷ್ಟ್ರ ಸಮಾಜ ಹಾಗೂ ಸಂವಿಧಾನ ವಿರೋಧಿ ಪಠ್ಯದ ಆಕ್ಷೇಪಿತ ಬರಹ ("ರಾಷ್ಟ್ರೀಯತೆಯ ಆಚರಣೆಯ ಸುತ್ತ" ಘಟಕ–1ರ ನಾಲ್ಕನೆಯ ಅಧ್ಯಾಯದ ಲೇಖನವನ್ನು) ಹಿಂಪಡೆದು ಕ್ರಮ ಕೈಗೊಳ್ಳುವಂತೆ ಶ್ರೀ. ಅರುಣ ಜೋಶಿ, ನ್ಯಾಯವಾದಿಗಳು, ಧಾರವಾಡ ಇವರ ದಿನಾಂಕ: 21.01.2025 ರ ಪತ್ರ, ಕರ್ನಾಟಕ ಕಾನೂನು ವಿದ್ಯಾರ್ಥಿಗಳ ಸಂಘ, ಧಾರವಾಡ ಇವರ ಪತ್ರ ದಿನಾಂಕ: 22.01.2025 ರನ್ವಯ ಪರಿಶೀಲಿಸಲು ದಿನಾಂಕ 22.01.2025 ರಂದು ವಿಶೇಷ ಅಭ್ಯಾಸ ಸೂಚಿ ಮಂಡಳಿ ಸಭೆ ಜರುಗಿಸಿ ಆಕ್ಷೇಪಿತ /ವಿವಾದಾತ್ಮಕ ಲೇಖನವನ್ನು ಹಿಂಪಡೆಯಲು ಸಭೆ ತೀರ್ಮಾನಿಸಿತು.

ದಿನಾಂಕ: 22.01.2025 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಎಲ್ಲ ನಿಖಾಯಗಳ ಡೀನರು, ಎನ್.ಇ.ಪಿ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ಕನ್ನಡ ಸ್ನಾತಕ ಅಭ್ಯಾಸಸೂಚಿ ಮಂಡಳಿ ಇವರನ್ನೊಳಗೊಂಡ ಸಭೆಯಲ್ಲಿ ಸದರ ರಾಷ್ಟ್ರ, ಸಮಾಜ ಹಾಗೂ ಸಂವಿಧಾನ ವಿರೋಧಿ/ ವಿವಾದಾತ್ಮಕ ಪಠ್ಯ ಬರಹಗಳನ್ನು ಒಳಗೊಂಡಿದೆ ಎಂಬ ಆಕ್ಷೇಪಣೆ ಅಂಶಗಳನ್ನು ಕೋಲಂಕಶವಾಗಿ ಪರಿಶೀಲಿಸಲು ಸಭೆ ಸೇರಿ ಸಭೆಯಲ್ಲಿ ಸದರ ವಿಷಯವನ್ನು ತಜ್ಞರಿಂದ ಪರಿಶೀಲಿಸಲು ಈ ಕೆಳಗಿನಂತೆ ವಿಷಯ ತಜ್ಞರು ಹಾಗೂ ಸಂವಿಧಾನ ತಜ್ಞರನ್ನೊಳಗೊಂಡ ಸಮಿತಿ ರಚಿಸಲು ತೀರ್ಮಾನಿಸಿತು.

1. ಡಾ. ವೀರಣ್ಣ ರಾಜೂರ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕ.ವಿ.ವಿ., (ಅಧ್ಯಕ್ಷರು)
2. ಡಾ. ಎಸ್. ಎಸ್. ಪಟಗುಂದಿ, ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಕ.ವಿ.ವಿ., (ಸದಸ್ಯರು)
3. ಡಾ. (ಶ್ರೀಮತಿ) ಶಾಂತಾ ಇಮ್ರಾಪೂರ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕ.ವಿ.ವಿ., (ಸದಸ್ಯರು)
4. ಡಾ. ರಾಜೇಂದ್ರ ನಾಯಕ, ನಿವೃತ್ತ ಭಾಷಾವಿಜ್ಞಾನ ಪ್ರಾಧ್ಯಾಪಕರು, ಕ.ವಿ.ವಿ., (ಸದಸ್ಯರು)

ದಿನಾಂಕ: 23.01.2025 ರಂದು ಮಧ್ಯಾಹ್ನ 4.00 ಗಂಟೆಗೆ ಸಿಂಡಿಕೇಟ್ ಸಭಾ ಭವನದಲ್ಲಿ ವಿಷಯ ತಜ್ಞರು ಹಾಗೂ ಸಂವಿಧಾನ ತಜ್ಞರನ್ನೊಳಗೊಂಡ ಸಮಿತಿ ಸಭೆ ಜರುಗಿಸಿ ಆಕ್ಷೇಪಿತ/ವಿವಾದಾತ್ಮಕ ಲೇಖನವನ್ನು ಕೈ ಬಿಟ್ಟು (ಹೊರತುಪಡಿಸಿ) ಬೆಳಗು –1 ಪಠ್ಯಪುಸ್ತಕವನ್ನು ಮುಂದುವರೆಸಲು ಶಿಫಾರಸ್ಸು ಮಾಡಿತು. ಅದರಂತೆ ಸದರ ವಿಷಯವನ್ನು ವಿಶೇಷ ಕಲಾ ನಿಖಾಯದ ಸಭೆಯನ್ನು ದಿನಾಂಕ: 24.01.2025 ರಂದು ಜರುಗಿಸಿ ಸಭೆಯಲ್ಲಿ ಆಕ್ಷೇಪಿತ/ವಿವಾದಾತ್ಮಕ ಲೇಖನವನ್ನು ಕೈ ಬಿಟ್ಟು (ಹೊರತುಪಡಿಸಿ) ಬೆಳಗು –1 ಪಠ್ಯಪುಸ್ತಕವನ್ನು ಮುಂದುವರೆಸಲು ಶಿಫಾರಸ್ಸು ಮಾಡಿದ ಸದರ ವಿಷಯ ತಜ್ಞರು ಹಾಗೂ ಸಂವಿಧಾನ ತಜ್ಞರನ್ನೊಳಗೊಂಡ ಸಮಿತಿ ಸಭೆ ನಿರ್ಣಯ ಹಾಗೂ ವಿಶೇಷ ಕಲಾ ನಿಖಾಯದ ಸಭೆಯ ನಿರ್ಣಯವನ್ನು ಪರಿಶೀಲಿಸಲು ದಿನಾಂಕ: 24.01.2025 ರಂದು ಜರುಗಿದ ವಿಶೇಷ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಮಂಡಿಸಲಾಗಿತ್ತು. ಸದರ ಸಭೆಯಲ್ಲಿ ಆಕ್ಷೇಪಿತ/ವಿವಾದಾತ್ಮಕ ಲೇಖನವನ್ನು ಕೈ ಬಿಟ್ಟು (ಹೊರತುಪಡಿಸಿ) ಬೆಳಗು –1 ಪಠ್ಯಪುಸ್ತಕವನ್ನು ಮುಂದುವರೆಸಲು ಶಿಫಾರಸ್ಸು ಮಾಡಿತು.

ಮುಂದುವರೆದು, ಸದರ ವಿಷಯವಾಗಿ ದಿನಾಂಕ: 24.01.2025 ರಂದು ವಿಶೇಷ ಸಿಂಡಿಕೇಟ್ ಸಭೆ ಜರುಗಿಸಿ ಸಿಂಡಿಕೇಟ್ ಸಭೆಯು ನಿರ್ಣಯ ನಂ 1. ರಲ್ಲಿ ಈ ಕೆಳಗಿನಂತೆ ಠರಾಯಿಸಿತು.



**ಕುಲಸಚಿವರು** **ಕುಲಪತಿಗಳು**

"ಇಂದಿನ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದಲ್ಲಿ 'ಬೆಳಗು -1' ಪಠ್ಯಪುಸ್ತಕದಲ್ಲಿ ಇರುವ ಆಕ್ಷೇಪಿತ/ವಿವಾದಾತ್ಮಕ ಲೇಖನವನ್ನು ("ರಾಷ್ಟ್ರೀಯತೆಯ ಆಚರಣೆಯ ಸುತ್ತ" ಘಟಕ-1ರ ನಾಲ್ಕನೆಯ ಅಧ್ಯಾಯದ ಲೇಖನವನ್ನು) ತಕ್ಷಣ ಜಾರಿಗೆ ಬರುವಂತೆ ಕೈಬಿಟ್ಟು (ಹೊರತುಪಡಿಸಿ) 'ಬೆಳಗು-1' ಪಠ್ಯಪುಸ್ತಕವನ್ನು ಮುಂದುವರೆಸಲು ವಿಶೇಷ ಅಭ್ಯಾಸಸೂಚಿ ಮಂಡಳಿಯ, ವಿಷಯ ತಜ್ಞರ ಸಭೆಯ ಮತ್ತು ವಿಶೇಷ ಕಲಾ ನಿಖಾಯದ ಸಭೆಯು ಕೈಗೊಂಡ ನಿರ್ಣಯವನ್ನು ಅವಲೋಕಿಸಿ ಒಪ್ಪಲಾಯಿತು. ಇನ್ನು ಮುಂದೆ ಈ ರೀತಿಯಾದ ಪ್ರಕರಣಗಳು ಜರುಗದಂತೆ ಎಚ್ಚರಿಕೆ ವಹಿಸಲು ಸಿಂಡಿಕೇಟ ಸಭೆಯು ಎಲ್ಲಾ ಅಭ್ಯಾಸ ಸೂಚಿ ಮಂಡಳಿಗೆ ಸೂಚಿಸಿ ಸುತ್ತೋಲೆ ಹೊರಡಿಸುವಂತೆ ನಿರ್ಣಯಿಸಿತು ಹಾಗೂ ಸದರಿ ಪಠ್ಯಪುಸ್ತಕ ಅನುಮೋದಿಸಿದ ಅಭ್ಯಾಸ ಸೂಚಿ ಮಂಡಳಿ ಮತ್ತು ಸಂಪಾದಕರಿಗೆ ವಿವರಣೆ ಕೇಳಿ ನೋಟಿಸ ನೀಡಲು ಸಭೆಯು ನಿರ್ಣಯಿಸಿತು."

ಸದರ ದಿನಾಂಕ: 24.01.2025 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಿಗೆ ಪಠ್ಯಕ್ರಮವನ್ನು ರಚಿಸುವಾಗ ಯಾವುದೇ ಆಕ್ಷೇಪಣೆ ಅಥವಾ ವಿವಾದಿತ ಲೇಖನಗಳನ್ನು, ಪುಸ್ತಕಗಳನ್ನು ಮತ್ತು ಇನ್ನಿತರ ಪ್ರಶ್ನಾರ್ಥಕ ಪಠ್ಯವನ್ನು ಆಯ್ಕೆ ಮಾಡಕೊಳ್ಳದಿರುವ ಕುರಿತು ಸುತ್ತೋಲೆ ಸಂಖ್ಯೆ. 536, ದಿನಾಂಕ: 27.01.2025 ರ ಮೂಲಕ ಸುತ್ತೋಲೆ ಹೊರಡಿಸಲಾಯಿತು. ಹಾಗೂ ಸದರಿ ಪಠ್ಯಪುಸ್ತಕ ಅನುಮೋದಿಸಿದ ಅಭ್ಯಾಸ ಸೂಚಿ ಮಂಡಳಿ ಮತ್ತು ಸಂಪಾದಕರಿಗೆ ವಿವರಣೆ ಕೇಳಿ ನೋಟಿಸ ನೀಡಲಾಯಿತು. ಅದರಂತೆ ಅಭ್ಯಾಸ ಸೂಚಿ ಮಂಡಳಿಯ ಅಧ್ಯಕ್ಷರು, ಸದಸ್ಯರು ಮತ್ತು ಸಂಪಾದಕರು ಸದರ ನೋಟಿಸಿಗೆ ವಿವರಣೆಯನ್ನು ದಿನಾಂಕ: 31.01.2025 ರಂದು ಸಲ್ಲಿಸಿದರು.. ಸದರಿಯವರುಗಳು ಸಲ್ಲಿಸಿದ ವಿವರಣೆಗಳ ಆಧಾರದ ಮೇಲೆ ವಿಶ್ವವಿದ್ಯಾಲಯದ ನಿಯಮಾನುಸಾರ ಯಾವ ಕಾನೂನಾತ್ಮಕ ಕ್ರಮ ಕೈಗೊಳ್ಳಬೇಕು ಎಂಬುದರ ಕುರಿತು ಕ.ವಿ.ವಿ. ಯ ಕಾನೂನು ಸಲಹೆಗಾರರ ಅಭಿಪ್ರಾಯಕ್ಕಾಗಿ ಕಳಿಸಲಾಗಿತ್ತು.

ಅದರಂತೆ, ಕಾನೂನು ಸಲಹೆಗಾರರು, ಕ.ವಿ.ವಿ, ಧಾರವಾಡ ಇವರು ದಿನಾಂಕ: 14.02.2025 ರ ಮೂಲಕ ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

"ನ್ಯಾಯವಾದಿಗಳು ಮತ್ತು ಸಂಘಟನೆಗಳು ಮಾಡಿದ ಆರೋಪಗಳ ಬಗ್ಗೆ ವಿಚಾರಣೆ ಮಾಡಿ ಸೂಕ್ತ ನಿರ್ಣಯ ಕೈಗೊಳ್ಳವುದು ವಿಶ್ವವಿದ್ಯಾಲಯದ ಮುಂದಿನ ನಡೆಯಾಗಿರುತ್ತದೆ. **Karnatak University Employees Classification Control & Appeal Rules-1998 (CCA)** ಅಡಿಯಲ್ಲಿ ಶಿಸ್ತು ಪ್ರಾಧಿಕಾರವು ಸಂಬಂಧಿಸಿದ ಆಪಾದನೆಗಳ ಬಗ್ಗೆ ವಿಚಾರಣೆ ಕೈಗೊಂಡು ವರದಿ ಸಲ್ಲಿಸುವ ಸಲುವಾಗಿ ವಿಷಯ ತಜ್ಞರನ್ನೊಳಗೊಂಡ ಸಮಿತಿಯನ್ನು ನೇಮಕ ಮಾಡಿ ವರದಿ ಪಡೆದುಕೊಂಡು ಮುಂದಿನ ಕ್ರಮ ಜರುಗಿಸುವುದು ಸೂಕ್ತ ಕಾನೂನು ಕ್ರಮವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ."

ಅದರಂತೆ, Karnatak University Employees Classification Control & Appeal Rules-1998 (CCA) ಅಡಿಯಲ್ಲಿ ಶಿಸ್ತು ಪ್ರಾಧಿಕಾರವು ಸಂಬಂಧಿಸಿದ ಆಪಾದನೆಗಳ ಬಗ್ಗೆ ವಿಚಾರಣೆ ಕೈಗೊಂಡು ವರದಿ ಸಲ್ಲಿಸುವ ಸಲುವಾಗಿ ಡಾ. ವೀರಣ್ಣ ರಾಜೂರ, (ನಿವೃತ್ತ) ಕನ್ನಡ ಪ್ರಾಧ್ಯಾಪಕರು, ಕ.ವಿ.ವಿ., ಧಾರವಾಡ. ಇವರ ಅಧ್ಯಕ್ಷತೆಯಲ್ಲಿ ವಿಷಯ ತಜ್ಞರನ್ನೊಳಗೊಂಡ ಸತ್ಯ ಶೋಧನ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಯಿತು.

1. ಡಾ. ವೀರಣ್ಣ ರಾಜೂರ, (ನಿವೃತ್ತ) ಕನ್ನಡ ಪ್ರಾಧ್ಯಾಪಕರು, ಕ.ವಿ.ವಿ., ಧಾರವಾಡ.
2. ಡಾ. ಎಸ್.ಎಸ್.ಪಟಗುಂದಿ, (ನಿವೃತ್ತ) ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಕ.ವಿ.ವಿ., ಧಾರವಾಡ.
3. ಡೀನರು, ಕಲಾ ನಿಖಾಯ, ಸ್ನಾತಕೋತ್ತರ ಸಂಗೀತ ಅಧ್ಯಯನ ವಿಭಾಗ, ಕ.ವಿ.ವಿ., ಧಾರವಾಡ.
4. ಡಾ. ರಾಜೇಂದ್ರ ನಾಯಕ, (ನಿವೃತ್ತ ಪ್ರಾಧ್ಯಾಪಕರು), ಭಾಷಾವಿಜ್ಞಾನ ಅಧ್ಯಯನ ವಿಭಾಗ, ಕ.ವಿ.ವಿ., ಧಾರವಾಡ.
5. ಡಾ. ಅರ್. ಅರ್. ಕುಲಕರ್ಣಿ, ಪ್ರಾಧ್ಯಾಪಕರು, ಮ್ಯಾನೇಜಮೆಂಟ್ ಅಧ್ಯಯನ ವಿಭಾಗ, ಕ.ವಿ.ವಿ., ಧಾರವಾಡ.
6. ಡಾ. (ಶ್ರೀಮತಿ) ಎ.ಎಂ. ತಾಮ್ರಗುಂಡಿ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ, ವಿಭಾಗ, ಕ.ವಿ.ವಿ., ಧಾರವಾಡ.
7. ಕಾನೂನು ಸಲಹೆಗಾರರು, ಕಾನೂನು ಕೋಶ, ಕ.ವಿ.ವಿ., ಧಾರವಾಡ.
8. ಉಪಕುಲಸಚಿವರು, ಸಂಚಾಲಕರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ., ಧಾರವಾಡ.



ಕುಲಸಚಿವರು ಕುಲಪತಿಗಳು

ಅದರಂತೆ, ಸದರ ಡಾ. ವೀರಣ್ಣ ರಾಜೂರ, (ನಿವೃತ್ತ) ಕನ್ನಡ ಪ್ರಾಧ್ಯಾಪಕರು, ಕ.ವಿ.ವಿ., ಧಾರವಾಡ. ಇವರ ಅಧ್ಯಕ್ಷತೆಯಲ್ಲಿ ವಿಷಯ ತಜ್ಞರನ್ನೊಳಗೊಂಡ ಸತ್ಯ ಶೋಧನ ಸಮಿತಿಯು ದಿನಾಂಕ: 06.03.2025 ರಂದು ಸಭೆ ಜರುಗಿಸಿ ಸಭೆಯಲ್ಲಿ ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ ಸಮಿತಿಯ ಅಧ್ಯಕ್ಷರು ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವರು. ಈ ಮುಚ್ಚಿದ ಲಕೋಟೆಯಲ್ಲಿ ಸಮಿತಿಯು ಸಲ್ಲಿಸಿದ ವರದಿಯನ್ನು ಸಲ್ಲಿಸಿದ್ದು, ಪರಿಶೀಲಿಸಿ ಮುಂದಿನ ಹಂತದ ಕ್ರಮದ ನಿರ್ಣಯಕ್ಕಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಯಿತು.

<u>ನಿರ್ಣಯ</u>

**2024-25 ನೇ ಸಾಲಿನ ಸ್ನಾತಕ ಪ್ರಥಮ ಸೆಮಿಸ್ಟರ್ ಕನ್ನಡ ಭಾಷೆಯ 'ಬೆಳಗು-1' ಪಠ್ಯಪುಸ್ತಕ ("ರಾಷ್ಟ್ರೀಯತೆಯ ಆಚರಣೆಯ ಸುತ್ತ" ಘಟಕ-1ರ ನಾಲ್ಕನೆಯ ಅಧ್ಯಾಯದ ಲೇಖನ) ಸಿದ್ಧಪಡಿಸಿದವರ ಕುರಿತಂತೆ ಸತ್ಯಶೋಧನ ಸಮಿತಿಯ ನಡುವಳಿಗಳನ್ನೊಳಗೊಂಡ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ಸಿಂಡಿಕೇಟ ಸಭೆಯು ಅನುಮೋದಿಸಿತು.**

**ಇನ್ನು ಮುಂದೆ ಇಂತಹ ಯಾವುದೇ ವಿಷಯದ ಪಠ್ಯಕೃವನ್ನು ಹೊಸದಾಗಿ ರಚಿಸಲು ನಿರ್ಧರಿಸಿದ್ದಲ್ಲಿ, ಇಂತಹ ಬಿಓಎಸ್ (ಅಭ್ಯಾಸ ಸೂಚಿ ಮಂಡಳಿಯ) ಶಿಫಾರಸ್ಸನ್ನು ಪರಿಶೀಲಿಸಿ ಪ್ರಕರಣಗಳಲ್ಲಿ ಸಾಮಾಜಿಕ, ಧಾರ್ಮಿಕ, ಭಾವನಾತ್ಮಕ ಮತ್ತು ನಕಾರಾತ್ಮಕ ಪರಿಣಾಮ ಬೀರುವುದನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲು ನಿಖಾಯದ ಡೀನರುಗಳು, ವಿಭಾಗದ ಮುಖ್ಯಸ್ಥರು ಮತ್ತು ಹಿರಿಯ ಪ್ರಾಧ್ಯಾಪಕರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. ಮುಂದುವರೆದು, ಈ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯುವಂತೆ ಸಿಂಡಿಕೇಟ ಠರಾಯಿಸಿತು.**

\-

\-

\-

\-

\-

\-

\-

\-

\-



ಕುಲಸಚಿವರು

ಕುಲಪತಿಗಳು

| | | | |
|---|---|---|---|
| **ಕಾರ್ಯಸೂಚಿ ಸಂಖ್ಯೆ** | **6)** | **ವಿಷಯ–:** | ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬರು ಸಿಂಡಿಕೇಟ ಸದಸ್ಯರ ನಾಮನಿರ್ದೇಶನ ಮಾಡುವ ಕುರಿತು. |

**ಪ್ರಸ್ತಾವನೆ:**

ಕರ್ನಾಟಕ ಸರಕಾರದ ಪತ್ರ ಸಂಖ್ಯೆ: ಇಡಿ 156 ಯುಎನ್ಇ 2025 ದಿನಾಂಕ: 29.04.2025ರ ಮೂಲಕ ಕರ್ನಾಟಕ ರಾಜ್ಯ ಗ್ರಂಥಾಲಯಗಳ ಕಾಯಿದೆ 1965 ರ ನಿಯಮ 3ರ ಉಪಬಂಧಗಳನುಸಾರ ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ರಾಜ್ಯ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸಲು ನಿಯಮವನ್ನು ಕಲ್ಪಿಸಲಾಗಿದ್ದು, ಸದರಿ ಅಧಿನಿಯಮದ ಪ್ರಕರಣ 3(2)(d) ರಲ್ಲಿ ರಾಜ್ಯದಲ್ಲಿನ ಪ್ರತಿಯೊಂದು ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಿಂದ ಆ ಸಿಂಡಿಕೇಟು ಚುನಾಯಿಸಿದ ಒಬ್ಬ ವ್ಯಕ್ತಿಯನ್ನು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಮನಿರ್ದೇಶನ ಮಾಡಿ ತಿಳಿಸುವಂತೆ ನಿರ್ದೇಶಿಸಿರುತ್ತಾರೆ.

ಅದರಂತೆ, ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಮನಿರ್ದೇಶನ ಮಾಡಲು ಒಬ್ಬರು ಸಿಂಡಿಕೇಟ ಸದಸ್ಯರನ್ನು ಚುನಾಯಿಸಿ, ಚುನಾಯಿತ ಸದಸ್ಯರ ವಿವರವನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು ಕಲಂನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಯಿತು.

**ನಿರ್ಣಯ**

**ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಶ್ರೀ.ರಾರ್ಬಟ ದದ್ದಾಪೂರಿ, ಸಿಂಡಿಕೇಟ ಸದಸ್ಯರು ಇವರನ್ನು ನಾಮನಿರ್ದೇಶನ ಮಾಡಲು ಸಿಂಡಿಕೇಟ ಸಭೆಯು ಅನುಮೋದಿಸಿತು.**

–

–

–

–

–

–

–

–



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 7)** **ವಿಷಯ-:** ಮೇ/ಜೂನ್-2025ನೇಯ ಸಾಲಿನಲ್ಲಿ ಸ್ನಾತಕೋತ್ತರ ವಿವಿಧ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣೆ:**

ಮೇ/ಜೂನ್-2025ನೇಯ ಸಾಲಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳ ಅಧಿಕಾರದ ಅವಧಿಯು ಈ ಕೆಳಗೆ ನಮೂದಿಸಿದ ದಿನಾಂಕಗಳಂದು ಕೊನೆಗೊಂಡ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8)ರ ಅಡಿಯಲ್ಲಿ, ಭೂಗೋಳಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ, ಸಂಖ್ಯಾಶಾಸ್ತ್ರ, ವಿಧಿವಿಜ್ಞಾನ & ಅಪರಾಧಶಾಸ್ತ್ರ, ಭೂಗರ್ಭಶಾಸ್ತ ಮತ್ತು ಸಂಗೀತ ಮತ್ತು ಲಲಿತ ಕಲಾ ಅಧ್ಯಯನ ವಿಭಾಗಗಳ ಜೇಷ್ಠತೆಯ ಅನುಸಾರ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದ್ಧಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತಾ ಯಾದಿಯ ಪ್ರಕಾರ ಈ ಕೆಳಕಾಣಿಸಿದ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಸ್ನಾತಕೋತ್ತರ ಭೂಗೋಳಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ, ಸಂಖ್ಯಾಶಾಸ್ತ್ರ, ವಿಧಿವಿಜ್ಞಾನ & ಅಪರಾಧಶಾಸ್ತ್ರ, ಭೂಗರ್ಭಶಾಸ್ತ ಮತ್ತು ಸಂಗೀತ ಮತ್ತು ಲಲಿತ ಕಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

| ಅ. ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ ಪ್ರಯುಕ್ತ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ಭೂಗೋಳಶಾಸ್ತ್ರ ವಿಭಾಗ | ಡಾ. ಎ.ಎ. ಮೂಲಿಮನಿ, ಹಿ.ಪ್ರಾಧ್ಯಾಪಕರು | 13.05.2025 | ಡಾ. ಎ.ಎ. ಮೂಲಿಮನಿ, ಹಿ.ಪ್ರಾಧ್ಯಾಪಕರು | 14.05.2025 | 14.05.2025 |
| 2) | ಭೌತಶಾಸ್ತ್ರ ವಿಭಾಗ | ಡಾ. ಎಮ್. ಕೆ. ರಬಿನಾಳ, ಹಿ.ಪ್ರಾಧ್ಯಾಪಕರು | 31.05.2025 | ಡಾ.(ಶ್ರೀಮತಿ). ಜಯಶ್ರೀ ಟೋನನ್ನವರ ಹಿ.ಪ್ರಾಧ್ಯಾಪಕರು | 01.06.2025 | 28.05.2025 |
| 3) | ಅರ್ಥಶಾಸ್ತ್ರ ವಿಭಾಗ | ಡಾ. ಎಚ್.ಎಚ್. ಭರಡಿ, ಪ್ರಾಧ್ಯಾಪಕರು | 17.05.2025 | ಡಾ. ಬಿ.ಎಚ್. ನಾಗೂರ, ಪ್ರಾಧ್ಯಾಪಕರು | 18.05.2025 | 16.05.2025 |
| 4) | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ | ಡಾ. ಆರ್. ಆರ್. ನಾಯಕ, ಹಿ.ಪ್ರಾಧ್ಯಾಪಕರು | 31.05.2025 | ಡಾ. ಸಿ. ಕೃಷ್ಣಮೂರ್ತಿ ಪ್ರಾಧ್ಯಾಪಕರು | 01.06.2025 | 29.05.2025 |
| 5) | ಸಂಖ್ಯಾಶಾಸ್ತ್ರ ವಿಭಾಗ | ಡಾ. ಎ.ಎಸ್. ತಳವಾರ ಹಿ.ಪ್ರಾಧ್ಯಾಪಕರು | 05.06.2025 | ಡಾ. ನಾಗೇಶ ಎಸ್., ಪ್ರಾಧ್ಯಾಪಕರು | 06.06.2025 | 03.06.2025 |
| 6) | ವಿಧಿವಿಜ್ಞಾನ & ಅಪರಾಧಶಾಸ್ತ್ರ ವಿಭಾಗ | ಡಾ. ಜಿ.ಎಸ್. ವೇಣುಮಾದವ, ಪ್ರಾಧ್ಯಾಪಕರು | 13.06.2025 | ಡಾ. ಜಿ.ಎಸ್. ವೇಣುಮಾದವ, ಪ್ರಾಧ್ಯಾಪಕರು | 14.06.2025 | 12.06.2025 |
| 7) | ಭೂಗರ್ಭಶಾಸ್ತ ವಿಭಾಗ | ಡಾ. ಎ. ಶ್ರೀನಿವಾಸ ಪ್ರಾಧ್ಯಾಪಕರು | 30.06.2025 | ಡಾ. ಎ. ಶ್ರೀನಿವಾಸ ಪ್ರಾಧ್ಯಾಪಕರು | 01.07.2025 | 30.06.2025 |
| 8) | ಸಂಗೀತ ಮತ್ತು ಲಲಿತ ಕಲಾ ವಿಭಾಗ | ಡಾ. ಎಮ್.ಎಮ್. ಅಗಡಿ, ಪ್ರಾಧ್ಯಾಪಕರು | 30.06.2025 | ಡಾ. ಎಮ್.ಎಮ್. ಅಗಡಿ, ಪ್ರಾಧ್ಯಾಪಕರು | 01.07.2025 | 30.06.2025 |

ಆದ್ದರಿಂದ, ಮೇಲ್ಕಾಣಿಸಿದಂತೆ, ಸ್ನಾತಕೋತ್ತರ ಭೂಗೋಳಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ, ಸಂಖ್ಯಾಶಾಸ್ತ್ರ, ವಿಧಿವಿಜ್ಞಾನ & ಅಪರಾಧಶಾಸ್ತ್ರ, ಭೂಗರ್ಭಶಾಸ್ತ ಮತ್ತು ಸಂಗೀತ ಮತ್ತು ಲಲಿತ ಕಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ಕುಲಸಚಿವರು

ಕುಲಪತಿಗಳು

## ನಿರ್ಣಯ

ಮೇ/ಜೂನ್-2025ನೇಯ ಸಾಲಿನಲ್ಲಿ ಸ್ನಾತಕೋತ್ತರ ಭೂಗೋಳಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ, ಸಂಖ್ಯಾಶಾಸ್ತ್ರ, ವಿಧಿವಿಜ್ಞಾನ ಮತ್ತು ಅಪರಾಧಶಾಸ್ತ್ರ, ಭೂಗರ್ಭಶಾಸ್ತ್ರ ಮತ್ತು ಸಂಗೀತ ಮತ್ತು ಲಲಿತಕಲಾ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 8) ವಿಷಯ-: ಶ್ರೀ ಆನಂದ ಈಶ್ವರ ಉರ್ಫ್ ಈಶ್ವರಪ್ಪ ಕರದಿನ್ನವರ ಇವರನ್ನು ಅನುಕಂಪದ ಆಧಾರದ ಮೇಲೆ ಸಿಪಾಯಿ (ಗ್ರೂಪ್ 'ಡಿ) ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆ ಪರಿಶೀಲಿಸುವ ಕುರಿತು.

**ಪ್ರಸ್ತಾವನೆ :**

ಶ್ರೀ ಆನಂದ ಈಶ್ವರ ಉರ್ಫ್ ಈಶ್ವರಪ್ಪ ಕರದಿನ್ನವರ, ಈ-17, ಕವಿವಿ ವಸತಿಗೃಹ, ಕವಿವಿ ಆವರಣ, ಕವಿವಿ, ಧಾರವಾಡ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಪರಿಶೀಲನೆಗೊಳಪಡಿಸಿ ಹಿಂದಿರಿಗಿಸಲು ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ ಶಿಕ್ಷಕೇತರ/12/3350 ದಿನಾಂಕ: 29.03.2025 ರ ಮೂಲಕ ಪತ್ರ ಬರೆಯಲಾಗಿತ್ತು. ಹಾಗೂ ಪ್ರಾಂಶುಪಾಲರು, ಕರ್ನಾಟಕ ಪ್ರೌಢ ಶಾಲೆ, ಕಿಲ್ಲೆ, ಧಾರವಾಡ ಇವರಿಗೆ ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರವನ್ನು ಪರಿಶೀಲನೆಗೊಳಪಡಿಸಿ ಹಿಂದಿರುಗಿಸಲು ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ಶಿಕ್ಷಕೇತರ/12/3351 ದಿನಾಂಕ: 29.03.2025 ರ ಮೂಲಕ ಪತ್ರ ಬರೆಯಲಾಗಿತ್ತು. ಅದರಂತೆ ಜಂಟಿ ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ, ಬೆಳಗಾವಿ ಡಿವಿಜನ್, ಕೋರ್ಟ ಕಂಪೌಂಡ್, ಬೆಳಗಾವಿ ಇವರ ಪತ್ರ ದಿನಾಂಕ: 07.04.2025 ರ ಮೂಲಕ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಪರಿಶೀಲನೆಗೊಳಪಡಿಸಿ ನೈಜತೆಯ ಬಗ್ಗೆ ದೃಢೀಕರಿಸಿ ಮತ್ತು ಪ್ರಾಂಶುಪಾಲರು, ಕರ್ನಾಟಕ ಪ್ರೌಢ ಶಾಲೆ, ಕಿಲ್ಲೆ, ಧಾರವಾಡ ಇವರ ಪತ್ರ ಸಂಖ್ಯೆ. Khs/DPC/ARP/2024-25/538 ದಿನಾಂಕ: 17.04.2025 ರ ಪ್ರಕಾರ ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರವನ್ನು ಪರಿಶೀಲನೆಗೊಳಪಡಿಸಿ ನೈಜವಾಗಿರುತ್ತದೆ ಎಂದು ದೃಢೀಕರಿಸಿರುತ್ತಾರೆ.

ಆದ್ದರಿಂದ, ಈಗ ಅವರ ನೇಮಕಾತಿ ಕೋರಿಕೆಯ ಕುರಿತು ವಿವರ ಈ ಕೆಳಗಿನಂತಿರುತ್ತದೆ. ಶ್ರೀ ಆನಂದ ಈಶ್ವರ ಉರ್ಫ್ ಈಶ್ವರಪ್ಪ ಕರದಿನ್ನವರ ಇವರ ತಂದೆಯವರಾದ ದಿವಂಗತ ಶ್ರೀ ಈಶ್ವರ ಉರ್ಫ್ ಈಶ್ವರಪ್ಪ ವಿ. ಕರದಿನ್ನವರ ಇವರು ಕವಿವಿ ಕಟ್ಟಡ ವಿಭಾಗದಲ್ಲಿ ಕಿರಿಯ ಪಂಪ್ ಅಟೆಂಡೆಂಟ್ ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ: 11.01.2025 ರಂದು ನಿಧನ ಹೊಂದಿರುವುದರಿಂದ ದಿನಾಂಕ 03.03.2025 ರಂದು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಅರ್ಜಿದಾರರ ತಂದೆಯವರಾದ ದಿವಂಗತ ಶ್ರೀ ಈಶ್ವರ ಉರ್ಫ್ ಈಶ್ವರಪ್ಪ ವಿ. ಕರದಿನ್ನವರ ಇವರು ಕಿರಿಯ ಪಂಪ್ ಅಟೆಂಡೆಂಟ್ ಹುದ್ದೆಗೆ ಸಕ್ರಮಾತಿ ಹೊಂದಿದವರಾಗಿರುತ್ತಾರೆ. ಅನುಕಂಪದ ಆಧಾರದ ಮೇಲೆ ನೇಮಕಾತಿ ಅನುಶಾಸನ (vide Notification No. S&S/4555 dated: 23.01.1982) ಪ್ರಕಾರ ಈ ಸಂಬಂಧವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಶರತ್ತುಗಳಿಗೆ ಅನುಗುಣವಾಗಿ ಅರ್ಹತೆಯನ್ನು ಹೊಂದಿರಬೇಕಾಗಿರುತ್ತದೆ. ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ. ಸಿಆಸುಇ 26 ಸೇಅನೇ 2018 ದಿನಾಂಕ : 09.04.2021 ರ ಮೂಲಕ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ : 02.02.2021 ರ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅದಿನಿಯಮ 1978 (1990 ರ ಕರ್ನಾಟಕ ಅಧಿನಿಯಮ, 14) ರ 3ನೇ ಪ್ರಕರಣದ (1) ನೇ ಉಪಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ತಿದ್ದುಪಡಿಗೊಳಿಸಿರುತ್ತದೆ.

**Eligibility for Appointment:**

3. ನಿಯಮ 3 ರ ತಿದ್ದುಪಡಿ :

(i)(2) ನೇ ಉಪನಿಯಮದಲ್ಲಿ –

(1)(i) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ-

"(i) ಮೃತ ಪುರುಷ ವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ"

(ಎ) ವಿಧವಾ ಪತ್ನಿ ; ಮತ್ತು

(ಬಿ) ಮೃತನ ವಿಧವಾ ಪತ್ನಿಯು ನೇಮಕಾತಿಗಾಗಿ ಅರ್ಹಳಿಲ್ಲದಿದ್ದಲ್ಲಿ ಅಥವಾ ಸಮುಚಿತ ಕಾರಣಕ್ಕಾಗಿ ಅವಳು ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಮೃತ ಸರ್ಕಾರಿ ನೌಕರನ ವಿಧವಾ ಪತ್ನಿಯು ಆಯ್ಕೆ ಮಾಡಿದ ಆತನ ಮಗ ಅಥವಾ ಮಗಳು.

ಟಿಪ್ಪಣಿ : ಮೃತ ಸರ್ಕಾರಿ ನೌಕರನ ಪತ್ನಿಯು ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(2) (iಎ) ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ –



ಕುಲಸಚಿವರು ಕುಲಪತಿಗಳು

(iಎ) ಮೃತ ಪುರುಷ ಅವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ ಆತನ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ.

ಟಿಪ್ಪಣಿ : ಮೃತ ಸರ್ಕಾರಿ ನೌಕರನ ತಂದೆ/ತಾಯಿ ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ ಸಹೋದರ/ಸಹೋದರಿಯ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(3) (ii) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ –

(ii) ಮೃತ ಮಹಿಳಾ ವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ.

(ಎ) ಮೃತ ಸರ್ಕಾರಿ ನೌಕರಳ ವಿಧುರ ಪತಿಯು ಆಯ್ಕೆ ಮಾಡಿದ ಮಗ ಅಥವಾ ಮಗಳು ಮತ್ತು;

(ಬಿ) ಮಗ ಅಥವಾ ಮಗಳು ಅರ್ಹರಿಲ್ಲದಿದ್ದಲ್ಲಿ ಅಥವಾ ಯಾವುದೇ ಸಮುಚಿತ ಕಾರಣಕ್ಕಾಗಿ ನೇಮಕಾತಿಯನ್ನು ಒಪ್ಪದಿದ್ದಲ್ಲಿ ಆಕೆಯ ವಿಧುರ ಪತಿ;

ಟಿಪ್ಪಣಿ : ಮೃತ ಸರ್ಕಾರಿ ನೌಕರಳ ಪತಿಯು ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(4) (iiಎ) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ –

(iiಎ) ಮೃತ ಮಹಿಳಾ ಅವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆಕೆಯ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ.

ಟಿಪ್ಪಣಿ : ಮೃತ ಸರ್ಕಾರಿ ನೌಕರಳ ತಂದೆ/ತಾಯಿ ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(5) (iiಎ) ನೇ ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು –

(iii) ಮೃತ ವಿವಾಹಿತ ಮಹಿಳಾ ಸರ್ಕಾರಿ ನೌಕರನ/ಳ ಪತ್ನಿ/ಪತಿ ಈಗಾಗಲೇ ಮೃತಪಟ್ಟಿದ್ದು ಮತ್ತು ಅವರಿಗೆ ಅಪ್ರಾಪ್ತ ವಯಸ್ಕ ಮಕ್ಕಳಿದ್ದ ಸಂದರ್ಭದಲ್ಲಿ ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಆ ಮಕ್ಕಳೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರು.

(ii) ಉಪ ನಿಯಮ (3) ನ್ನು ಕೈಬಿಡಲಾಗಿದೆ.

ಮೇಲ್ಕಾಣಿಸಿದ ನಿಯಮದ ಉಪ ನಿಯಮ 2(1) ಪ್ರಕಾರ ನಿಧನ ಹೊಂದಿದ ವಿವಾಹಿತ ಪುರುಷ ಸರ್ಕಾರಿ ನೌಕರರ ಹೆಂಡತಿ, ಒಂದು ವೇಳೆ ಹೆಂಡತಿ ಅರ್ಹತೆ ಹೊಂದದಿದ್ದಲ್ಲಿ ಅಥವಾ ಯಾವುದೋ ಕಾರಣಕ್ಕೆ ನೇಮಕಾತಿ ಬಯಸದಿದ್ದಲ್ಲಿ ಮೃತ ನೌಕರನ ವಿಧವೆ ಆಯ್ಕೆ ಮಾಡಿದ ಮಗ ಅಥವಾ ಮಗಳನ್ನು (ವಿವಾಹಿತೆ/ಅವಿವಾಹಿತೆ ಅಥವಾ ವಿಧವೆ) ಅನುಕಂಪದ ಆಧಾರದ ನೇಮಕಾತಿಗಾಗಿ ಪರಿಗಣಿಸಬಹುದು.

ಈ ನಿಯಮದ ಅನುಸಾರ ಅರ್ಜಿದಾರರು ಉಪ ತಹಶೀಲ್ದಾರ ಧಾರವಾಡ-ಹುಬ್ಬಳ್ಳಿ ಇವರಿಂದ ಪಡೆದು ಸಲ್ಲಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ **RD1214813103878** ದಿನಾಂಕ 28.02.2025 ಪ್ರಕಾರ ಮೃತ ಕುಟುಂಬದ ಜೀವಂತ ಸದಸ್ಯರ ವಿವರ ಈ ಕೆಳಗಿನಂತಿರುತ್ತದೆ.

| ಅ. ನಂ. | ಹೆಸರು | ವಯಸ್ಸು | ಮೃತರ ಜೊತೆಗೆ ಸಂಬಂಧ | ವೈವಾಹಿಕ ಸ್ಥಿತಿ |
|---|---|---|---|---|
| 1 | ಉಮಾ ಕೋಂ. ಈಶ್ವರ ಕರದಿನ್ನವರ | 58 | ಪತ್ನಿ | ವಿಧವೆ/ವಿಧುರ |
| 2 | ಶಿವಾನಂದ ಈಶ್ವರ ಕರದಿನ್ನವರ | 29 | ಮಗ | ಅವಿವಾಹಿತರು |
| 3 | ನವೀನ ಈಶ್ವರ ಕರದಿನ್ನವರ | 26 | ಮಗ | ಅವಿವಾಹಿತರು |
| 4 | ಆನಂದ ಈಶ್ವರ ಕರದಿನ್ನವರ | 19 | ಮಗ | ಅವಿವಾಹಿತರು |

ಮೇಲೆ ಒದಲಾದ ಉಪನಿಯಮದನ್ವಯ ಹಾಗೂ ಮೇಲ್ಕಾಣಿಸಿದ ದೃಢೀಕರಣ ಪತ್ರದಂತೆ ಮೃತರ ಪತ್ನಿಯಾದ ಹಾಗೂ ಅರ್ಜಿದಾರರ ತಾಯಿಯಾದ ಶ್ರೀಮತಿ ಉಮಾ ಈಶ್ವರ ಕರದಿನ್ನವರ ಮತ್ತು ಅರ್ಜಿದಾರರ ಸಹೋದರರಾದ ಶ್ರೀ ಶಿವಾನಂದ ಈಶ್ವರ ಕರದಿನ್ನವರ, ಶ್ರೀ ನವೀನ ಈಶ್ವರ ಕರದಿನ್ನವರ ಇವರುಗಳು ಶ್ರೀ ಆನಂದ ಈಶ್ವರ ಕರದಿನ್ನವರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ತಮ್ಮ ಅಭ್ಯಂತರವಿಲ್ಲವೆಂದು ದಿನಾಂಕ: 13.02.2025 ರ ಪ್ರತ್ಯೇಕವಾಗಿ ನೋಟರಿ ಮಾಡಿಸಿದ ಪ್ರಮಾಣಪತ್ರಗಳ ಮೂಲಕ ತಮ್ಮ ಒಪ್ಪಿಗೆ ಇದೆ ಎಂದು ತಿಳಿಸಿರುತ್ತಾರೆ.

**Conditions of Appointment:**



ಕುಲಸಚಿವರು ಕುಲಪತಿಗಳು

4) ನಿಯಮ 3ಎ ನ್ನು ರದ್ದುಗೊಳಿಸುವಿಕೆ - ಸದರಿ ನಿಯಮಗಳ ನಿಯಮ 3ಎ ನ್ನು ರದ್ದುಗೊಳಿಸಲಾಗಿದೆ.

5) ನಿಯಮ 4ರ ತಿದ್ದುಪಡಿ - ಸದರಿ ನಿಯಮಗಳ ನಿಯಮ 4 ರಲ್ಲಿ-

(1) (1) ನೇ ಉಪನಿಯಮದಲ್ಲಿ 'ವಿವರಣೆಯ ತರುವಾಯ ಈ ಮುಂದಿನ ಪರಂತುಕವನ್ನು ಸೇರಿತಕ್ಕದ್ದು, ಎಂದರೆ-

ಪರಂತು, (1) ನೇ ಉಪನಿಯಮದಲ್ಲಿ ಏನೇ ಇದ್ದರೂ, ಅದು ಗ್ರೂಪ್-'ಸಿ' ಮತ್ತು ಗ್ರೂಪ್-'ಡಿ' ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.

ತಿದ್ದುಪಡಿಯಾದ ಸರ್ಕಾರದ ಆದೇಶ ಸಂಖ್ಯೆ. ಸಿ.ಆ.ಸು.ಇ. 26 ಸೇಅನೇ 2018 ದಿನಾಂಕ: 09-04-2021 ರ ಪ್ರಕಾರ ಮೃತ ಸರ್ಕಾರಿ ನೌಕರನ ಕುಟುಂಬ ಆರ್ಥಿಕ ದುಸ್ಥಿತಿಯಲ್ಲಿರಬೇಕೆಂಬ ಷರತ್ತು ಗ್ರೂಪ್-'ಸಿ' ಮತ್ತು 'ಡಿ' ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದಲ್ಲವೆಂದು ಸ್ಪಷ್ಟವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮೃತರಾಗಿರುವ ದಿವಂಗತ ದಿವಂಗತ ಶ್ರೀ ಈಶ್ವರ ಉರ್ಫ ಈಶ್ವರಪ್ಪ ವಿ. ಕರದಿನ್ನವರ ಇವರು ಗ್ರೂಪ್ 'ಡಿ' ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ, ಈ ಪ್ರಕರಣದಲ್ಲಿ ನಿಯಮ 5ರ ಅನುಸಾರ ಕುಟುಂಬದ ಆದಾಯ ಪರಿಗಣನೆಗೆ ಬರುವುದಿಲ್ಲ.

(2) Person seeking appointment shall be within the age limit specified for the post in the relevant rules of recruitment specilly made in respect of any service or post read with sub rule 93) of rule 6 of the Karnataka Civil Services (General Recruitment) Rules, 1977 and where it is not so specified such person shall be within the age limits specified in the Karnataka Civil Services (General Recruitment) Rules, 1977.

ಈ ಉಪನಿಯಮದ ಪ್ರಕಾರ ಹಾಗೂ ಪ್ರಚಲಿತ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ಸೆನೆನಿ 2008 ದಿ:15.01.2009 ರ ಪ್ರಕಾರ ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿದ್ದು, ಸದರಿ ನೇಮಕಾತಿಗೆ 35 ವರ್ಷಗಳ ವಯೋಮಿತಿ ಇರುತ್ತದೆ. ಅರ್ಜಿದಾರರು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಂಶುಪಾಲರು, ಕರ್ನಾಟಕ ಪ್ರೌಢ ಶಾಲೆ, ಕಿಲ್ಲೆ ಧಾರವಾಡ ಇವರಿಗೆ ಕಳುಹಿಸಲಾಗಿ ನೈಜವಾಗಿರುವ ಬಗ್ಗೆ ಪತ್ರ ದಿನಾಂಕ 17.04.2025 ರ ಪತ್ರ ಸ್ವೀಕೃತವಾಗಿದ್ದು, ಅದರ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕ 04.04.2006 ಇದ್ದು ಅರ್ಜಿ ಸಲ್ಲಿಸಿದ ದಿನದಂದು 18 ವರ್ಷ 10 ತಿಂಗಳು 27 ದಿನಗಳು ಪೂರ್ಣಗೊಂಡಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂ. ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ: 12.09.1996 ರ ಉಪನಿಯಮ 3 ಹಾಗೂ 4 ರ ಪ್ರಕಾರ ಇತರೆ ಷರತ್ತುಗಳು ಈ ಕೆಳಗಿನಂತಿರುತ್ತದೆ.

(3) Person seeking appointment should possess the minimum qualification specified for the post in the relevant rules of recruitment specially made in respect of any service or post.

[1][Provided the nothing in this sub rule (5) of rule 5 of the Karnataka Civil Services (General Recruitment) Rules, 1977 in so for as it relates to educational qualification, shall apply to appointment under these rules to any Group 'D' post.']

[2][(4) Appointment shall be confined to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Sceretariat as may be revised from time to time and any other post in either of the groups as may be specified by the Government from time to time.]

(5) Appointment shal be made only against a direct recruitment vacancy.

ಈ ಮೇಲಿನ ಉಪನಿಯಮದ ಪ್ರಕಾರ ಈ ವಿಶ್ವವಿದ್ಯಾಲಯದ ನೌಕರರ ನೇಮಕಾತಿ ಅನುಶಾಸನ 1988 ರ ಪ್ರಕಾರ ಪದವಿ ಪೂರ್ವ ಹಾಗೂ ಅದಕ್ಕೆ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಸಿ ವೃಂದದ ಕಿರಿಯ ಸಹಾಯಕ ಹುದ್ದೆಗೆ ಅಥವಾ 4 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಡಿ' ವೃಂದದ ಹುದ್ದೆಗೆ ಹಾಗೂ ಇದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಸಫಾಯಿ ಕರ್ಮಚಾರಿ (ಜಾಡಮಾಲಿ) ಹುದ್ದೆಗೆ ಸಾಮಾನ್ಯವಾಗಿ ನೇಮಕಾತಿ ಮಾಡಲಾಗುತ್ತಿದೆ.



ಕುಲಸಚಿವರು ಕುಲಪತಿಗಳು

ಅದರ ಅನುಸಾರ ಅರ್ಜಿದಾರರ ಶೈಕ್ಷಣಿಕ ಅರ್ಹತೆಯ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರವನ್ನು ಪರಿಶೀಲನೆಗೊಳಪಡಿಸಿ ಹಿಂದಿರಿಗಿಸಲು ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ಶಿಕ್ಷಕೇತರ/12/3350 ದಿನಾಂಕ: 29.03.2025 ರ ಮೂಲಕ ಪತ್ರ ಬರೆಯಲಾಗಿತ್ತು. ಹಾಗೂ ಪ್ರಾಂಶುಪಾಲರು, ಕರ್ನಾಟಕ ಪ್ರೌಢ ಶಾಲೆ, ಕಿಲ್ಲೆ, ಧಾರವಾಡ ಇವರಿಗೆ ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರವನ್ನು ಪರಿಶೀಲನೆಗೊಳಪಡಿಸಿ ಹಿಂದಿರುಗಿಸಲು ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ಶಿಕ್ಷಕೇತರ/12/3351 ದಿನಾಂಕ: 29.03.2025 ರ ಮೂಲಕ ಪತ್ರ ಬರೆಯಲಾಗಿತ್ತು. ಅದರಂತೆ ಜಂಟಿ ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ, ಬೆಳಗಾವಿ ಡಿವಿಜನ್, ಕೋರ್ಟ ಕಂಪೌಂಡ್, ಬೆಳಗಾವಿ ಇವರ ಪತ್ರ ದಿನಾಂಕ: 07.04.2025 ರ ಮೂಲಕ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನ ಪರಿಶೀಲನೆಗೊಳಪಡಿಸಿ ನೈಜತೆಯ ಬಗ್ಗೆ ದೃಢೀಕರಿಸಿ ಮತ್ತು ಪ್ರಾಂಶುಪಾಲರು, ಕರ್ನಾಟಕ ಪ್ರೌಢ ಶಾಲೆ, ಕಿಲ್ಲೆ, ಧಾರವಾಡ ಇವರ ಪತ್ರ ಸಂಖ್ಯೆ. Khs/DPC/ARP/2024-25/538 ದಿನಾಂಕ: 17.04.2025 ರ ಪ್ರಕಾರ ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರವು ನೈಜವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 5 ಈ ಕೆಳಗಿನಂತಿರುತ್ತದೆ.

***(5) Application for appointment :***

Every dependent of a deceased Government Servant, Seeking appointment under these rules shall make an application within one year from the date of death of the Government Servant, in such from, as may be notified by the Government, from time to time, to the Head of the Department under whom the deceased Government servant was working.

[1][Provided that in the case of a minor he must have attained the age of eighteen years within one year from the date of death of the Government Servant and he must make an application within one year thereafter.]

ಅರ್ಜಿದಾರರ ತಂದೆ ಹಾಗೂ ಈ ವಿಶ್ವವಿದ್ಯಾಲಯದ ನೌಕರರರಾದ ದಿವಂಗತ ಶ್ರೀ ಈಶ್ವರ ಉರ್ಫ್ ಈಶ್ವರಪ್ಪ ವಿ. ಕರದಿನ್ನವರ ಇವರು ಕವಿವಿ ಕಟ್ಟಡ ವಿಭಾಗದಲ್ಲಿ ಕಿರಿಯ ಪಂಪ್ ಅಟೆಂಡೆಂಟ್ ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ: 11.01.2025 ರಂದು ನಿಧನರಾಗಿರುತ್ತಾರೆಂದು, ಸರ್ಕಾರದ ಜನನ ಮತ್ತು ಮರಣಗಳ ಮುಖ್ಯ ರಜಿಸ್ಟ್ರಾರ್ ಇವರಿಂದ ಪಡೆದ ಮರಣ ಪ್ರಮಾಣ ಪತ್ರದ ನೋಂದಣಿ ಸಂಖ್ಯೆ. 803083/T/D/2025/000907 ದಿನಾಂಕ 04.02.2025 ರಂದು ಪಡೆದು ಸಲ್ಲಿಸಿದ ಮರಣ ಪ್ರಮಾಣಪತ್ರದಲ್ಲಿ ಉಲ್ಲೇಖ ಇರುತ್ತದೆ. ಈ ಉಪ ನಿಯಮದ ಪ್ರಕಾರ ನೇಮಕಾತಿಗೆ ನೌಕರರು ಮೃತರಾದ ನಿಗದಿತ ಒಂದು ವರ್ಷದ ಅವಧಿಯಲ್ಲಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 6 ರ ಆಯ್ದ ಭಾಗ ಈ ಕೆಳಗಿನಂತಿರುತ್ತದೆ.

*(6) Appointment by the Competent Authority :*

(1) On receipt of the application under rule 5, the Head of the Department, if satisfied that the applicant fulfills all the conditions specified under these rules, shall appoint, where he is the appointing authority and if not direct the appropriate appointing authority to issue the order of appointment.

(2) The appointment undere sub-rule (1) shall be made as far as possible within a period of three months from the date of receipt of the application under rule 5.

ಮುಂದುವರೆದು, ಶ್ರೀ ಆನಂದ ಈಶ್ವರ ಉರ್ಫ್ ಈಶ್ವರಪ್ಪ ಕರದಿನ್ನವರ ಇವರು ಎಸ್.ಎಸ್.ಎಲ್.ಸಿ. ಉತ್ತೀರ್ಣ ಗೊಂಡಿರುವುದರಿಂದ ಮೇಲ್ಕಾಣಿಸಿದ ಕವಿವಿ ಅನುಶಾಸನವನ್ನು ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಸಿಪಾಯಿ (ಗ್ರೂಪ್ 'ಡಿ') ಹುದ್ದೆಗೆ ಅರ್ಹರಿದ್ದು, ಸದರಿಯವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ವಿಷಯದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀ. ಈಶ್ವರ ಉರ್ಫ್ ಈಶ್ವರಪ್ಪ ಕರದಿನ್ನವರ ಇವರ ನಿಧನದಿಂದ ಅವರ ಮಗನಾದ ಶ್ರೀ. ಆನಂದ ಈಶ್ವರ ಉರ್ಫ್ ಈಶ್ವರಪ್ಪ ಕರದಿನ್ನವರ ಇವರು ಸಲ್ಲಿಸಿದ ಅರ್ಜಿಯನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಕಂಪದ ಆಧಾರದ ಮೇಲೆ ಸಿಪಾಯಿ (ಗ್ರೂಪ್ 'ಡಿ) ಹುದ್ದೆಗೆ ನೇಮಕಾತಿ ಮಾಡಲು ಸಿಂಡಿಕೇಟ್ ಸಭೆ ಅನುಮೋದಿಸಿತು.**



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 9) ವಿಷಯ-: ಡಾ. ಜಿನದತ್ತ ಹಡಗಲಿ, ಅಧ್ಯಕ್ಷರು, ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಟ್ರಸ್ಟ್ (ರಿ) ಹುಬ್ಬಳ್ಳಿ-ಧಾರವಾಡ ಇವರನ್ನು ಜೈನ ಅಧ್ಯಯನ ಪೀಠದ ಸಂಯೋಜಕರೆಂದು ನೇಮಕಾತಿ ಮಾಡಿರುವ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ದೃಢೀಕರಿಸುವ ಕುರಿತು.

ಟಿಪ್ಪಣಿ:

ಅಧ್ಯಕ್ಷರು, ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಟ್ರಸ್ಟ್ (ರಿ), ಹುಬ್ಬಳ್ಳಿ- ಧಾರವಾಡ ಇವರು ದಿನಾಂಕ: 27.03.2025 ರ ಪತ್ರದಲ್ಲಿ ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಕುರಿತು ತೀವ್ರ ಆಸಕ್ತಿ ಹೊಂದಿರುವ ವ್ಯಕ್ತಿಗಳನ್ನು ಜೈನ ಅಧ್ಯಯನ ಪೀಠದ ಸಂಯೋಜಕರನ್ನಾಗಿ ನೇಮಿಸಬೇಕೆಂದು ವಿನಂತಿಸಿದ್ದರು.

ಸಂಯೋಜಕರು, ಜೈನ ಅಧ್ಯಯನ ಪೀಠ ಕವಿವಿ ಧಾರವಾಡ ಇವರು ದಿನಾಂಕ: 29.03.2025ರ ಪತ್ರದಲ್ಲಿ ಪ್ರಸಾರಂಗದ ಮೂಲ ತತ್ವ ಉಪನ್ಯಾಸಗಳ ಆರ್ಗನೈಜಿಂಗ್ ಕಾರ್ಯದರ್ಶಿಗಳಾಗಿದ್ದು ಅನೇಕ ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ ಮಾರ್ಗದರ್ಶನದ ಕಾರ್ಯದಲ್ಲಿ ತೊಡಗಿರುವದರಿಂದ ಜೈನ ಅಧ್ಯಯನ ಪೀಠದ ಸಂಯೋಜಕರ ಕಾರ್ಯಭಾರದಿಂದ ಬಿಡುಗೊಳಿಸಬೇಕೆಂದು ವಿನಂತಸಿದ್ದರು.

ನಂತರದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಟ್ರಸ್ಟ್ (ರಿ), ಹುಬ್ಬಳ್ಳಿ-ಧಾರವಾಡ ಇವರು ದಿನಾಂಕ: 01.04.2025 ರ ಪತ್ರದಲ್ಲಿ ಡಾ. ಮಲ್ಲಿಕಾರ್ಜುನ ಪಾಟೀಲ ಇವರು ಸಂಯೋಜಕರ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕಾರಣ ತೆರವಾಗಿರುವ ಸ್ಥಾನಕ್ಕೆ ಡಾ. ಜಿನದತ್ತ ಹಡಗಲಿ ಇವರನ್ನು ಸಂಯೋಜಕರಾಗಿ ನಿಯುಕ್ತಗೊಳಿಸಬೇಕೆಂದು ವಿನಂತಿಸಿದ್ದರು.

ಮುಂದುವರೆದು, ಡಾ. ಮಲ್ಲಿಕಾರ್ಜುನ ಪಾಟೀಲ, ಹಿರಿಯ ಪ್ರಾಧ್ಯಾಪಕರು ಇವರನ್ನು ಸ್ನಾತಕೋತ್ತರ ಇಂಗ್ಲೀಷ ಅಧ್ಯಯನ ವಿಭಾಗ, ಕವಿವಿ ಧಾರವಾಡ ಈ ಕಚೇರಿ ಆದೇಶ ಸಂ. 2065 ದಿನಾಂಕ 14.11.2022 ರಂದು ಜೈನ ಅಧ್ಯಯನ ಪೀಠದ ಸಂಯೋಜಕರನ್ನಾಗಿ ನೇಮಿಸಿ ಆದೇಶಿಸಿದ್ದು ಇರುತ್ತದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ, ಮಾನ್ಯ ಕುಲಪತಿಗಳು ಡಾ. ಜಿನದತ್ತ ಹಡಗಲಿ, ಅಧ್ಯಕ್ಷರು, ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಟ್ರಸ್ಟ್ (ರಿ) ಹುಬ್ಬಳ್ಳಿ-ಧಾರವಾಡ ಇವರನ್ನು ಜೈನ ಅಧ್ಯಯನ ಪೀಠದ ಸಂಯೋಜಕರನ್ನಾಗಿ ನೇಮಕ ಮಾಡಲು ಆದೇಶಿದ್ದರ ಹಿನ್ನಲೆಯಲ್ಲಿ ಈ ಕಚೇರಿ ಆದೇಶ ಸಂಖ್ಯೆ:86 ದಿನಾಂಕ 16.04.2025 ರನ್ವಯ ಡಾ. ಜಿನದತ್ತ ಹಡಗಲಿ ಇವರನ್ನು ಸದರ ಪೀಠದ ಸಂಯೋಜಕರನ್ನಾಗಿ ನೇಮಕ ಮಾಡಿ ಆದೇಶಿಸಿದ್ದು ಇರುತ್ತದೆ.

ಕಾರಣ, ಜೈನ ಅಧ್ಯಯನ ಪೀಠಕ್ಕೆ ಡಾ. ಜಿನದತ್ತ ಹಡಗಲಿ, ಅಧ್ಯಕ್ಷರು, ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಟ್ರಸ್ಟ್ (ರಿ) ಹುಬ್ಬಳ್ಳಿ-ಧಾರವಾಡ ಇವರನ್ನು ಜೈನ ಅಧ್ಯಯನ ಪೀಠದ ಸಂಯೋಜಕರನ್ನಾಗಿ ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**ಡಾ. ಜಿನದತ್ತ ಹಡಗಲಿ, ಅಧ್ಯಕ್ಷರು, ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಟ್ರಸ್ಟ್ (ರಿ) ಹುಬ್ಬಳ್ಳಿ-ಧಾರವಾಡ ಇವರನ್ನು ಜೈನ ಅಧ್ಯಯನ ಪೀಠದ ಸಂಯೋಜಕರೆಂದು ನೇಮಕಾತಿ ಮಾಡಿರುವ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.**

**ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವ ಎಲ್ಲ ಪೀಠಗಳ ಸಂಯೋಜಕರ ನೇಮಕ ಮಾಡುವ ಕುರಿತಂತೆ ಅನುಶಾಸನ ರಚಿಸಿ ಅನುಮೊದನೆ ಆಗುವವರಿಗೂ ಸಧ್ಯ ಖಾಲಿ ಇರುವ ಪೀಠಗಳ ಸಂಯೋಜಕರ ನೇಮಣೂಕಿ ಮಾಡಲು ಅರ್ಜಿಯನ್ನು ಅಹ್ವಾನಿಸಿ....**



ಕುಲಸಚಿವರು ಕುಲಪತಿಗಳು

...ವಿಶ್ವವಿದ್ಯಾಲಯದ ಶಿಕ್ಷಕರುಗಳಿಗೆ ಪ್ರಾತಿನಿಧ್ಯ ನೀಡುವುದು ಒಂದು ವೇಳೆ ಲಭ್ಯವಿಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ಅಡಿಯಲ್ಲಿರುವ ಮಹಾವಿದ್ಯಾಲಯಗಳ ಶಿಕ್ಷಕರುಗಳು ಅಥವಾ ಹೊರಗಿನ ಸಂಶೋಧಕರು/ ವಿಧ್ವಾಂಸಕರು ಆಯಾ ವಿಷಯಗಳಲ್ಲಿ ವಿಶೇಷ ಸಾಧನೆ ಮಾಡಿದ ಪರಿಣಿತರಿಗೆ ಆದ್ಯತೆ ನೀಡಲಾಗುವುದು, ಬಂದಂತಹ ಅರ್ಜಿಗಳನ್ನು ಪರಿಶೀಲಿಸಿ ಸಂದರ್ಶನವನ್ನು ಮಾಡಿ ಇಬ್ಬರು ಸಂಯೋಜಕರನ್ನು ಶಿಫಾರಸು ಮಾಡಲು ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು, ಮುಂದುವರಿದು ಸಮಿತಿಯ ವರಧಿಯಂತೆ ಮಾನ್ಯ ಕುಲಪತಿಗಳು ಸಂಬಂಧಿಸಿದ ಪೀಠಕ್ಕೆ ನೇಮಣೂಕಿ ಮಾಡಲು ಸಿಂಡಿಕೇಟ ಸಭೆಯು ನಿರ್ಣಯಿಸಿತು.



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 10) ವಿಷಯ-:** ಎಂ.ಬಿ.ಎ. ಕೋರ್ಸಿನ ನೊಂದಣಿ ಶುಲ್ಕದ ವಿಷಯವಾಗಿ ಮರುಪರಿಶೀಲಿಸುವ ಕುರಿತು.

**ಟಿಪ್ಪಣಿ:**

Association of Private Management Institutions of North Karnatak ಇವರ ಪತ್ರ ದಿನಾಂಕ:19.02.2025ರ ಮೂಲಕ ಎಂ.ಬಿ.ಎ. ಪದವಿಯ ನೊಂದಣಿ ಶುಲ್ಕವನ್ನು ಕಡಿಮೆಗೊಳಿಸುವ ಅಂದರೆ, ಎರಡು ವರ್ಷಗಳಿಗೆ ಪ್ರತಿ ವರ್ಷ ತಲಾ ರೂ.20,000/- ರಂತೆ ನೊಂದಣಿ ಶುಲ್ಕ ಆಕರಿಸುವ ಬದಲು ಎರಡೂ ವರ್ಷಗಳಿಗೆ ರೂ.20,000/- ನೊಂದಣಿ ಶುಲ್ಕ ಆಕರಿಸುವ ಪ್ರಸ್ತಾವನೆ ಪರಿಶೀಲಿಸುವ ಕುರಿತು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ದಿನಾಂಕ:25.02.2025ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು. ನಿರ್ಣಯ ಸಂಖ್ಯೆ:23ರಲ್ಲಿ ಈ ಕೆಳಗಿನಂತೆ ನಿರ್ಣಯವಾಗಿರುತ್ತದೆ.

ಆಡಳಿತ ಮಂಡಳಿ ನಿರ್ಣಯ ಸಂಖ್ಯೆ:23 ದಿನಾಂಕ:25.02.2025

**"ಎಂ.ಬಿ.ಎ. ಕೋರ್ಸಿನ ನೊಂದಣಿ ಶುಲ್ಕದ ವಿಷಯವಾಗಿ ಮರುಪರಿಶೀಲಿಸುವ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಸದರಿ ವಿಷಯವನ್ನು ವಿದ್ಯಾ ವಿಷಯಕ್ ಪರಿಷತ್ ಸಭೆಯ ಮುಂದೆ ಮಂಡಿಸಿ ನಂತರ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಬೇಕೆಂದು ಸೂಚಿಸಲಾಯಿತು"**

ಈ ಮೇಲಿನ ಆಡಳಿತ ಮಂಡಳಿಯ ಸಭೆಯ ನಿರ್ಣಯದಂತೆ ಸದರ ವಿಷಯವನ್ನು ದಿ:26.04.2025ರಂದು ನಡೆದ ವಿದ್ಯಾ ವಿಷಯಕ್ ಪರಿಷತ್ ಸಭೆಯಲ್ಲಿ ಮರುಮಂಡಿಸಲಾಗಿತ್ತು ಸದರ ಸಭೆಯ ನಿರ್ಣಯ ಈ ಕೆಳಗಿನಂತಿದೆ.

ವಿದ್ಯಾವಿಷಯಕ್ ಪರಿಷತ್ ನಿರ್ಣಯ ಸಂಖ್ಯೆ:05 ದಿನಾಂಕ: 26.04.2025

**"ಎಂ.ಬಿ.ಎ. ಕೋರ್ಸಿನ ನೊಂದಣಿ ಶುಲ್ಕದ ವಿಷಯವಾಗಿ ದಿನಾಂಕ:25.02.2025ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ದಿನಾಂಕ:07.03.2024 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ:17ನ್ನು ಮರುಪರಿಶೀಲಿಸಿ 07.03.2024ರ ನಿರ್ಣಯದಂತೆ ನೊಂದಣಿ ಶುಲ್ಕದ ದರವನ್ನೇ ಮುಂದುವರೆಸಲು ಹಾಗೂ ಅದರಂತೆ ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು".**

ಈ ನೊಂದಣಿ ವಿಷಯದ ಕುರಿತಂತೆ ಇಲ್ಲಿ ನಿವೇದಿಸುವುದೇನೆಂದರೆ, 2023-24ನೇ ಸಾಲಿನಿಂದ ಪ್ರತಿ ವರ್ಷ ಎಂಬಿಎ ವಿದ್ಯಾರ್ಥಿಗಳಿಂದ ಪ್ರಥಮ ವರ್ಷಕ್ಕೆ ರೂ. 20,000/- ಹಾಗೂ ದ್ವಿತೀಯ ವರ್ಷಕ್ಕೆ ರೂ. 20,000/-ರಂತೆ ನೊಂದಣಿ ಶುಲ್ಕ ಆಕರಣೆ ಮಾಡಲಾಗುತ್ತಿದೆ. ಈ ಕ್ರಮವನ್ನು ಸಂಘವು ಪ್ರಶ್ನಿಸಿ ನೊಂದಣಿ ಶುಲ್ಕ ಸಂ ಪೂರ್ಣ ಎರಡು ವರ್ಷಗಳಿಗೆ ರೂ. 20,000/- ರಂತೆ ಆಕರಿಸಲು ಆಗ್ರಹಿಸಿರುವರು. ಆದರೆ, ದಿನಾಂಕ:17.03.2025ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯು ಪ್ರಥಮ ವರ್ಷಕ್ಕೆ ರೂ. 20,000/-ಹಾಗೂ ಎರಡನೇ ವರ್ಷಕ್ಕೆ ರೂ. 20,000/-ಗಳಂತೆ ನೊಂದಣಿ ಶುಲ್ಕ ಆಕರಿಸಲು ನಿರ್ಣಯಿಸಿದಂತೆಯೇ ಕ್ರಮ ಜರುಗಿಸಲು ಮೇಲಿನಂತೆ ದಿನಾಂಕ: 26.04.2025ರ ವಿದ್ಯಾ ವಿಷಯಕ್ ಪರಿಷತ್ ಸಭೆಯು ನಿರ್ಣಯಿಸಿರುತ್ತದೆ. ಈ ವಿಷಯವನ್ನು ದಿನಾಂಕ:25.02.2025ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿದ್ಯಾವಿಷಯಕ್ ಪರಿಷತ್ ಮುಂದೆ ಮಂಡಿಸಿ ಪುನಃ ಆಡಳಿತ ಮಂಡಳಿಯ ಸಭೆಯ ಮುಂದೆ ಮರುಪರಿಶೀಲನೆಗಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಯಿತು.

<u>ನಿರ್ಣಯ</u>

**ಎಂ.ಬಿ.ಎ. ಕೋರ್ಸಿನ ನೊಂದಣಿ ಶುಲ್ಕವನ್ನು ಕಡಿಮೆ ಮಾಡುವ ವಿಷಯವಾಗಿ Assoviation of Private Management Insitution of North Karnataka ಇವರ ಪತ್ರ ದಿನಾಂಕ 19.2.2025ರ ಮೂಲಕ ಎಂ.ಬಿ.ಎ ಪದವಿ ನೋಂದಣಿ ಶುಲ್ಕವನ್ನು ಕಡಿಮೆಗೊಳಿಸುವ ಅಂದರೆ ಎರಡು ವರ್ಷಗಳ ಕೋರ್ಸ ಅವಧಿಗೆ ಪ್ರತಿ ವರ್ಷ ರೂ. 20,000/- ನೋಂದಣಿ ಶುಲ್ಕವನ್ನು ಆಕರಿಸುವ ಬದಲಾಗಿ ಎರಡು ವರ್ಷಗಳಿಗೆ ಒಟ್ಟು ರೂ.20,000/- ನೋಂದಣಿ ಆಕರಿಸುವ ಪ್ರಸ್ತಾವನೆಗೆ ದಿನಾಂಕ 26.4.2025ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯು ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.**



ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ– 11) ವಿಷಯ–: ಸ್ನಾತಕ/ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ ರೂ.215/–ಗಳನ್ನು ಭರಿಸಿಕೊಂಡು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಹೊರಗಡೆಯಿಂದ ನೀಡುವ ಕುರಿತು ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯಲ್ಲಿ ದೃಢೀಕರಣಕ್ಕಾಗಿ ಮಂಡಿಸುವ ಕುರಿತು.

ಪ್ರಸ್ತಾವನೆ:

ಸ್ನಾತಕ/ಸ್ನಾತಕೋತ್ತರ ಪದವಿಗಳ ಅಂತಿಮ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಯು.ಯು.ಸಿ.ಎಂ.ಎಸ್ ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಪೂರ್ವದಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ರೂ.215/– ಗಳನ್ನು ಆಕರಿಸಲಾಗುತ್ತಿತ್ತು. ಆದರೆ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಉತ್ತೀರ್ಣ ಪ್ರಮಾಣ ನೀಡುವ ಆಯ್ಕೆಯು ಇರುವುದಿಲ್ಲ. ಆದರೆ ಯು.ಯು.ಸಿ.ಎಂ.ಎಸ್. ತಂತ್ರಾಂಶ ಅಳವಡಿಸಿಕೊಂಡ ನಂತರ 3 ವರ್ಷದ ಸ್ನಾತಕ ಪದವಿಯನ್ನು ಸಪ್ಟೆಂಬರ್ 2024 ರಲ್ಲಿ ಮೊಟ್ಟ ಮೊದಲನೆದಾಗಿ ವಿದ್ಯಾರ್ಥಿಗಳು ಪೂರೈಸಿದ್ದಾರೆ.

ಸ್ನಾತಕ/ಸ್ನಾತಕೋತ್ತರ ಅಂತಿಮ ಸೆಮಿಸ್ಟರ್‌ನಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರ ನೀಡುವುದು ವಿಳಂಬವಾಗುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರ ಅವಶ್ಯಕತೆ ಇದ್ದು ಸದರ ಪ್ರಮಾಣ ಪತ್ರದ ನಿಗದಿತ ಶುಲ್ಕ ರೂ.215/– ನ್ನು ಭರಿಸಿಕೊಂಡು ಪೂರ್ವ ಮುದ್ರಿತ ಉತ್ತೀರ್ಣ ಪ್ರಮಾಣ ಪತ್ರದ ನಮೂನೆಯಲ್ಲಿ ಈ ಹಿಂದೆ ನೀಡಿದಂತೆ ಯು.ಯು.ಸಿ.ಎಂ.ಎಸ್. ತಂತ್ರಾಂಶ ಹೊರತು ಪಡಿಸಿ ನೀಡುವ ಬಗ್ಗೆ ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**ಸ್ನಾತಕ/ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ ರೂ.215/-ಗಳನ್ನು ಭರಿಸಿಕೊಂಡು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಹೊರಗಡೆಯಿಂದ ನೀಡುವ ಕುರಿತು ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು.**

–

–

–

–

–

–

–

–

–



ಕುಲಸಚಿವರು ಕುಲಪತಿಗಳು

| | | |
|---|---|---|
| ಕಾರ್ಯಸೂಚಿ ಸಂಖ್ಯೆ | 12) ವಿಷಯ-: | ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ **B.Ed.** ಪದವಿ (1 ರಿಂದ 4ನೇ ಸೆಮಿಸ್ಟರದಲ್ಲಿ) ಯಲ್ಲಿಒಟ್ಟಾರೆಯಾಗಿ ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **Dr. Jagadeesh .G. Roddannavar** ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆ ಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು. |

ಟಿಪ್ಪಣಿ:

01. Lalita W/o Dr. Jagadeesh .G. Roddannavar, Saidapur, Hosa Oni Cross, Dharwad. ಇವರು ದಿನಾಂಕ:-12-12-2024 ರ ಪತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ **B.Ed.** ಪದವಿ (1 ರಿಂದ 4ನೇ ಸೆಮಿಸ್ಟರದಲ್ಲಿ) ಯಲ್ಲಿಒಟ್ಟಾರೆಯಾಗಿ ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **Dr. Jagadeesh. G. Roddannavar** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಇಚ್ಚಿಸಿ ವಿನಂತಿಸಿರುವರು.

02. ಈ ಕುರಿತು ತಿಳಿಸುವುದೇನೆಂದರೆ ದಿನಾಂಕ: 24-07-2024 ರಂದು ಜರುಗಿದ ಸಿಂಡಿಕೇಟ ಸಭೆ (ಕಲಂ ನಂ:20)ಯಲ್ಲಿ ನಿರ್ಣಯಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸುವರ್ಣಪದಕವನ್ನು ಸ್ಥಾಪಿಸಲು ರೂ. 3,00,000/- (ರೂಪಾಯಿ ಮೂರು ಲಕ್ಷ ಗಳು ಮಾತ್ರ) ಗಳ ದತ್ತಿ ಮೊತ್ತವನ್ನು ಠೇವಣಿ ಮಾಡಿಕೊಳ್ಳುವಂತೆ ಪರಿಷ್ಕರಣೆ ಮಾಡಿ ನಿಗದಿಪಡಿಸಲಾಗಿದೆ. ಸದರಿ ವಿಷಯದ ಕುರಿತು ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ ಧಾರವಾಡ ಇವರ ಹೆಸರಿನಲ್ಲಿ ರೂ. 3,10,000/- (ರೂಪಾಯಿ ಮೂರು ಲಕ್ಷ ಹತ್ತು ಸಾವಿರಗಳು ಮಾತ್ರ) ಗಳನ್ನು ಚೆಕ್ (ಚೆಕ್-ನಂ. **008069** ದಿನಾಂಕ: 12-12-2024) ಮೂಲಕ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣಪದಕವನ್ನು ತಯಾರಿಸಲಾಗುವುದು. ದಾನಿಗಳು 75ನೇ ಘಟಿಕೊತ್ಸವ ಕಾರ್ಯಕ್ರಮದಲ್ಲಿ ಸುವರ್ಣಪದಕ ಪ್ರದಾನ ಮಾಡುವಂತೆ ಹೆಚ್ಚುವರಿಯಾಗಿ ರೂ.10.000/- (ರೂಪಾಯಿ ಹತ್ತು ಸಾವಿರಗಳು ಮಾತ್ರ) ಗಳನ್ನು ಪಾವತಿಸಿರುವರು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ: 12-12-2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ Dr. Jagadeesh. G. Roddannavar ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ :26-04-2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ- 07, ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

    ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ **B.Ed.** ಪದವಿ (1 ರಿಂದ 4ನೇ ಸೆಮಿಸ್ಟರದಲ್ಲಿ) ಯಲ್ಲಿಒಟ್ಟಾರೆಯಾಗಿ ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **Dr. Jagadeesh. G. Roddannavar** ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಕುರಿತು. ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸಮಗ್ರವಾಗಿ ಪರಿಶೀಲಿಸಿ ಸ್ನಾತಕ ಬಿ. ಎಡ್. ಪದವಿ (1 ರಿಂದ 4ನೇ ಸೆಮಿಸ್ಟರದಲ್ಲಿ) ಯಲ್ಲಿಒಟ್ಟಾರೆಯಾಗಿ ಅತೀ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ .Dr. Jagadeesh.G. Roddannavar ಇವರ ಹೆಸರಿನಲ್ಲಿ ಸುವರ್ಣಪದಕ ಪ್ರದಾನ ಮಾಡಲು ಒಪ್ಪಿ ಅನುಮೋದಿಸಿತು.

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.



ಕುಲಸಚಿವರು                ಕುಲಪತಿಗಳು

## ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.Ed. ಪದವಿ (1 ರಿಂದ 4ನೇ ಸೆಮಿಸ್ಟರದಲ್ಲಿ) ಯಲ್ಲಿ ಒಟ್ಟಾರೆಯಾಗಿ ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ Dr. Jagadeesh. G. Roddannavar ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕವನ್ನುಸ್ಥಾಪಿಸುವ ಪ್ರಸ್ತಾವನೆ ಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು.



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 13) ವಿಷಯ–: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ **(Physical Chemistry as Specialization)** ಪದವಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ **Prof. S.A. Chimatadar** ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆ ಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

01. 1) Dr, S.B. Koujalagi, Associate Professor in Chemistry, KLES PC Jabin Science College Hubballi.
2) Dr, Deepak Munavalli Lecture in Chemistry, KLES PC Jabin Science College Hubballi.
3) Dr, S.V. Madawale, Associate Professor in Chemistry, KLES JT Arts Science and Commerce College,Gadag.
4) Dr (smt) M.S. Salunke Professor in Chemistry, Karnatak Science College, Dharwad.

ಇವರು ದಿನಾಂಕ:-31-07-2024 ರ ಪತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ (Physical Chemistry as Specialization) ಪದವಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ Prof. S.A. Chimatadar ಇವರ ಹೆಸರಿನಲ್ಲಿ ಸುವರ್ಣ ಪದಕ ಪ್ರದಾನ ಮಾಡಲು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಇಚ್ಛಿಸಿ ವಿನಂತಿಸಿರುವರು.

02. ಈ ಕುರಿತು ತಿಳಿಸುವುದೇನೆಂದರೆ ದಿನಾಂಕ: 24-07-2024 ರಂದು ಜರುಗಿದ ಸಿಂಡಿಕೇಟ ಸಭೆ (ಕಲಂ ನಂ:20)ಯಲ್ಲಿ ನಿರ್ಣಯಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸುವರ್ಣಪದಕವನ್ನು ಸ್ಥಾಪಿಸಲು ರೂ. 3,00,000/- (ರೂಪಾಯಿ ಮೂರು ಲಕ್ಷ ಗಳು ಮಾತ್ರ) ಗಳ ದತ್ತಿ ಮೊತ್ತವನ್ನು ಠೇವಣಿ ಮಾಡಿಕೊಳ್ಳುವಂತೆ ಪರಿಷ್ಕರಣೆ ಮಾಡಿ ನಿಗದಿಪಡಿಸಲಾಗಿದೆ. ಸದರಿ ವಿಷಯದ ಕುರಿತು ದಾನಿಗಳು ಹಣಕಾಸು ಅಧಿಕಾರಿಗಳು ಕ.ವಿ.ವಿ ಧಾರವಾಡ ಇವರ ಹೆಸರಿನಲ್ಲಿ ರೂ. 3,00,000/- (ರೂಪಾಯಿ ಮೂರು ಲಕ್ಷ ಮಾತ್ರ) ಗಳನ್ನು ಚೆಕ್ಕಳ (ಚೆಕ್-ನಂ. 446041 ದಿನಾಂಕ: 29.07.2024 ಮತ್ತು ಚೆಕ್ ನಂ.764015 ದಿನಾಂಕ: 04.02.2025) ಮೂಲಕ ಪಾವತಿಸಿದ್ದಾರೆ. ಪ್ರಚಲಿತ ಅನುಶಾಸನದ ದತ್ತಿ ನಿಧಿಯ ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ಸುವರ್ಣಪದಕವನ್ನು ತಯಾರಿಸಲಾಗುವುದು.

03. ಈ ಪ್ರಸ್ತಾವನೆಯು ವಿಶ್ವವಿದ್ಯಾಲಯದ ಪ್ರಚಲಿತ ಅನುಶಾಸನದ ಪ್ರಕಾರ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುತ್ತಿದ್ದು, ದಿನಾಂಕ: 12-12-2015 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ-13 ರಲ್ಲಿನ ನಿರ್ದೇಶನದಂತೆ Prof. S.A. Chimatadar ಇವರ ಸ್ವವಿವರದ ಮಾಹಿತಿಯನ್ನು ಪೂರೈಸಿದ್ದಾರೆ.

04. ದಿನಾಂಕ: 26-04-2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ- 08, ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ (Physical Chemistry as Specialization) ಪದವಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ Prof. S.A. Chimatadar ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಕುರಿತು. ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸಮಗ್ರವಾಗಿ ಪರಿಶೀಲಿಸಿ Prof. S.A. Chimatadar ಇವರ ಹೆಸರಿನಲ್ಲಿ ಸುವರ್ಣಪದಕ ಪ್ರದಾನ ಮಾಡಲು ಒಪ್ಪಿ ಅನುಮೋದಿಸಿತು.

05. ಕಾರಣ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ (Physical Chemistry as Specialization) ಪದವಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ Prof. S.A. Chimatadar ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸುವರ್ಣ ಪದಕವನ್ನು ಸ್ಥಾಪಿಸುವ ಪ್ರಸ್ತಾವನೆ ಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು.**

ಕುಲಸಚಿವರು



ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 14) ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಫ್ರೆಂಚ್ ವಿಷಯದಲ್ಲಿ 1 ರಿಂದ 6ನೇ ಸೆಮಿಸ್ಟರದಲ್ಲಿ ಒಟ್ಟಾರೆಯಾಗಿ ಅತೀ ಹೆಚ್ಚು ಅಂಕಗಳನ್ನು ಪಡೆದ **"ಕರ್ನಾಟಕ ಕಲಾ ಮಹಾವಿದ್ಯಾಲಯದ"** ವಿದಾರ್ಥಿ/ವಿದ್ಯಾರ್ಥಿನಿಗೆ **"Robert Daddapuri General Secretary KPCC"** ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ನಿಯಮಗಳಲ್ಲಿ ಅಲ್ಪ ಮಾರ್ಪಾಡು ಮಾಡುವ ವಿಷಯದ ಪ್ರಸ್ತಾವನೆ ಕುರಿತು ದಿನಾಂಕ:08-11-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ (ಕಲಂ. ನಂ-20) ರ ನಿರ್ಣಯದಂತೆ ಸದರಿ ಪ್ರಸ್ತಾವನೆಯನ್ನು ಮತ್ತೊಮ್ಮೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಪರಿಶೀಲಿಸಲು ಮತ್ತು ದೃಢೀಕರಿಸಲು ಮಂಡಿಸಲಾಗಿತ್ತು ಸದರಿ ಪ್ರಸ್ತಾವನೆ ಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

01. Robert Daddapuri, General Secretary, KPCC, 'Jenugudu'-58, Vivekanand Nagar, Infront of Modern Hall, Vidyagiri, Dharwad-580004 ಅವರು ದಿನಾಂಕ: 19-09-2024 ರ ಪತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯವಾದ ಕರ್ನಾಟಕ ಕಲಾ ಮಹಾವಿದ್ಯಾಲಯದ ಧಾರವಾಡದಲ್ಲಿ ಫ್ರೆಂಚ್ ವಿಷಯದಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದ ವಿದಾರ್ಥಿ/ವಿದ್ಯಾರ್ಥಿನಿಗೆ **"Robert Daddapuri General Secretary KPCC"** ಸುವರ್ಣಪದಕವನ್ನು ಪ್ರದಾನ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ವಿಶ್ವವಿದ್ಯಾಲಯದಲ್ಲಿ ಸದರಿ ಸುವರ್ಣಪದಕವನ್ನು ಸ್ಥಾಪಿಸಲಾಗಿದೆ.

02. ಸದರಿ ದಾನಿಗಳ ಮನವಿ ಪತ್ರ ದಿನಾಂಕ: 19-09-2024 ರ ವಿನಂತಿ ಮೇರೆಗೆ ತಿಳಿಸುವುದೇನೆಂದರೆ ದಿನಾಂಕ: 11-06-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ (ಕಲಂ. ನಂ-09) ಮತ್ತು ದಿನಾಂಕ: 11-06-2024 ರಂದು ಜರುಗಿದ ಸಿಂಡಿಕೇಟ ಸಭೆ (ಕಲಂ. ನಂ-32) ಯಲ್ಲಿ ದಾನಿಗಳು ತಿಳಿಸಿದ ನಿಯಮಗಳ ಅನುಸಾರ ಸುವರ್ಣಪದಕವನ್ನು 74ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಿಂದ ಪ್ರದಾನ ಮಾಡುವ ಕ್ರಮ ಜರುಗಿಸುವಂತೆ ಅನುಮೋದಿಸಲಾಗಿದೆ.

03. ಅದರಂತೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಸ್ನಾತಕ ಬಿಎ ಪದವಿಯ ಫ್ರೆಂಚ್ ವಿಷಯದಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳ ಮಾಹಿತಿ ಪೂರೈಸುವಂತೆ ಪರೀಕ್ಷಾ ವಿಭಾಗಕ್ಕೆ ಕೋರಲಾಗಿತ್ತು. ಅದರಂತೆ ಪರೀಕ್ಷಾ ವಿಭಾಗದಿಂದ ಸನ್ 2022-23 ನೇ ಸಾಲಿನಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಫ್ರೆಂಚ್ ವಿಷಯದಲ್ಲಿ ಯಾವ ವಿದ್ಯಾರ್ಥಿಗಳು ಲಭ್ಯವಿಲ್ಲವೆಂದು ತಿಳಿಸಿದ ಪ್ರಯುಕ್ತ **"Robert Daddapuri General Secretary KPCC"** ಸುವರ್ಣಪದಕವನ್ನು ವಿಶ್ವವಿದ್ಯಾಲಯದ 74ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಿರುವುದಿಲ್ಲ.

04. ಕಾರಣ ದಾನಿಗಳು ಸುವರ್ಣಪದಕ ಪ್ರದಾನ ಮಾಡಲು ರೂಪಿಸಿರುವ ಪ್ರಸ್ತುತ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲು ವಿನಂತಿಸಿರುವಂತೆ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಫ್ರೆಂಚ್ ವಿಷಯದಲ್ಲಿ ಯಾವುದೇ ವಿದ್ಯಾರ್ಥಿ ಇರದೆ ಇದ್ದ ಸಂದರ್ಭದಲ್ಲಿ ಸದರಿ ಸುವರ್ಣಪದಕವನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಯಾವುದೇ ಕೋರ್ಸಿನ (1 ರಿಂದ 6ನೇ ಸೆಮಿಸ್ಟರಿನ) ಫೆಂಚ್ ವಿಷಯದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ **"Robert Daddapuri General Secretary KPCC"** ಸುವರ್ಣಪದಕ ಪ್ರದಾನ ಮಾಡಲು ಪ್ರಸ್ತಾವನೆಯನ್ನು ದಿನಾಂಕ:08-11-2024 ರಂದು ಮಂಡಿಸಲಾಗಿತ್ತು. ಸದರಿ ವಿದ್ಯಾವಿಷಯಕ ಪರಿಷತ್ ಸಭೆಯು ಈ ಕೆಳಗಿನಂತೆ ನಿರ್ಣಯಿಸಲಾಯಿತು.

ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ:20 ದಿನಾಂಕ: 08-11-2024 ನಡಾವಳಿಗಳು:-

ಕರ್ನಾಟಕ ಕಲಾ ಮಹಾವಿದ್ಯಾಯಲಯದ ಸ್ನಾತಕ ಬಿ.ಎ ಪದವಿಯ ಫೆಂಚ್ ಮುಖ್ಯ ವಿಷಯ (Optional Paper) ದಲ್ಲಿ 1 ರಿಂದ 6ನೇ ಸೆಮಿಸ್ಟರನಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗೆ ಇಲ್ಲವೇ ಕರ್ನಾಟಕ ಕಲಾ ಮಹಾವಿದ್ಯಾಲಯದ ಸ್ನಾತಕ (BA, B.Com, BBA, home Science, BTTM or BSW) ಪದವಿಯ 1 ರಿಂದ 4ನೇ ಸೆಮಿಸ್ಟರನ ಫ್ರೆಂಚ್ ವಿಷಯವನ್ನು (MEL or Basic) ವಿಷಯವನ್ನು ಅಭ್ಯಸಿಸಿ ಅತೀ ಹೆಚ್ಚಿನ ಅಂಕಗಳನ್ನು ಪಡೆದಿರುವ ಅಭ್ಯರ್ಥಿಗೆ ಅಥವಾ ಈ ಮೇಲಿನ ಎರಡೂ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಲಭ್ಯವಿರದಿದ್ದರೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಫ್ರೆಂಚ್ ವಿಷಯವನ್ನು 1 ರಿಂದ 4ನೇ ಸೆಮಿಸ್ಟರವರೆಗೆ ಫ್ರೆಂಚ್ ವಿಷಯ (MEL or AECC) ವನ್ನು ಅಭ್ಯಸಿಸಿ ಅತೀ ಹೆಚ್ಚಿನ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗೆ **"Robert Daddapuri General Secretary KPCC"** ಸುವರ್ಣಪದಕವನ್ನು ಪ್ರದಾನ ಮಾಡುವುದು. ಈ ಕುರಿತಾದ ಪ್ರಸ್ತಾವನೆಯಲ್ಲಿಯಂತೆ ಸುವರ್ಣಪದಕ ಶಿರ್ಷಿಕೆ **"Robert Daddapuri General Secretary KPCC"** ಯನ್ನು ಹೆಸರಿನ ಮುಂದೆ **"General Secretary KPCC"** ಯಂತೆ ಪದನಾಮ ಸೇರಿಸಬಹುದೇ ಎಂಬ ಬಗ್ಗೆ ಪರಿಶೀಲಿಸಿದ ಪ್ರಸ್ತಾವನೆಯನ್ನು ಮರು ಮಂಡಿಸಲು ನಿರ್ಣಯಿಸಿ ಮುಂದುಡಲಾಯಿತು.

05. ಅದರಂತೆ ಶಿರ್ಷಿಕೆ **"Robert Daddapuri General Secretary KPCC"** ಯನ್ನುವ ಹೆಸರಿನ ಮುಂದೆ **"General Secretary KPCC"** ಯಂತೆ ಪದನಾಮ ಸೇರಿಸಬಹುದೇ ಎಂಬುದರ ಬಗ್ಗೆ ಮಾನ್ಯ ಕುಲಪತಿಗಳ ಪರಿಶೀಲನೆಗಾಗಿ ಹಾಗೂ ಸೂಕ್ತ ಆದೇಶಕ್ಕಾಗಿ ನಿವೇದನೆಯನ್ನು ಮಂಡಿಸಲಾಗಿತ್ತು.



**ಕುಲಸಚಿವರು** **ಕುಲಪತಿಗಳು**

06. ಸದರಿ ವಿಷಯದ ಬಗ್ಗೆ ಪ್ಯಾರಾ ನಂ:43 ರ ಮಾನ್ಯ ಕುಲಪತಿಗಳ ಆದೇಶವು **(ಸುವರ್ಣಪದಕಗಳು ಪಕ್ಷಾತೀತವಾಗಿರಬೇಕು ಕಾರಣ ಅವರ ಹೆಸರನ್ನು ಮಾತ್ರ ನಮೂದಿಸಬಹುದು)** ಅಂತಾ ಇರುತ್ತದೆ. ಆದ ಕಾರಣ ಸದರಿ ಸುವರ್ಣಪದಕದ ಹೆಸರನ್ನು **"Robert Daddapuri General Secretary KPCC"** ಬದಲಿಗೆ ದಾನಿಗಳು ಸೂಚಿಸಿದಂತೆ ಇನ್ನುಮುಂದೆ **"Robert S/o Francis Daddapuri Gold Medal"** ಎಂಬ ಹೆಸರಿನಿಂದ ಸುವರ್ಣಪದಕ ಪ್ರದಾನ ಮಾಡುವ ಕುರಿತು ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಪರಿಶೀಲನೆಗಾಗಿ ಮತ್ತು ದೃಡೀಕರಣಕ್ಕಾಗಿ ಮಂಡಿಸಲಾಗಿತ್ತು.

07. ದಿನಾಂಕ: 26-04-2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ- 06, ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಫ್ರೆಂಚ್ ವಿಷಯದಲ್ಲಿ 1 ರಿಂದ 6ನೇ ಸೆಮಿಸ್ಟರದಲ್ಲಿ ಒಟ್ಟಾರೆಯಾಗಿ ಅತೀ ಹೆಚ್ಚು ಅಂಕಗಳನ್ನು ಪಡೆದ "ಕರ್ನಾಟಕ ಕಲಾ ಮಹಾವಿದ್ಯಾಲಯದ" ವಿದಾರ್ಥಿ/ವಿದ್ಯಾರ್ಥಿನಿಗೆ "Robert Daddapuri General Secretary KPCC" ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ನಿಯಮಗಳಲ್ಲಿ ಅಲ್ಪ ಮಾರ್ಪಾಡು ಮಾಡುವ ವಿಷಯದ ಪ್ರಸ್ತಾವನೆ ಕುರಿತು ದಿನಾಂಕ:08-11-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ (ಕಲಂ. ನಂ-20) ರ ನಿರ್ಣಯದಂತೆ ಸದರಿ ಪ್ರಸ್ತಾವನೆಯನ್ನು ಮತ್ತೋಮ್ಮೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಪರಿಶೀಲಿಸಲು ಮತ್ತು ದೃಢೀಕರಿಸುವ ಸುವರ್ಣಪದಕದ ಹೆಸರನ್ನು **"Robert Daddapuri General Secretary KPCC"** ಬದಲಿಗೆ ದಾನಿಗಳು ಸೂಚಿಸಿದಂತೆ ಇನ್ನು ಮುಂದೆ **"Robert S/o Francis Daddapuri"** ಎಂಬ ಹೆಸರಿನಿಂದ ಸುವರ್ಣಪದಕ ಪ್ರದಾನ ಮಾಡುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸಮಗ್ರವಾಗಿ ಪರಿಶೀಲಿಸಿ **"Robert S/o Francis Daddapuri"** ಬದಲಾಗಿ **"Robert Francis Daddapuri"** ಎಂಬ ಶೀರ್ಷಿಕೆಯಲ್ಲಿ ಸುವರ್ಣಪದಕ ಸ್ಥಾಪಿಸಲು ಒಪ್ಪಿ ಅನುಮೋದಿಸಿತು.

08. ಕಾರಣ, ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಫ್ರೆಂಚ್ ವಿಷಯದಲ್ಲಿ 1 ರಿಂದ 6ನೇ ಸೆಮಿಸ್ಟರದಲ್ಲಿ ಒಟ್ಟಾರೆಯಾಗಿ ಅತೀ ಹೆಚ್ಚು ಅಂಕಗಳನ್ನು ಪಡೆದ "ಕರ್ನಾಟಕ ಕಲಾ ಮಹಾವಿದ್ಯಾಲಯದ" ವಿದಾರ್ಥಿ/ವಿದ್ಯಾರ್ಥಿನಿಗೆ "Robert Daddapuri General Secretary KPCC" ಇವರ ಹೆಸರಿನಲ್ಲಿ ಸುವರ್ಣಪದಕವನ್ನು ಪ್ರದಾನ ಮಾಡುವ ಹೆಸರಲ್ಲಿ ಅಲ್ಪ ಮಾರ್ಪಾಡು ಮಾಡುವ ವಿಷಯದ ಪ್ರಸ್ತಾವನೆ ಕುರಿತು ದಿನಾಂಕ:08-11-2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ (ಕಲಂ. ನಂ-20) ರ ನಿರ್ಣಯದಂತೆ ಸದರಿ ಪ್ರಸ್ತಾವನೆಯನ್ನು ಮತ್ತೋಮ್ಮೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಪರಿಶೀಲಿಸಲು ಮತ್ತು ದೃಢೀಕರಿಸಲು ಮಂಡಿಸಲಾಗಿತ್ತು ಸದರಿ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಮತ್ತೋಮ್ಮೆ ಪರಿಶೀಲಿಸಿ "Robert S/o Francis Daddapuri Gold Medal" ಎಂದು ಮರುನಾಮಕರಣ ಮಾಡಿ ಸಿಂಡಿಕೇಟ ಸಭೆಯು ಅನುಮೋದಿಸಿತು.**

-

-

-

-

-



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 15) ವಿಷಯ–:** ಸ್ನಾತಕೋತ್ತರ/ಬಿ.ಪಿ.ಇಡಿ/ಬಿ.ಇಡಿ. ಹಾಗೂ ಡಿಪ್ಲೋಮಾ ಕೋರ್ಸುಗಳ ಡಿಜಿಟಲ್ ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಪರಿಶೀಲಿಸುವ ಕುರಿತು ಆಡಳಿತ ಮಂಡಳಿಯ ಸಭೆಯು ರಚಿಸಿದ ಸಮಿತಿಯಲ್ಲಿ ಸ್ನಾತಕೋತ್ತರ ಶಿಕ್ಷಕರ ಸಂಘದ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸ್ನಾತಕೋತ್ತರ ಶಿಕ್ಷಕರನ್ನು ನೇಮಕ ಮಾಡುವ ಕುರಿತು ಬರೆದ ಮನವಿ ಪತ್ರಗಳನ್ನು ಆಡಳಿತ ಮಂಡಳಿಯ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ:

ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಸ್ನಾತಕೋತ್ತರ /ಬಿ.ಇಡಿ. /ಬಿ.ಪಿ.ಇಡಿ. ಹಾಗೂ ಡಿಪ್ಲೋಮಾ ಕೋರ್ಸುಗಳ ಉತ್ತರ ಪತ್ರಿಕೆಯ ಮೌಲ್ಯಮಾಪನ ಕಾರ್ಯವನ್ನು ಡಿಜಿಟಲ್ ಮೌಲ್ಯಮಾಪನ ಮೂಲಕ ಮಾಡಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಡಿಜಿಟಲ್ ಮೌಲ್ಯಮಾಪನ ಕಾರ್ಯ ರದ್ದು ಪಡಿಸುವ ವಿಷಯವನ್ನು ಪರಿಶೀಲಿಸಲು ಆಡಳಿತ ಮಂಡಳಿ ಕಲಂ ತಯಾರಿಸುವಂತೆ ಶ್ರೀ.ಶ್ಯಾಮ ಡಿ. ಮಲ್ಲನಗೌಡರ, ಸಿಂಡಿಕೇಟ ಸದಸ್ಯರು ಹಾಗೂ ಡಾ.ಶಿವಾನಂದ ವಿ. ನಾಯಕ, ಸಿಂಡಿಕೇಟ ಸದಸ್ಯರು ಇವರು ಪ್ರಸ್ತಾವನೆ ಸಲ್ಲಿಸಿದ್ದನ್ನು ಪರಿಗಣಿಸಿ ಮಾನ್ಯ ಕುಲಪತಿಗಳ ಆದೇಶದಂತೆ ಕಲಂ ತಯಾರಿಸಿ ದಿನಾಂಕ:13.05.2025 ರಂದು ನಡೆದ ಆಡಳಿತ ಮಂಡಳಿ ಸಭೆಗೆ ಮಂಡಿಸಲಾಗಿತ್ತು. ಸದರ ಸಭೆಯು ಕೆಳಗಿನಂತೆ ನಿರ್ಣಯಿಸಿದೆ.

**ಸ್ನಾತಕೋತ್ತರ /ಬಿ.ಪಿ.ಇಡಿ. /ಬಿ.ಇಡಿ. ಹಾಗೂ ಡಿಪ್ಲೋಮಾ ಕೋರ್ಸುಗಳ ಡಿಜಿಟಲ್ ಮೌಲ್ಯಮಾಪನ ಕಾರ್ಯ ಬಗ್ಗೆ ಶ್ರೀ. ಶ್ಯಾಮ ಡಿ. ಮಲ್ಲನಗೌಡರ, ಸಿಂಡಿಕೇಟ ಸದಸ್ಯರು ಹಾಗೂ ಡಾ.ಶಿವಾನಂದ ವಿ. ನಾಯಕ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ಪ್ರಸ್ತಾವನೆಗಳನ್ನು ಆಡಳಿತ ಮಂಡಳಿ ಸಭೆಯ ಪರಿಶೀಲಿಸಿ ಸ್ನಾತಕೋತ್ತರ /ಬಿ.ಪಿ.ಇಡಿ. /ಬಿ.ಇಡಿ. ಹಾಗೂ ಡಿಪ್ಲೋಮಾ ಕೋರ್ಸುಗಳ ಡಿಜಿಟಲ್ ಮೌಲ್ಯಮಾಪನ ಕಾರ್ಯ ಮುಂದುವರಿಸಲು ಅಥವಾ ಕರಾರು ಒಪ್ಪಂದವನ್ನು ರದ್ದುಗೊಳಿಸಲು ಇರುವ ಸಾಧಕ ಬಾಧಕಗಳನ್ನು ಪರಿಶೀಲಿಸಿ ವೆಚ್ಚ/ಉಳಿತಾಯ ವಿವರಗಳನ್ನು ನೀಡಲು ಈ ಕೆಳ ಕಾಣಿಸಿದಂತೆ ಕಾಸ್ಟ್ ಅನಾಲಿಸಿಸ್ ಸಮಿತಿ ರಚಿಸಲು ತೀರ್ಮಾನಿಸಲಾಯಿತು.**

| | |
|---|---|
| **1. ಕುಲಸಚಿವರು (ಮೌಲ್ಯಮಾಪನ)** | **ಅಧ್ಯಕ್ಷರು** |
| **2. ಶ್ರೀ. ಶ್ಯಾಮ ಡಿ. ಮಲ್ಲನಗೌಡರ, ಸಿಂಡಿಕೇಟ ಸದಸ್ಯರು** | **ಸದಸ್ಯರು** |
| **3. ಡಾ. ಬಸವರಾಜ ಗೊರವರ, ಸಿಂಡಿಕೇಟ ಸದಸ್ಯರು** | **ಸದಸ್ಯರು** |
| **4. ಶ್ರೀಮತಿ. ಅಂಜನಾ ಬಸನಗೌಡರ, ಸಿಂಡಿಕೇಟ ಸದಸ್ಯರು** | **ಸದಸ್ಯರು** |
| **5. ಹಣಕಾಸು ಅಧಿಕಾರಿಗಳು** | **ಸದಸ್ಯರು** |
| **6. ಉಪಕುಲಸಚಿವರು, ಪರೀಕ್ಷಾ ವಿಭಾಗ** | **ಸಂಚಾಲಕರು** |

ಆಡಳಿತ ಮಂಡಳಿ ಸಭೆಯಲ್ಲಿ ರಚಿಸಿದ ಸಮಿತಿಯ ವಿಷಯವಾಗಿ ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಸಂಘ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸ್ನಾತಕೋತ್ತರ ಶಿಕ್ಷಕರ ಸಂಘ ಇವರು ಪತ್ರ ಬರೆದು ತನಿಖಾ ಸಮಿತಿಯಲ್ಲಿ ಕೇವಲ ಸಿಂಡಿಕೇಟ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಮಾತ್ರ ಸಮಿತಿ ಸದಸ್ಯರನ್ನಾಗಿ ಮಾಡಿ ನಿರ್ಣಯವನ್ನು ಕೈಗೊಳ್ಳಲಾಗುತ್ತಿದೆ. ಇಂತಹ ನಿರ್ಣಯಗಳು ವಿಶ್ವವಿದ್ಯಾಲಯದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾಲಯಕ್ಕೆ ಮಾರಕವಾಗುತ್ತಿದೆ. ಆದಕಾರಣ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅಭಿವೃದ್ಧಿಯ ದೃಷ್ಟಿಯಿಂದ ಈಗಾಗಲೇ ರಚಿಸಲಾದ ಇಂತಹ ಎಲ್ಲ ಸಮಿತಿಗಳನ್ನು ರದ್ದುಪಡಿಸಿ ಶಿಕ್ಷಕ ಸಂಘಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಗಳನ್ನು ರಚಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಸಂಘ ವಿನಂತಿಸುತ್ತದೆ. ಒಂದು ವೇಳೆ ಸಂಘದ ಪದಾಧಿಕಾರಿಗಳನ್ನು ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳದೇ ನಿರ್ಣಯಿಸಲಾದ ನಿರ್ಣಯವನ್ನು ನಮ್ಮ ಸಂಘ ಒಪ್ಪಿಕೊಳ್ಳುವುದಿಲ್ಲ ಹಾಗೂ ನಮ್ಮ ಶಿಕ್ಷಕರು ಮೌಲ್ಯಮಾಪನ ಕಾರ್ಯದಿಂದ ದೂರು ಉಳಿಯುವ ನಿರ್ಣಯವನ್ನು ಕೈಗೊಳ್ಳಲು ಬಯಸುತ್ತೇವೆ ಎಂದು ಪತ್ರದಲ್ಲಿ ತಿಳಿಸಿರುತ್ತಾರೆ.



ಕುಲಸಚಿವರು ಕುಲಪತಿಗಳು

ಆದ್ದರಿಂದ, ಮಾನ್ಯ ಕುಲಪತಿಗಳ ಅನುಮೋದನೆಯಂತೆ ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಸಂಘ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸ್ನಾತಕೋತ್ತರ ಶಿಕ್ಷಕರ ಸಂಘದ ಪ್ರತಿನಿಧಿಗಳನ್ನು ಸಮಿತಿಯಲ್ಲಿ ನೇಮಕ ಮಾಡುವ ಕುರಿತು ಬರೆದ ಪತ್ರಗಳಲ್ಲಿಯ ವಿಷಯವಾಗಿ ಸಿಂಡಿಕೇಟ್ ಕಲಂ ತಯಾರಿಸಿ ಆಡಳಿತ ಮಂಡಳಿಯ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಸ್ನಾತಕೋತ್ತರ/ಬಿ.ಪಿ.ಇಡಿ/ಬಿ.ಇಡಿ. ಹಾಗೂ ಡಿಪ್ಲೋಮಾ ಕೋರ್ಸುಗಳ ಡಿಜಿಟಲ್ ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಪರಿಶೀಲಿಸುವ ಕುರಿತು ಆಡಳಿತ ಮಂಡಳಿಯ ಸಭೆಯು ರಚಿಸಿದ ಸಮಿತಿಯಲ್ಲಿ ಸ್ನಾತಕೋತ್ತರ ಶಿಕ್ಷಕರ ಸಂಘದ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸ್ನಾತಕೋತ್ತರ ಶಿಕ್ಷಕರನ್ನು ನೇಮಕ ಮಾಡುವ ಕುರಿತು ಬರೆದ ಮನವಿ ಪತ್ರಗಳನ್ನು ಆಡಳಿತ ಮಂಡಳಿಯ ಸಭೆಯು ಪರಿಶೀಲಿಸಿ ಈಗಿರುವ ಸಮಿತಿಯನ್ನು ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 16) ವಿಷಯ-:** 2025-26ನೇ ಸಾಲಿನಲ್ಲಿ ಜರುಗುವ ಸ್ನಾತಕ/ಸ್ನಾತಕೋತ್ತರ ಹಾಗೂ ಇತರೆ ಕೋರ್ಸುಗಳ ಪರೀಕ್ಷೆಗಳಿಗೆ Dispatch Covers 15x12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9x4 Covers ಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯ ನಿರ್ಣಯವನ್ನು ಆಡಳಿತ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣೆ:**

2025-26ನೇ ಸಾಲಿನಲ್ಲಿ ಜರುಗುವ ಸ್ನಾತಕ/ಸ್ನಾತಕೋತ್ತರ ಹಾಗೂ ಇತರೆ ಕೋರ್ಸುಗಳ ಪರೀಕ್ಷೆಗಳಿಗೆ Dispatch Covers 15x12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9x4 Covers ಗಳನ್ನು ಎಂ.ಎಸ್.ಐ.ಎಲ್ ಬೆಂಗಳೂರು ಇವರಿಂದ ನೇರವಾಗಿ ಖರೀದಿಸಲು ದಿನಾಂಕ:16.06.2025 ರಂದು ನಡೆದ ದೊಡ್ಡ ಖರೀದಿ ಸಮಿತಿಯ ಒಪ್ಪಿಗೆ ಪಡೆಯಲಾಗಿದೆ. ದೊಡ್ಡ ಖರೀದಿ ಸಮಿತಿಯ ಸಭೆಯು ಕಲಂ ನಂ-01 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**"2025-26ನೇ ಸಾಲಿನಲ್ಲಿ ಜರುಗುವ ಸ್ನಾತಕ/ಸ್ನಾತಕೋತ್ತರ ಹಾಗೂ ಇತರೆ ಕೋರ್ಸುಗಳ ಪರೀಕ್ಷೆಗಳಿಗೆ Dispatch Covers 15x12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9x4 Covers, ಗಳನ್ನು ಸಂಗ್ರಹದಲ್ಲಿ ಇರುವ ಹಾಗು ಬೇಡಿಕೆ ಅನುಲಕ್ಷಿಸಿ, ಖರೀದಿಸಲು ಎಂ.ಎಸ್.ಐ.ಎಲ್. ಬೇಂಗಳೂರು ಇವರಿಂದ ಖರೀದಿಸಲು & ಸರ್ಕಾರದ ಆರ್ಥಿಕ ಇಲಾಖೆಯ ಪತ್ರ ಸಖ್ಯೆ ಆಇ/747/ವೆಚ್ಚ-12/2024 ದಿನಾಂಕ :01.10.2024 ರಲ್ಲಿ ಎಂ.ಎಸ್.ಐ.ಎಲ್. ಇವರಿಂದ ನೇರವಾಗಿ ಖರೀದಿಸಲು ನೀಡಿರುವ ನಿರ್ದೇಶನದಂತೆ ದರಪಟ್ಟಿ ಪ್ರಕಾರ ಅಂದಾಜು ರೂ.18,50,000 + ಜಿ.ಎಸ್.ಟಿ. ವೆಚ್ಚ ಮಾಡಲು ದೊಡ್ಡ ಖರೀದಿ ಸಮಿತಿಯು ಒಪ್ಪಿಗೆ ಸೂಚಿಸಿತು"**

ಪರೀಕ್ಷಾ ವಿಭಾಗಕ್ಕೆ ಅವಶ್ಯವಿರುವ Dispatch Covers 15x12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9x4 Covers ಗಳ ಮಾಹಿತಿಯು ಈ ಕೆಳಗಿನಂತಿದೆ.

| Sl.No | Particular | Stock in Store | Indent |
|---|---|---|---|
| 01 | Dispatch Covers 15x12 (90 GSM) | Nil | 2,00,000 |
| 02 | Dispatch Covers 9x4 (90 GSM) | Nil | 1.00,000 |

ಮುಂದುವರೆದು ಸರ್ಕಾರದ ಆರ್ಥಿಕ ಇಲಾಖೆಯ ಪತ್ರ ಸಖ್ಯೆ ಆಇ/747/ವೆಚ್ಚ-12/2024 ದಿನಾಂಕ:01.10.2024 ರಲ್ಲಿ ಎಂ.ಎಸ್.ಐ.ಎಲ್ ಇವರಿಂದ ನೇರವಾಗಿ ಖರೀದಿಸಲು ನಿರ್ದೇಶನ ನೀಡಿರುತ್ತದೆ. ಸದರಿ Dispatch Covers 15x12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9x4 Covers ಗಳನ್ನು ಈ ಹಿಂದೆ ಖರೀದಿಸಿದ ಆಧಾರದ ಮೇಲೆ ಅಂದಾಜು ರೂ.18,50,000 + ಜಿ.ಎಸ್.ಟಿ. ಚಾರ್ಜ ವೆಚ್ಚ ತಗಲಬಹುದು. ಸದರ ವೆಚ್ಚವನ್ನು ಪರೀಕ್ಷಾ ವಿಭಾಗದ 2025-26ನೇ ಸಾಲಿನ ಆಯವ್ಯಯ ಸಂಖ್ಯೆ 20024 ರಿಂದ ಭರಿಸುವುದು.

ಆದ್ದರಿಂದ ಎಂ.ಎಸ್.ಐ.ಎಲ್ ಬೆಂಗಳೂರು ಇವರಿಂದ 2025-26ನೇ ಸಾಲಿನಲ್ಲಿ ಜರುಗುವ ಸ್ನಾತಕ/ಸ್ನಾತಕೋತ್ತರ ಹಾಗೂ ಇತರೆ ಕೋರ್ಸುಗಳ ಪರೀಕ್ಷೆಗಳಿಗೆ Dispatch Covers 15x12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9x4 Covers ಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯು ನಿರ್ಣಯವನ್ನು ಆಡಳಿತ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

**ಕುಲಸಚಿವರು**



**ಕುಲಪತಿಗಳು**

<u>ನಿರ್ಣಯ</u>

**2025-26ನೇ ಸಾಲಿನಲ್ಲಿ ಜರುಗುವ ಸ್ನಾತಕ/ ಸ್ನಾತಕೋತ್ತರ ಹಾಗೂ ಇತರೆ ಕೋರ್ಸುಗಳ ಪರೀಕ್ಷೆಗಳಿಗೆ Dispatch Covers 15X12 ಹಾಗೂ ಪರೀಕ್ಷಾ ವಿಭಾಗದ ದೈನಂದಿನ ಕಚೇರಿ ಕೆಲಸಕ್ಕೆ Dispatch Covers 9X4 Covers ಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯ ನಿರ್ಣಯಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಅಗತ್ಯತೆಗೆ ಅನುಗುಣವಾಗಿ ಖರೀದಿಸಲು ಅನುಮೋದಿಸಿತು.**

-

-

-

-

-

-

-

-

-

-

-

-

-

-

-

-

-

-



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 17) **ವಿಷಯ**–: ಕಡಲಜೀವಶಾಸ್ತ್ರ ವಿಭಾಗ (Marine Biology), ಕಾರವಾರದಲ್ಲಿ ಸಾಗರ ಹವಾಮಾನ ಯಂತ್ರವು Wave Rider Buoy (WRB) ಕಳುವಾದ ವಿಚಾರಣಾ ವರದಿ ಕುರಿತು.

**ಟಿಪ್ಪಣಿ:**

ಕವಿವಿ ಸ್ನಾತಕೋತ್ತರ ಕೇಂದ್ರ ಕಡಲಜೀವಶಾಸ್ತ್ರ ವಿಭಾಗ (Marine Biology), ಕಾರವಾರಕ್ಕೆ National Centre for Ocean Information Services (INCOIS) ಅಡಿ ಪ್ರೊ. ಜಿ.ಎಲ್. ರಾಠೋಡ, ಪ್ರಧಾನ ಸಂಶೋಧಕರು ಹಾಗೂ ಡಾ. ಶಿವಕುಮಾರ ಹರಗಿ, ಸಹ–ಪ್ರಧಾನ ಸಂಶೋಧಕರು ಇವರಿಗೆ ಯೋಜನೆ ಮಂಜೂರಾಗಿದ್ದು, ಸದರ ಯೋಜನೆಯಡಿಯಲ್ಲಿ ಸಮುದ್ರದ ವೈಪರಿತ್ಯ ವಾತಾವರಣದ ಮಾಹಿತಿಯನ್ನು ಮುಂಚಿತವಾಗಿ ನೀಡುವ ಸಾಗರ ಹವಾಮಾನ ಯಂತ್ರವು Wave Rider Buoy (WRB) ಕಳುವಾದ ವಿಷಯದ ಕುರಿತು ಪೋಲೀಸ್ ನಿರೀಕ್ಷಕರು, ಕಾರವಾರ ಇವರು ಕೇಳಿದ ಮಾಹಿತಿಯ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಜರುಗಿಸಲು ಸಮಿತಿಯನ್ನು ರಚಿಸಲಾಗಿತ್ತು.

ಮುಂದುವರೆದು, ಸದರಿ ವಿಚಾರಣಾ ಸಮಿತಿಯು Wave Rider Buoy (WRB) ಕಳುವಾದ ವಿಷಯದ ಕುರಿತು ವಿಚಾರಣೆಯನ್ನು ಕೈಗೊಂಡು ವಿಚಾರಣಾ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಕುಲಸಚಿವರು, ಕವಿವಿ, ಧಾರವಾಡ ಇವರಿಗೆ ಸಲ್ಲಿಸಿರುತ್ತಾರೆ.

ಕಾರಣ, ವಿಚಾರಣಾ ವರದಿಯನ್ನು ಸಿಂಡಿಕೇಟ್ ಸಮಿತಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಕಡಲಜೀವಶಾಸ್ತ್ರ ವಿಭಾಗ (Marine Biology), ಕಾರವಾರದಲ್ಲಿ ಸಾಗರ ಹವಾಮಾನ ಯಂತ್ರವು Wave Rider Buoy (WRB) ಕಳುವಾದ ವಿಷಯದ ಕುರಿತು ವಿಚಾರಣೆ ಮಾಡಲು ರಚಿಸಲಾದ ಸಮಿತಿಯು ಕೈಗೊಂಡ ವರದಿಯನ್ನು ಮುಚ್ಚಿದ ಲಕೋಟೆಯನ್ನು ತೆರೆದು ಓದಲಾಯಿತು. ಸದರಿ ವಿಷಯವಾಗಿ ವಿಚಾರಣೆ ಮಾಡಲು ನಿವೃತ್ತ ನ್ಯಾಯಾಧಿಶರ ಅಧ್ಯಕ್ಷತೆಯಲ್ಲಿ ಸಮತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು**

**ಮುಂದುವರೆದು, ಡಾ. ಜಿ. ಎಲ್. ರಾಥೋಡ ಇವರು ನಿರ್ವಹಿಸುತ್ತಿರುವ ಯೋಜನೆಯನ್ನು ಮುಂದಿನ ಆದೇಶದವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯದ ಡೀನರಿಗೆ ವಹಿಸುವುದು ಮತ್ತು ಡೀನರ ನಿರ್ದೇಶನದಂತೆ ಈ ಯೋಜನೆಗೆ ಡಾ. ಶಿವಕುಮಾರ ಹರಗಿ, ಸಹ ಪ್ರಾಧ್ಯಾಪಕರು ಇವರನ್ನು ಕೋ-ಪಿ.ಆಯ್ ಆಗಿ ಕಾರ್ಯನಿರ್ವಹಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.**

–

–

–

–

–



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 18) ವಿಷಯ-: ಕರ್ನಾಟಕ ಕಲಾ, ವಿಜ್ಞಾನ ಹಾಗೂ ಸಂಗಿತ ಮಹಾವಿದ್ಯಾಲಯಗಳ ಹಲವು ಖಾಯಂ ಶಿಕ್ಷಕರು, ಅಥಿತಿ ಹಾಗೂ ಸಹಾಯಕ ಉಪನ್ಯಾಸಕರುಗಳು ಇವರ ಸಲ್ಲಿಸಿದ ಪತ್ರ ದಿನಾಂಕ: 14.06.2025 ರಲ್ಲಿ ಮತ್ತು ಶ್ರೀ. ಮಹೇಶ ಹುಲೆನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಸಿಂಡಿಕೇಟ ಸದಸ್ಯರು, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರ ದಿನಾಂಕ: 23.06.2025 ರಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡಿರುವುದನ್ನು ರದ್ದುಗೊಳಿಸುವಂತೆ ವಿನಂತಿಸಿರುವ ವಿಷಯವನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ಕಲಾ, ವಿಜ್ಞಾನ, ಸಂಗಿತ ಮಹಾವಿದ್ಯಾಲಯಗಳ ಹಲವು ಶಿಕ್ಷಕರು, ಅಥಿತಿ ಹಾಗೂ ಸಹಾಯಕ ಉಪನ್ಯಾಸಕರುಗಳು ದಿನಾಂಕ: 14.06.2025 ರ ಪತ್ರದಲ್ಲಿ ಈ ಕೆಳಕಾಣಿಸಿದ ಕಾರಣಗಳಿಂದ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡಿರುವುದನ್ನು ರದ್ದುಗೊಳಿಸುವಂತೆ ವಿನಂತಿಸಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳಾದ 1. ಕರ್ನಾಟಕ ಕಲಾ ಮಹಾವಿದ್ಯಾಲಯ, 2. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ತಿ.ಕರ್ನಾಟಕ ಲಲಿತ ಕಲೆ ಹಾಗೂ ಸಂಗೀತ ಮಹಾವಿದ್ಯಾಲಯ 4. ಕ.ವಿ.ವಿ ಶಿಕ್ಷಣ ಮಹಾವಿದ್ಯಾಲಯ ಹಾಗೂ 5. ಸರ್.ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯಗಳು ತಮ್ಮದೇ ಆದ ಹಿರಿಮೆ-ಗರಿಮೆ ಹಾಗು ವಿದ್ವತ್ತಿನಿಂದಾಗಿ ನಾಡಿನ ಹೆಮ್ಮೆಯ ಮಹಾವಿದ್ಯಾಲಯಗಳಾಗಿವೆ. ಇಲ್ಲಿ ಹಲವಾರು ಮೇಧಾವಿಗಳು, ಶಿಕ್ಷಣ ಪ್ರೇಮಿಗಳು ತಮ್ಮ ಮಹತ್ತರ ಸೇವೆ ಸಲ್ಲಿಸಿ ಸಾಧನೆಗೈದು ಉತ್ತರ ಕರ್ನಾಟಕದಲ್ಲಿಯೇ ಮಾದರಿ ಮಹಾವಿದ್ಯಾಲಯಗಳನ್ನಾಗಿ ಮಾಡಿದ್ದಾರೆ. ಸದರಿ ಮಹಾ ವಿದ್ಯಾಲಯಗಳು ಇದುವರೆಗೆ ರಾಜ್ಯಕ್ಕೆ ಹಾಗೂ ದೇಶಕ್ಕೆ ಮಾದರ ಮಾದರಿಯಾಗುವಂತೆ ಶೈಕ್ಷಣಿಕ ಕಾರ್ಯ ಕ್ಷಮತೆ ಕಾಯ್ದುಕೊಂಡದ್ದು ಶ್ಲಾಘನೀಯ. ಆದರೆ, ದುರದೃಷ್ಟವಶಾತ್ ಇತ್ತೀಚೆಗೆ ಸದರಿ ಮಹಾವಿದ್ಯಾಲಯಗಳು ಸಮರ್ಥ ಆಡಳಿತದ ಕೊರತೆಯಿಂದ | ಗವರಿಂಗ್ ಕೌನ್ಸಿಲ್ ಸಭೆಯ ನಿರ್ಣಯಗಳು ಜಾರಿಗೊಳ್ಳುವಲ್ಲಿ ವಿಫಲತೆ ಹಾಗೂ ಕ.ವಿ.ವಿಯ ನಿರ್ಲಕ್ಷ್ಯ ಧೋರಣೆಯಿಂದ ಎಲ್ಲ ದೃಷ್ಟಿಯಿಂದಲೂ ಗುಣಮಟ್ಟ ಕಳೆದುಕೊಳ್ಳುತ್ತಿರುವುದು ವಿಷಾದಕರ ಸಂಗತಿ. ಇಂತಹ ಸಂದರ್ಭದಲ್ಲಿಯೇ ಕ.ವಿ.ವಿಯ ಈ ಹಿಂದಿನ ಕುಲಪತಿಗಳಾದ ಪ್ರೊ.ಕೆ.ಬಿ ಗುಡಸಿರವರ ಅವಧಿಯಲ್ಲಿ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ ಘಟಕ ಮಹಾವಿದ್ಯಾಲಯಗಳಾದ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಮಾತ್ರ (ಕ.ವಿ.ವಿಯ ಇನ್ನುಳಿದ 3 ಘಟಕ ಮಹಾವಿದ್ಯಾಲಯಗಳನ್ನು ಹೊರತುಪಡಿಸಿ) ತಲಾ ಒಬ್ಬರಂತೆ ಪ್ರಾಚಾರ್ಯರಿಗೆ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಲ್ಲಿ ಸಹಾಯವಾಗುವಂತೆ ಅಕಾಡೆಮಿಕ್ ಡೀನ್‌ರೆಂದು ನೇಮಕ ಮಾಡಲಾಗಿದೆ.

1. ಅಕಾಡೆಮಿಕ್ ಡೀನ್‌ರ ಜವಾಬ್ದಾರಿಗಳು / ನಿಯೋಜನೆಗಳು ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ-2000ರ ಅಡಿಯಲ್ಲಿ ಹಾಗೂ ಯುಜಿಸಿ ನಿಯಮಗಳಡಿಯಲ್ಲಿ ಹಾಗೂ ಕವಿವಿ ಅನುಶಾಸನದಲ್ಲಿ ಮಹಾವಿದ್ಯಾಲಯ ಮಟ್ಟದಲ್ಲಿ ಡೀನ್ ಹುದ್ದೆಯ ಅವಶ್ಯಕತೆ ಬರುವುದಿಲ್ಲ. ಇವು ಕೇವಲ ಪ್ರಾಚಾರ್ಯರಿಗೆ ಆಡಳಿತಾತ್ಮಕವಾಗಿ ಸಹಾಯ ಮಾಡಲೆಂದು > ಯಾರನ್ನೋ ಒಲೈಸಲು ಸೃಷ್ಟಿಸಿದ/ನಿಯೋಜನೆಗಳೆಂದು ಸ್ಪಷ್ಟ. ಈ ಹಿಂದಿನ ಕುಲಪತಿಗಳಾದ ಪ್ರೊ.ಕೆ.ಬಿ ಗುಡಸಿಯವರು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿ ಸದರ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಹಾಳಾಗಬಾರದೆಂದು ಯುಜಿಸಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ನಿಯಮಗಳಲ್ಲಿಯೇ ಇಲ್ಲದಂತಹ 'ಅಕಾಡೆಮಿಕ್ ಡೀನ್' ಎಂದು ಸೃಷ್ಟಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅವರ ಆಯ್ಕೆಗಾಗಿ ಯಾವುದೇ ಸ್ಪಷ್ಟ ಮಾನದಂಡಗಳನ್ನು ಅನುಸರಿಸದೇ ಸದರಿ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಒಬ್ಬೊಬ್ಬರಂತೆ 'ಅಕಾಡೆಮಿಕ್ ಡೀನ್' ಎಂದು ಆಯ್ಕೆ ಮಾಡಿ ಆದೇಶಿಸಿದರು. ಆದರೆ ಯಾವ ಸದುದ್ದೇಶದಿಂದ 'ಅಕಾಡೆಮಿಕ್ ಡೀನ್' ಎಂದು ಆಯ್ಕೆ ಮಾಡಲಾಗಿತ್ತೋ ಅದೇ ಈಗ ವಿಫಲವಾಗಿ ಸದರ ಮಹಾವಿದ್ಯಾಲಯಗಳಲ್ಲಿ ಪ್ರಾಚಾರ್ಯರ ಅಸಂಬದ್ಧ ನಿರ್ಣಯಗಳು ಹಾಗೂ ಕಾಲೇಜಿನ ಅಧಿಕಾರ ವಿಕೇಂದ್ರೀಕರಣದಿಂದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಚಟುವಟಿಕೆಗಳಿಗೆ ಮಾರಕವಾಗಿ ಎರಡೂ ಪ್ರತಿಷ್ಠಿತ ಮಹಾವಿದ್ಯಾಲಯಗಳು ಇತ್ತಿತ್ತಲಾಗಿ ನಲುಗುತ್ತಾ ಇವೆ.

2. ಕ.ವಿ.ಎ ಘಟಕ ಮಹಾವಿದ್ಯಾಲಯಗಳಲ್ಲಿ ಈಗಾಗಲೇ ವಿವಿಧ ವಿಭಾಗಗಳಿಗೊಬ್ಬರಂತೆ ಮುಖ್ಯಸ್ಥರನ್ನಾಗಿ (Head of the Dept.) ಹಾಗೂ ಹಲವಾರು ಸಂಯೋಜಕರುಗಳನ್ನು (Coordinators) ಪ್ರಾಚಾರ್ಯರಿಗೆ ಶೈಕ್ಷಣಿಕ ಹಾಗೂ ಅಡಳಿತಾತ್ಮಕವಾಗಿ ಸಹಾಯವಾಗಲು ವ್ಯವಸ್ಥೆಯನ್ನು ಕಲಿಸಿ ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯವು 2011 ರಲ್ಲಿಯೇ, ಮಾರ್ಗಸೂಚಿಗಳನ್ನು ಹೊರಡಿಸಿದೆ (No.KU/DPAR(T)2011/2220 Dated: 20-07-2011). ಹಿಗಿರುವಾಗ ಅಕಾಡೆಮಿಕ್ ಡೀನರನ್ನು ಆಯ್ಕೆ ಮಾಡಿರುವುದು ಅಧಿಕಾರ ವಿಕೇಂದ್ರೀಕರಣಗೊಂಡು ಪ್ರಾಚಾರ್ಯರರನ್ನು ಬದಿಗಿರಿಸಿ ಡೀನ್ ಈ ಹಲವಾರು ನಿರ್ಣಯಗಳನ್ನು ತೆಗೆದುಕೊಂಡು ಆಡಳಿತಾತ್ಮಕ ತೊಂದರೆಯಾಗಿದೆ. ಅವುಗಳಲ್ಲಿ ಕೇವಲ ಕೆಲವೊಂದನ್ನು ಮಾತ್ರ ಈ ಕೆಳಗಿನಂತೆ ತಮ್ಮ ಗಮನಕ್ಕೆ ತರಲಾಗಿದೆ.

3. ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡದಲ್ಲಿ ಆಗುತ್ತಿರುವ ಸಮಸ್ಯೆಗಳು: ಸದರ ಮಹಾವಿದ್ಯಾಲಯಕ್ಕೆ ಅಕಾಡೆಮಿಕ್ ಡೀನರೆಂದು ನೇಮಕವಾದಾಗಿನಿಂದ ಸದರ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಡಿ.ಬಿ ಕರಡೋಣಿಯವರು ಕಾಲೇಜಿನ ಆಡಳಿತದ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತಾಳಿದ್ದಲ್ಲದೇ ಮಹಾವಿದ್ಯಾಲಯಕ್ಕೆ ತಮ್ಮ ಆಫೀಸಿಗೆ ಅವರ ಮನಸ್ಸಿಗೆ ಬಂದಾಗ ಬರುವುದು ಇಲ್ಲವೇ ವಾರಗಟ್ಟಲೇ ನಿಯಮ ಬಾಹೀರ ರಜೆ ಹಾಕುವುದು (ಸಿ.ಸಿ.



ಕುಲಸಚಿವರು ಕುಲಪತಿಗಳು

ಟಿವಿ ಪರಿಶೀಲಿಸಬಹುದು) ಮಹಾವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಕಾಳಜಿ ತೆಗೆದುಕೊಳ್ಳದೇ ತಾವೂ ಪಾಠ ಮಾಡದೇ ಸಂಪೂರ್ಣವಾಗಿ ಮಹಾವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಜವಾಬ್ದಾರಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸದರ ಅಕಾಡೆಮಿಕ್ ಡೀನ್ ಅವರಿಗೆ ವಹಿಸಿಕೊಟ್ಟಂತಾಗಿದೆ. ಇದರಿಂದ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂಧಿಗಳು (ಖಾಯಂ ಹಾಗೂ ಅರೆಕಾಲಿಕ ಸೇರಿದಂತೆ) ಅಸಮಧಾನದಿಂದ ಬೇಸತ್ತಿದ್ದಾರೆ. ಸದರ ಮಹಾವಿದ್ಯಾಲಯದಲ್ಲಿ ಅಕಾಡೆಮಿಕ್ ಡೀನರ ಕಾರ್ಯನಿರ್ವಹಣೆಯ ಪ್ರಾರಂಭಗೊಂಡ ನಂತರ IQAC (Internal Quality Assurance Cell) ಪ್ರಕ್ರಿಯೆ ಸಂಪೂರ್ಣವಾಗಿ ಕುಂಠಿತಗೊಂಡಿದೆ. NAAC (National Assessment & Accreditation Council) ಅವಧಿ ಮುಗಿದಿದ್ದರೂ ಈ ಹಿಂದೆ ನಡೆದ ಪ್ರಕ್ರಿಯೆಯ ಮುಂದಿನ ಭಾಗವಾಗಿ ಪೂರ್ಣಗೊಳಿಸದೇ ಇರುವುದು ಕೂಡ ಪ್ರತಿಷ್ಠಿತ ಮಹಾವಿದ್ಯಾಲಯಕ್ಕೆ ಒದಗಿಬಂದ ಒಂದು ದುರಂತ. ಮೊದಲು NAAC 'ಎ' ಗ್ರೇಡ್ ಬರುವಂಥಹ ಮಹಾವಿದ್ಯಾಲಯ 'ಬಿ' ಗ್ರೇಡ್ ಗೆ ಸೀಮಿತಗೊಂಡಿದೆ. ಅಕಾಡೆಮಿಕ್ ಡೀನರು ಎಲ್ಲಾ ಆಡಳಿತಾತ್ಮಕ ಚಟುವಟಿಕೆಗಳಲ್ಲಿ/ವಿಚಾರಗಳಲ್ಲಿ ಮೂಗು ತೂರಿಸುತ್ತಿರುವುದಕ್ಕೆ ಅಧ್ಯಾಪಕ ವರ್ಗದವರಿಂದ ಹಲವಾರು ಆರೋಪಗಳಿವೆ. ಪ್ರಾಚಾರ್ಯರ ಆದೇಶದ ನಂತರ ಹೊರಡಬೇಕಾದ ಕೆಲವು ಸುತ್ತೋಲೆಗಳು/ನೋಟೀಸ್‌ಗಳು ಪ್ರಾಚಾರ್ಯರ ಆದೇಶಕ್ಕಿಂತ ಮುಂಚೆನೇ ಅಕಾಡೆಮಿಕ್ ಡೀನರ ಇಚ್ಛೆಯಂತೆ ಸಿದ್ಧಗೊಂಡು ನಂತರ ಪ್ರಾಚಾರ್ಯರಿಂದ ಸಹಿ ಹಾಕಿಸಿಕೊಳ್ಳುವುದು. ಆದೇಶಿಸುವುದು, ಬೇಸರದ ಸಂಗತಿ. ಮಹಾವಿದ್ಯಾಲಯದಲ್ಲಿ ಮೂಲ ಕರ್ತವ್ಯವಾದ ಕಲಿಕಾ ಪ್ರಕ್ರಿಯೆ ಸಮರ್ಪಕವಾಗಿ ನಡೆದಿಲ್ಲ. ಸ್ವತಃ ಪ್ರಾಚಾರ್ಯರೇ ಪಾಠ ಮಾಡಿಲ್ಲ. ಆದರೂ ಸಹ ಅಕಾಡೆಮಿಕ್ ಡೀನರು ಈ ವಿಷಯವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ವರದಿ ಸಲ್ಲಿಸಿಲ್ಲ. ಅಕಾಡೆಮಿಕ್ ಡೀನರು ಬೋಧನಾ ಸಹಾಯಕರನ್ನು/ಅತಿಥಿ ಉಪನ್ಯಾಸಕರನ್ನು ಗುರಿಯಾಗಿಸಿಕೊಂಡು ದಬ್ಬಾಳಿಕೆ ಮಾಡುತ್ತಿದ್ದಾರೆಂದು ಕೂಗು ಕೇಳಿ ಬರುತ್ತಿದೆ..

4 . ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿಯ ಸಮಸ್ಯೆಗಳು: ಸದರ ಮಹಾವಿದ್ಯಾಲಯಕ್ಕೆ ಅಕಾಡೆಮಿಕ್ ಡೀನರೆಂದು ನೇಮಕವಾದಾಗಿನಿಂದ, ಮಹಾವಿದ್ಯಾಲಯದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. (ಶ್ರೀಮತಿ) ಎಂ.ಎಸ್ ಸಾಳುಂಕೆಯವರು ಮಹಾವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಜವಾಬ್ದಾರಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸದರ ಆಕಾಡೆಮಿಕ್ ಡೀನ್ ಅವರಿಗೆ ವಹಿಸಿಕೊಟ್ಟಂತಾಗಿದೆ. ಇದರಿಂದ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂಧಿಗಳು (ಖಾಯಂ ಹಾಗೂ ಅರೆಕಾಲಿಕ ಸೇರಿದಂತೆ) ಆಸಮಧಾನದಿಂದ ಬೇಸತ್ತಿದ್ದಾರೆ. ಸದರ ಮಹಾವಿದ್ಯಾಲಯ ಇತ್ತಿತ್ತಲಾಗಿ ನಡೆದ NAAC ಪ್ರಕ್ರಿಯೆಯಲ್ಲಿ ಮತ್ತೆ 'ಬಿ' ಗ್ರೇಡ್ ನಲ್ಲಿ ಉಳಿದುಕೊಂಡಿದೆ. ಅಕಾಡೆಮಿಕ್ ಡೀನರು ಹಲವಾರು ಸಲ ವಿಶ್ವವಿದ್ಯಾಲಯದ ಪರೀಕ್ಷಾ ಚಟುವಟಿಕೆಗಳಲ್ಲಿ ಮುಖ್ಯ ಅಧೀಕ್ಷಕರೆಂದು ಇವರೇ ಹಲವಾರುಬಾರಿ ಕೆಲಸ ನಿರ್ವಹಿಸಿದ್ದು, ಬೇರೆಯವರಿಗೆ ಅವಕಾಶವಂಚಿತರನ್ನಾಗಿ ಮಾಡಿದ್ದೂ ಕೂಡ ಇದೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ನಿಯಮಗಳಿಗೆ ವಿರುದ್ಧವಾಗಿದೆ. ಸ್ನಾತಕೋತ್ತರ ಕೋರ್ಸ್‌ಗಳಾದ ಎಂ.ಎಸ್ಸಿ(ಭೌತಶಾಸ್ತ್ರ) ಎಂ.ಎಸ್ಸಿ (ರಸಾಯನ ಶಾಸ್ತ್ರ) ಕೋರ್ಸ್‌ಗಳಿಗೆ ಪ್ರವೇಶಾತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ಮುಂದುವರೆದು. ಸದರಿ ಎರಡೂ ಮಹಾವಿದ್ಯಾಲಯಗಳಿಗೆ ಅಕಾಡೆಮಿಕ್ ಡೀನರ ಕಾರ್ಯನಿರ್ವಹಣೆ ಪ್ರಾರಂಭವಾದಾಗಿನಿಂದ IQAC, NAAC ಪ್ರಕ್ರಿಯೆಗಳಿಗೆ ಬೇಕಾಗಿರುವ Add on Course, ಶೈಕ್ಷಣಿಕ ಸಭೆಗಳು, ರಾಜ್ಯಮಟ್ಟದ/ರಾಷ್ಟ್ರಮಟ್ಟದ/ಅಂತರಾಷ್ಟ್ರೀಯ ಮಟ್ಟದ ಶೃಂಗ ಸಭೆಗಳು (Symposium/Conference/Seminar) ಸಮರ್ಪಕವಾಗಿ ನಡೆದ ಉದಾಹರಣೆಗಳಿಲ್ಲ. ಮುಂದುವರೆದು, ಸದರಿ ಅಕಾಡೆಮಿಕ ಡೀನರುಗಳು ಮಹಾವಿದ್ಯಾಲಯಗಳ ಆಡಳಿತಾತ್ಮಕ ವಿಷಯಗಳಲ್ಲಿ ಪ್ರಾಚಾರ್ಯರುಗಳ ಅಸಮರ್ಥತೆಯನ್ನು ಉಪಯೋಗಿಸಿಕೊಂಡು ಡೀನರುಗಳು ತಮ್ಮ ವ್ಯಾಪ್ತಿ ಮೀರಿ ಪ್ರವೇಶ ಮಾಡುತ್ತಿರುವುದರಿಂದ ಕಾಲೇಜಿನಲ್ಲಿ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗಿದೆ.

ಮಹಾವಿದ್ಯಾಲಯಗಳ ಗೌರಿಂಗ್ ಕೌನ್ಸಿಲ್ ಸಭೆಗಳು ಸದರ ಮಹಾವಿದ್ಯಾಲಯಗಳಲ್ಲಿ ಕಾಲಕಾಲಕ್ಕೆ ನಡೆಯದೇ ಹಲವಾರು ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಮಸ್ಯೆಗಳು ಸೃಷ್ಟಿಯಾಗಿವೆ. ಮುಂದುವರಿದು ಗೌರಿಂಗ್ ಕೌನ್ಸಿಲ್‌ನ ಸಿಂಡಿಕೇಟ್ ಸದಸ್ಯರುಗಳ ಹಾಗೂ ಇತರ ಸದಸ್ಯರುಗಳ ಅವಧಿ ಮೀರಿರಬಹುದು. ಇದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಅವಶ್ಯವಿದೆ. ಬಹುಶಃ ಇದು ಒಂದು ಕಾರಣದಿಂದ ಕೂಡ ಘಟಕ ಮಹಾವಿದ್ಯಾಲಯಗಳ ಆಡಳಿತ ಸಂಪೂರ್ಣವಾಗಿ ಹೆಚ್ಚುವರಿ ಪ್ರಭಾರಿ ಪ್ರಾಚಾರ್ಯರ ಇಚ್ಛೆ ಬಂದಂತೆ ನಡೆಯುತ್ತಾ ಇರುವುದು ಬೇಸರದ ಸಂಗತಿ.

ಆದ್ದರಿಂದ ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳಾದ ಕರ್ನಾಟಕ ಕಲಾ ಮಹಾವಿದ್ಯಾಲಯ, ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಕರ್ನಾಟಕ ಯುನಿವರ್ಸಿಟಿ ಆಕ್ಟ್ / ಅನುಶಾಸನ ಹಾಗೂ ಯುಜಿಸಿ ನಿಯಮಗಳನ್ನು ಮೀರಿ "ಅಕಾಡೆಮಿಕ್ ಡೀನ್" ಎಂದು ಯಾವುದೇ ಸಮರ್ಪಕ ಮಾನದಂಡಗಳನ್ನು ಅನುಸರಿಸದೇ ಈ ಹಿಂದಿನ ಕುಲಪತಿಗಳು ಏಕಪಕ್ಷೀಯವಾಗಿ ಆಯ್ಕೆ ಮಾಡಿದ ಅಕಾಡೆಮಿಕ್ ಡೀನ್ ಜವಾಬ್ದಾರಿಯನ್ನು ತತಕ್ಷಣ ರದ್ದುಗೊಳಿಸಿ ಮಹಾವಿದ್ಯಾಲಯಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತಾ ಕೇವಲ ಜೇಷ್ಠತಾ ಆಧಾರ ಬಿಟ್ಟು ಸಮರ್ಥ ಪ್ರಾಚಾರ್ಯರನ್ನು ಯು.ಜಿ.ಸಿ ನಿಯಮಗಳ ಅನುಗುಣವಾಗಿ ಆಯ್ಕೆ ಮಾಡಿ ಅವರಿಗೆ ಸಹಾಯ ಮಾಡಲು ಉಪ-ಪ್ರಾಚಾರ್ಯರ ಸ್ಥಾನವನ್ನು ಕರ್ನಾಟಕ ವಿಶ್ವವಿದ್ಯಾಲಯದ ಅನುಶಾಸನದ / ಯು.ಜಿ.ಸಿ. ಪ್ರಕಾರ ನಿಯೋಜಿಸಿದಾಗ ಮಾತ್ರ ಮಹಾವಿದ್ಯಾಲಯಗಳಲ್ಲಿ ದಕ್ಷ ಆಡಳಿತ, ಶೈಕ್ಷಣಿಕ ಉನ್ನತಿ, ಮಹಾವಿದ್ಯಾಲಯದ ಘನತೆ / ಗೌರವ ಕಾಪಾಡುವಲ್ಲಿ ಯಾವುದೇ ಸಂಶಯವಿಲ್ಲವೆಂದು ತಿಳಿಸುತ್ತಾ, ಮಹಾವಿದ್ಯಾಲಯಗಳಲ್ಲಿ ಅನುಶಾಸನಕ್ಕೆ (Statute) ತದ್ವಿರುದ್ಧವಾಗಿ ಸೃಷ್ಟಿಸಿದ ಅಕ್ಯಾಡೆಮಿಕ್ ಡೀನ್ ಜವಾಬ್ದಾರಿಯನ್ನು ತತ್ ಕ್ಷಣ ರದ್ದುಗೊಳಿಸಬೇಕೆಂದು ವಿನಂತಿಸಿರುತ್ತಾರೆ.



ಕುಲಸಚಿವರು

ಕುಲಪತಿಗಳು

ಮುಂದುವರೆದು, ಕವಿವಿ ಸಿಂಡಿಕೇಟ ಸದಸ್ಯರುಗಳಾದ ಶ್ರೀ. ಮಹೇಶ ಹುಲೆನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಇವರು ಸಹ ದಿನಾಂಕ: 14.06.2025 ರ ಪತ್ರದಲ್ಲಿನ ಅಂಶಗಳನ್ನು ದಿನಾಂಕ: 23.06.2025 ರ ತಮ್ಮ ಪತ್ರದಲ್ಲಿ ಪುನರುಚ್ಚರಿಸಿ, ಮಹಾವಿದ್ಯಾಲಯಗಳಲ್ಲಿ ಅನುಶಾಸನಕ್ಕೆ ತದ್ವಿರುದ್ಧವಾಗಿ ಸೃಷ್ಟಿಸಿದ ಅಕ್ಯಾಡೆಮಿಕ್ ಡೀನ್ ಜವಾಬ್ದಾರಿಯನ್ನು ತಕ್ಷಣ ರದ್ದುಗೊಳಿಸಬೇಕೆಂದು ಸಿಂಡಿಕೇಟ ಕಲಂ ಮಂಡಿಸಲು ವಿನಂತಿಸಿರುತ್ತಾರೆ

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ಮಹಾವಿದ್ಯಾಲಯಗಳ ಪ್ರಗತಿ ಕೈಗೊಳ್ಳುವ ಬಗ್ಗೆ ವಿದ್ಯಾಮಂಡಳ (ಎಸ್ & ಟಿ) ವಿಭಾಗದ ಮುಖಾಂತರ ದಿನಾಂಕ:10.08.2023 ರಂದು ಜರುಗಿದ ಪ್ರಾಚಾರ್ಯರುಗಳ ಸಭೆಯಲ್ಲಿ ಈ ಕೆಳಗಿನಂತೆ ಅ. ನಂ. 09 ರಲ್ಲಿ ತೀರ್ಮಾನಿಸಲಾಗಿತ್ತು.

> **"ಮಹಾವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ, ಪ್ರಾಚಾರ್ಯರಿಗೆ ಸಹಕರಿಸಲು ಒಬ್ಬ Academic Dean ರ ನೇಮಕ ಕುರಿತಂತೆ ಚರ್ಚಿಸಲಾಯಿತು. ಈ ಕುರಿತಂತೆ ಇಚ್ಛೆಪಟ್ಟ ಬೋಧಕರು ಗೌರವಧನವಿಲ್ಲದೇ Academic Dean ಆಗಿ ಕಾರ್ಯನಿರ್ವಹಿಸಲು ಆಸಕ್ತಿ ತೋರಿಸಿದಲ್ಲಿ ಅವರನ್ನು ನಿಯುಕ್ತಿ ಮಾಡುವುದು. ಕರ್ನಾಟಕ ಕಲಾ/ವಾಣಿಜ್ಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಗಳ Academic Dean ರ ನಿಯೋಜನೆಗೆ ಆಸಕ್ತಿ ತೋರಿದರು".**

ಸದರ ಪ್ರಾಚಾರ್ಯರುಗಳ ಸಭೆಯಲ್ಲಿ ತಗೆದುಕೊಂಡ ತೀರ್ಮಾನವನ್ನು ದಿನಾಂಕ 06.10.2023 ರ ಆಡಳಿತ ಮಂಡಳಿ ಸಭೆಯು ತನ್ನ ನಿರ್ಣಯ ಸಂಖ್ಯೆ 06 ರಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿದ್ದು ಇರುತ್ತದೆ.

> **"ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ ಪ್ರಾಚಾರ್ಯರಿಗೆ ಸಹಕರಿಸಲು ತಲಾ ಒಬ್ಬ ಆಕ್ಯಾಡೆಮಿಕ್ ಡೀನ್ Academic Dean ರ ನೇಮಕ ಮಾಡುವ ಕುರಿತು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 10.08.2023 ರಂದು ಜರುಗಿದ ಎಲ್ಲ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಸಭೆಯಲ್ಲಿ ನಿರ್ಣಯಿಸಿದ ಕ್ರಮವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಈಗಾಗಲೇ ಪಿ.ಯು ಕಾಲೇಜುಗಳಿಗೆ ಸಂಯೋಜಕರನ್ನು ನೇಮಿಸಲು ಕೈಗೊಂಡ ಕ್ರಮದಂತೆ ಸದರಿ ಮಹಾವಿದ್ಯಾಲಯಗಳಿಗೆ ಅಕ್ಯಾಡೆಮಿಕ ಡೀನರನ್ನು ನೇಮಕ ಮಾಡಲು ನಿರ್ಣಯಿಸಿತು."**

ಮುಂದುವರೆದು, ಸದರ ಸಿಂಡಿಕೇಟ ನಿರ್ಣಯದಂತೆ ಈ ಕಚೇರಿ ಪತ್ರ ಸಂಖ್ಯೆ: ಕವಿವಿ/ಸಿಆಸುವಿ/ಶಿಕ್ಷಕ-6/2023/1510 ದಿನಾಂಕ: 20.10.2023 ರ ಮೂಲಕ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ, ***ಪಿ.ಯು.ಕಾಲೇಜುಗಳಿಗೆ ಸಂಯೋಜಕರನ್ನು ನೇಮಿಸಲು ಕೈಗೊಂಡ ಕ್ರಮದಂತೆ ಮಹಾವಿದ್ಯಾಲಯದ ಖಾಯಂ ಸೇವೆಯಲ್ಲಿರುವ ಮತ್ತು ಮುಖ್ಯವಾಗಿ ಸ್ವಇಚ್ಛೆಯಿಂದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಬೋಧಕ ಸಿಬ್ಬಂದಿಯವರನ್ನು ಸೂಕ್ತ ವಿಧಾನದಿಂದ ಅಂದರೆ ತಮ್ಮ ಹಂತದಲ್ಲಿ ಎಲ್ಲ ಬೋಧಕ ಸಿಬ್ಬಂದಿಗಳ ಸಭೆ ಜರುಗಿಸಿ, ಆಸಕ್ತ ಬೋಧಕ ಸಿಬ್ಬಂದಿಗಳ ಹಸ್ತಾಕ್ಷರ ಪಡೆಯುವುದರ ಮೂಲಕ ಗುರುತಿಸಿ, ಆ ರೀತಿ ಗುರುತಿಸಿದ ಆಸಕ್ತ ಬೋಧಕ ಸಿಬ್ಬಂದಿಗಳ ಹೆಸರುಗಳನ್ನು ಸೂಕ್ತ ಅಧಿಕಾರ ಮತ್ತು ಜವಾಬ್ದಾರಿಗಳೊಂದಿಗೆ ಅಕ್ಯಾಡೆಮಿಕ ಡೀನರರೆಂದು ನೇಮಿಸಲು ಮಾನ್ಯ ಕುಲಪತಿಗಳ ಅನುಮೋದನೆಗಾಗಿ ಕಡತವನ್ನು ಮಂಡಿಸಿ, ಮಾನ್ಯ ಕುಲಪತಿಗಳು ಸೂಚಿಸುವ ಸಿಬ್ಬಂದಿಯವರನ್ನು ತಮ್ಮ ಮಹಾವಿದ್ಯಾಲಯದ ಅಕ್ಯಾಡೆಮಿಕ ಡೀನರರೆಂದು ನೇಮಕ ಮಾಡುವ ಕುರಿತು ಕ್ರಮಜರುಗಿಸುವಂತೆ ಸೂಚಿಸಲಾಗಿದೆ*** **ಹಾಗೂ ಸದರಿ ಅಕ್ಯಾಡೆಮಿಕ ಡೀನರನ್ನು ಎರಡು ವರ್ಷಗಳ ಅವಧಿ ಅಥವಾ ಮುಂದಿನ ಆದೇಶದ ಷರತ್ತಿನೊಂದಿಗೆ ನೇಮಕಗೊಳಿಸುವದು ಹಾಗೂ ಅಂತಹ ಅಕ್ಯಾಡೆಮಿಕ ಡೀನರರಿಗೆ ವಿಶ್ವವಿದ್ಯಾಲಯದಿಂದ ಯಾವುದೇ ತರಹದ ವಿಶೇಷ ಭತ್ಯೆ, ರಜೆ ಮುಂತಾದ ಸೌಲಭ್ಯಗಳಿರುವದಿಲ್ಲವೆಂದು** ***ಸೂಚಿಸಲಾಗಿದೆ.***

ಮೇಲೆ ತಿಳಿಸಿದಂತೆ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡುವ ವಿಷಯವು ಮಹಾವಿದ್ಯಾಲಯಗಳ ಪ್ರಗತಿ ಕೈಗೊಳ್ಳುವ ಬಗ್ಗೆ ವಿದ್ಯಾಮಂಡಳ (ಎಸ್ & ಟಿ) ವಿಭಾಗದ ಮುಖಾಂತರ ಜರುಗಿದ ಪ್ರಾಚಾರ್ಯರುಗಳ ಸಭೆಯ ತೀರ್ಮಾನ ಹಾಗೂ ಸಿಂಡಿಕೇಟ ಸಭೆಯ ನಿರ್ಣಯದಂತೆ ಮಾಡಲಾಗಿರುತ್ತದೆ. ಮುಂದುವರೆದು, ಸದರ ಅಕ್ಯಾಡೆಮಿಕ ಡೀನರೆಂದು ನೇಮಕಗೊಂಡವರಿಗೆ ವಿಶ್ವವಿದ್ಯಾಲಯದಿಂದ ಯಾವುದೇ ತರಹದ ವಿಶೇಷ ಭತ್ಯೆ, ರಜೆ ಮುಂತಾದ ಸೌಲಭ್ಯಗಳಿರುವದಿಲ್ಲ.



**ಕುಲಸಚಿವರು** **ಕುಲಪತಿಗಳು**

ಮೇಲಕಾಣಿಸಿದ ಅಂಶಗಳನ್ನು ಅವಲೋಕಿಸಿ, ಕರ್ನಾಟಕ ಕಲಾ, ವಿಜ್ಞಾನ, ಸಂಗಿತ ಮಹಾವಿದ್ಯಾಲಯಗಳ ಹಲವು ಶಿಕ್ಷಕರು, ಅಥಿತಿ ಹಾಗೂ ಸಹಾಯಕ ಉಪನ್ಯಾಸಕರುಗಳು ಜಂಟಿಯಾಗಿ ಸಲ್ಲಿಸಿದ ವಿನಂತಿ ಮತ್ತು ಅದರಂತೆ ಶ್ರೀ. ಮಹೇಶ ಹುಲೆನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಇವರು ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡಿರುವುದು ಕರ್ನಾಟಕ ಯುನಿವರ್ಸಿಟಿ ಆಕ್ಟ್ / ಅನುಶಾಸನ ಹಾಗೂ ಯುಜಿಸಿ ನಿಯಮಗಳನ್ನು ಮೀರಿ "ಅಕಾಡೆಮಿಕ್ ಡೀನ್" ಎಂದು ಯಾವುದೇ ಸಮರ್ಪಕ ಮಾನದಂಡಗಳನ್ನು ಅನುಸರಿಸದೇ ಈ ಹಿಂದಿನ ಕುಲಪತಿಗಳು ಏಕಪಕ್ಷೀಯವಾಗಿ ಆಯ್ಕೆ ಮಾಡಿದ ಅಕಾಡೆಮಿಕ್ ಡೀನ್ ಜವಾಬ್ದಾರಿಯನ್ನು ತತ್‌ಕ್ಷಣ ರದ್ದುಗೊಳಿಸಿ ಮಹಾವಿದ್ಯಾಲಯಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕ್ರಮ ಜರುಗಿಸಬೇಕೆಂದು. ಮುಂದುವರೆದು, ಕೇವಲ ಜೇಷ್ಠತಾ ಆಧಾರ ಬಿಟ್ಟು ಸಮರ್ಥ ಪ್ರಾಚಾರ್ಯರನ್ನು ಯು.ಜಿ.ಸಿ ನಿಯಮಗಳ ಅನುಗುಣವಾಗಿ ಆಯ್ಕೆ ಮಾಡಿ ಅವರಿಗೆ ಸಹಾಯ ಮಾಡಲು ಉಪ-ಪ್ರಾಚಾರ್ಯರ ಸ್ಥಾನವನ್ನು ಕರ್ನಾಟಕ ವಿಶ್ವವಿದ್ಯಾಲಯದ ಅನುಶಾಸನದ / ಯು.ಜಿ.ಸಿ. ಪ್ರಕಾರ ನಿಯೋಜಿಸಿದಾಗ ಮಾತ್ರ ಮಹಾವಿದ್ಯಾಲಯಗಳಲ್ಲಿ ದಕ್ಷ ಆಡಳಿತ, ಶೈಕ್ಷಣಿಕ ಉನ್ನತಿ, ಮಹಾವಿದ್ಯಾಲಯದ ಘನತೆ / ಗೌರವ ಕಾಪಾಡುವಲ್ಲಿ ಯಾವುದೇ ಸಂಶಯವಿಲ್ಲವೆಂದು ತಿಳಿಸಿ ಮಹಾವಿದ್ಯಾಲಯಗಳಲ್ಲಿ ಅನುಶಾಸನಕ್ಕೆ (Statute) ತದ್ವಿರುದ್ಧವಾಗಿ ಸೃಷ್ಟಿಸಿದ ಅಕ್ಯಾಡೆಮಿಕ್ ಡೀನ್ ಜವಾಬ್ದಾರಿಯನ್ನು ತ್‌ಕ್ಷಣ ರದ್ದುಗೊಳಿಸಲು ಕರ್ನಾಟಕ ಕಲಾ, ವಿಜ್ಞಾನ ಹಾಗೂ ಸಂಗಿತ ಮಹಾವಿದ್ಯಾಲಯಗಳ ಹಲವು ಖಾಯಂ ಶಿಕ್ಷಕರು, ಅಥಿತಿ ಹಾಗೂ ಸಹಾಯಕ ಉಪನ್ಯಾಸಕರುಗಳು ಇವರ ಸಲ್ಲಿಸಿದ ಪತ್ರ ದಿನಾಂಕ: 14.06.2025 ರಲ್ಲಿ ಮತ್ತು ಶ್ರೀ. ಮಹೇಶ ಹುಲೆನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಸಿಂಡಿಕೇಟ ಸದಸ್ಯರು, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರ ದಿನಾಂಕ: 23.06.2025 ರಲ್ಲಿವಿನಂತಿಸಿರುವ ವಿಷಯವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

**<u>ನಿರ್ಣಯ</u>**

**ಕರ್ನಾಟಕ ಕಲಾ, ವಿಜ್ಞಾನ ಹಾಗೂ ಸಂಗಿತ ಮಹಾವಿದ್ಯಾಲಯಗಳ ಹಲವು ಖಾಯಂ ಶಿಕ್ಷಕರು, ಅಥಿತಿ ಹಾಗೂ ಸಹಾಯಕ ಉಪನ್ಯಾಸಕರುಗಳು ಇವರು ಸಲ್ಲಿಸಿದ ಪತ್ರ ದಿನಾಂಕ: 14.06.2025 ರಲ್ಲಿ ಮತ್ತು ಶ್ರೀ. ಮಹೇಶ ಹುಲೆನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಸಿಂಡಿಕೇಟ ಸದಸ್ಯರು, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ದಿನಾಂಕ: 23.06.2025 ರಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡಿರುವುದನ್ನು ರದ್ದುಗೊಳಿಸಿ ಪ್ರಾಚಾರ್ಯರ ನಂತರದ ಜೆಷ್ಠತಾ ಯಾದಿಯಲ್ಲಿರುವವರನ್ನು ಉಪ-ಪ್ರಾಚಾರ್ಯರೆಂದು ನೇಮಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**

-

-

-

-

-



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 19) **ವಿಷಯ**–: ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನ ಮತ್ತು ವಿಸ್ತರಣಾ ಕೇಂದ್ರದ ಕಟ್ಟಡಕ್ಕಾಗಿ ಸ್ಥಳವನ್ನು ಒದಗಿಸುವ ಕುರಿತು ಶ್ರೀ. ಮಹೇಶ ವೈ. ಹುಲೇನ್ನವರ, ಸಿಂಡಿಕೇಟ್ ಸದಸ್ಯರು ಇವರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸುವುದು.

**ಟಿಪ್ಪಣಿ :**

ಶ್ರೀ. ಮಹೇಶ ವೈ. ಹುಲೇನ್ನವರ, ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಪತ್ರ ದಿ: 24–6–2025 ರಲ್ಲಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ 2016ರಲ್ಲಿ ರಾಜ್ಯದ 8 ವಿಶ್ವವಿದ್ಯಾಲಯಗಳಲ್ಲಿ "ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನ ಮತ್ತು ವಿಸ್ತರಣಾ ಕೇಂದ್ರ" ಗಳನ್ನು ಸ್ಥಾಪಿಸಲು ಅನುಮೋದನೆಯನ್ನು ನೀಡಿತ್ತು. ದಿನಾಂಕ: 17–7–2017 (ಸಂ.ಸಕನಿ/ಮೂಸೌ–2/ವಿವಿ/ಸಿಆರ್–03–2016–17) ರಂದು ರೂ. 2 ಕೋಟಿಗಳ ದತ್ತಿನಿಧಿಯ ಚೆಕ್ ಸಂ. 793395 ಕವಿವಿಗೆ ಕಳುಹಿಸುವ ಮೂಲಕ ಅಧಿಕೃತವಾಗಿ ಆರಂಭಗೊಂಡಿತ್ತು. ದತ್ತಿನಿಧಿಯ ಬಡ್ಡಿ ಹಣದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಚಿಸಲಾಗಿತ್ತು.

ಪ್ರಾರಂಭದಲ್ಲಿ ಡಾ. ಹರೀಶ ರಾಮಸ್ವಾಮಿಯವರು ಪ್ರಥಮ ಸಂಯೋಜಕರಾಗಿ 2016 ರಲ್ಲಿ ಅಧಿಕಾರ ವಹಿಸಿಕೊಂಡರು ಅವರು ಅಂದಿನ ಹೆಚ್.ಆರ್.ಡಿ.ಸಿ (ಮಾನವ ಸಂಪನ್ಮೂಲ ಅಭಿವೃದ್ಧಿ) ವಿಭಾಗದ ನಿರ್ದೇಶಕರಾಗಿದ್ದರು. ವಿಭಾಗಕ್ಕೆ ಪ್ರತ್ಯೇಕ ಕಟ್ಟಡ ಇಲ್ಲದ್ದರಿಂದ ತಮ್ಮ ಕಚೇರಿಯಿಂದಲೇ ಕಾರ್ಯ ನಿರ್ವಹಿಸುತ್ತಿದ್ದರು.

ಅಧ್ಯಯನ ಕೇಂದ್ರದ ಉದ್ಘಾಟನೆಯನ್ನು 13 ಅಕ್ಟೋಬರ 2017 ರಂದು ಅಂದಿನ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ. ಹೆಚ್. ಆಂಜನೇಯರವರ ಉಪಸ್ಥಿತಿಯಲ್ಲಿ ಡಾ. ಬಾಬು ಜಗಜೀವನರಾಮ್‌ರವರ ಸುಪುತ್ರಿ ಶ್ರೀಮತಿ.ಮೀರಾ ಕುಮಾರ ಮಾಜಿ ಲೋಕಸಭಾ ಸ್ಪಿಕರ್ ಇವರಿಂದ ಉದ್ಘಾಟನಾ ಕಾರ್ಯಕ್ರಮ ನೆರವೇರಿತು.

ಮುಂದುವರೆದು ಈ ಹಿಂದೆ ಶಾಶ್ವತ ಕಟ್ಟಡದ ಸ್ಥಳವನ್ನು ದಿನಾಂಕ: 22–11–2017ರಂದು ವಿಭಾಗದ ಸಂಯೋಜಕರಮನವಿ ಪತ್ರದಲ್ಲಿ ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನ ಮತ್ತು ವಿಸ್ತರಣಾ ಕೇಂದ್ರದ ಶಾಶ್ವತ ಕಟ್ಟಡಕ್ಕಾಗಿ ಸ್ಥಳವನ್ನು ನಿಗದಿಪಡಿಸಲು ಕೋರಲಾಗಿತ್ತು. ಮಾನ್ಯ ಕುಲಪತಿಗಳು ಸ್ಥಾನಿಕ ಅಭಿಯಂತರರೊಂದಿಗೆ ಚರ್ಚಿಸಲು ಸೂಚಿಸಿದ್ದರು. ಅದರಂತೆ ಅಂದಿನ ಸಂಯೋಜಕರಾದ ಪ್ರೊ. ಹರೀಶ ರಾಮಸ್ವಾಮಿಯವರು ಅಂದಿನ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಎನ್.ವಾಯ್.ಮಟ್ಟಿಹಾಳ ರವರು ಮತ್ತು ಸ್ಥಾನಿಕ ಅಭಿಯಂತರರೊಂದಿಗೆ ಸ್ಥಳ ಪರಿಶೀಲನೆ ಮಾಡಿದರು ಸೂಕ್ತವಾದ ಸ್ಥಳ ಇರದೇ ಇರುವುದರಿಂದ ಇಲ್ಲಿಯವರೆಗೂ ನೆನೆಗುದಿಗೆ ಬಿದ್ದಿರುತ್ತದೆ.

ಪ್ರಸ್ತುತ ಈ ಕೆಳಗಿನಂತೆ ಇರುವ ಜಾಗೆಯನ್ನು ಸೂಚಿಸುತ್ತೇನೆ.

1. ಬಾರಾಕೋಟ್ರಿ ಮಾರ್ಗದ ಮುಖಾಂತರ ಕವಿವಿ ಪ್ರವೇಶ ದ್ವಾರದ ಎಡಗಡೆ ಇರುವ ಪೇರಲ ತೋಟದ ಸ್ಥಳ ಮತ್ತು ಕ್ರೀಡಾ ವಿಭಾಗಕ್ಕೆ ಹೊಂದಿಕೊಂಡು ಹಾಗೂ ನ್ಯೂಪಿಜಿ ಹಾಸ್ಟೇಲ್‌ಗೆ ಹೊಂದಿಕೊಂಡು ಇರುವ ಮಧ್ಯದ ಜಾಗೆಯು ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನ ಮತ್ತು ವಿಸ್ತರಣಾ ಕೇಂದ್ರಕ್ಕೆ ಸೂಕ್ತ ಸ್ಥಳವಾಗಿರುವುದರಿಂದ ಈ ಜಾಗವನ್ನೇ ಸದರಿ ಕೇಂದ್ರಕ್ಕೆ ಕಾಯ್ದಿರಿಸಲು ಕೋರಲಾಗಿದೆ.



ಕುಲಸಚಿವರು ಕುಲಪತಿಗಳು

2. ಪ್ರಸ್ತುತ ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನ ಮತ್ತು ವಿಸ್ತರಣಾ ಕೇಂದ್ರ ನಡೆಸುತ್ತಿರುವ ಸ್ಥಳದಲ್ಲಿಯೇ ಕನಿಷ್ಟ ನಾಲ್ಕು ಎಕರೆ ಜಾಗೆ ಲಭ್ಯವಾಗುವುದಾದರೆ ಆ ಜಾಗೆಯನ್ನು ಕಾಯ್ದಿರಿಸಲು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಈ ಮೇಲೆ ಸೂಚಿಸಿದ ಸ್ಥಳಕ್ಕೆ ಸಂಬಂಧಪಟ್ಟಂತೆ ಸ್ಥಳ ಸಂಖ್ಯೆ 1 ನ್ನು ಈ ಹಿಂದೆ ಕಾಯ್ದಿರಿಸುವ ಸಲುವಾಗಿ ಇದೆ ಜಾಗೆಯ ಮೇಲೆ ನೀಲ ನಕ್ಷೆಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಮರು ಪರಿಶೀಲನೆಗಾಗಿ ಸರ್ಕಾರದಿಂದ ಮರಳಿ ಬಂದಿರುತ್ತದೆ. ಆದ್ದರಿಂದ ಸದರಿ ಅಧ್ಯಯನ ಕೇಂದ್ರಕ್ಕೆ ನಿರ್ದಿಷ್ಟವಾಗಿ ಇದೇ ಸ್ಥಳವನ್ನು ಕಾಯ್ದಿರಿಸಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನ ಮತ್ತು ವಿಸ್ತರಣಾ ಕೇಂದ್ರಕ್ಕೆ ಸ್ಥಳ ಒದಗಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಗೆ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಡಾ. ಬಾಬು ಜಗಜೀವನ ರಾಮ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಕಟ್ಟಡಕ್ಕಾಗಿ ಸ್ಥಳವನ್ನು ಒದಗಿಸುವ ವಿಷಯವಾಗಿ ಶ್ರೀ. ಮಹೇಶ ವೈ. ಹುಲೇನ್ನವರ, ಸಿಂಡಿಕೇಟ ಸದಸ್ಯರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದಿಂದ ಅನುದಾನ ಸ್ವೀಕೃತವಾಗುವವರೆಗೆ ವಿಭಾಗದ ಚಟುವಟಿಕೆಗಳನ್ನು ಪ್ರಸ್ತುತ ಇರುವ ವಿಭಾಗದಲ್ಲಿಯೇ ಮುಂದುವರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಲಾಯಿತು.**



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 20) **ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ "ವಾಲ್ಮೀಕಿ ಪೀಠದ" ಕಟ್ಟಡಕ್ಕಾಗಿ ಸ್ಥಳವನ್ನು ಒದಗಿಸುವ ಕುರಿತು ಪರಿಶೀಲಿಸುವುದು.

**ಟಿಪ್ಪಣಿ :**

ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಪರಿಶಿಷ್ಟ ಪಂಗಡ ನೌಕರರ ಸಂಘ (ರಿ) ಧಾರವಾಡ ಇವರು ದಿ: 30-5-2025 ಪತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ "ಆದಿಕವಿ ಮಹರ್ಷಿ ವಾಲ್ಮೀಕಿ ಪೀಠ" ವನ್ನು ಪ್ರಾರಂಭಿಸಲಾಗಿದ್ದು, ಅದು 2020-21ರಲ್ಲಿ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ವಿಭಾಗದ ಒಂದು ಕೊಠಡಿಯಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸಿದೆ. ಈಗಾಗಲೇ ಸರ್ಕಾರದಿಂದ ಪೀಠವನ್ನು ಪ್ರಾರಂಭಿಸಲು ಮತ್ತು ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ನಿಧಿಯನ್ನು ಒದಗಿಸಲು ವಿನಂತಿಸಲಾಗಿತ್ತು. ಆದರೇ ಸರ್ಕಾರವು ಸದ್ಯ ನಿಧಿಯನ್ನು ಒದಗಿಸಲು ಸಾಧ್ಯವಿಲ್ಲವೆಂದು ಮತ್ತು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದಲೇ ಕಟ್ಟಡ ನಿರ್ಮಾಣ ಕಾರ್ಯವನ್ನು ಜರುಗಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತದೆ.

ಮುಂದುವರೆದು, ಈ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆ ನಿರ್ಣಯ ಸಂಖ್ಯೆ 22 ದಿ: 5-12-2022 ರಲ್ಲಿ ಒಪ್ಪಿಗೆ ಸೂಚಿಸಿದಂತೆ ಆದಿ ಕವಿ ಮಹರ್ಷಿ ವಾಲ್ಮೀಕಿ ಪೀಠಕ್ಕಾಗಿ 2 ಎಕರೆ ಜಮೀನನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಹಳೆಯ ಕಮರ್ಶಿಯಲ್ ಕಾಂಪ್ಲೆಕ್ಸ್ (ಕ್ರೀಡಾ ಭವನದ ಎಡ ಭಾಗದಲ್ಲಿರುವ ಪರೀಕ್ಷಾ ವಿಭಾಗದ ಬಲ ಭಾಗದಲ್ಲಿರುವ) ಸ್ಥಳದಲ್ಲಿ ಒದಗಿಸಲು ವಿನಂತಿಸಲಾಗಿದೆ. ಸದರಿ ಸ್ಥಳವನ್ನು ಒದಗಿಸಿದಲ್ಲಿ ಕಟ್ಟಡದ ರೂಪುರೇಷೆಗಳನ್ನು ತಯಾರಿಸಿ ಕಟ್ಟಡದ ಕಾರ್ಯವನ್ನು ಪ್ರಾರಂಭಿಸಲು ಸರ್ಕಾರದಿಂದ ಮತ್ತು ಗಣ್ಯವ್ಯಕ್ತಿಗಳಿಂದ ಅನುದಾನಕ್ಕಾಗಿ ಮುಂದಿನ ಕ್ರಮ ಕೈಗೊಳ್ಳುವುದು ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ದಿ: 5-12-2022 ರಂದು ನಡೆದ ಸಿಂಡಿಕೇಟ ಸಭೆಯ ಕಲಂ 22 ರಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ.

> "ಕರ್ನಾಟಕ ವಿಶ್ವವಿದ್ಯಾಲಯದಲ್ಲಿ "ವಾಲ್ಮೀಕಿ ಅಧ್ಯಯನ ಪೀಠ" ಸ್ಥಾಪಿಸಲು ಸ್ಥಳ ಒದಗಿಸುವ ಕುರಿತು ಸಿಂಡಿಕೇಟ್ ಸದಸ್ಯರಾದ ಡಾ. ಕೆ.ಡಿ. ಹಾವೇರಿಪೇಟ್ ಇವರ ಪ್ರಸ್ತಾವನೆ ಪರಿಶೀಲಿಸಿ ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಸೂಕ್ತವಾದ ಸ್ಥಳವನ್ನು ಗುರುತಿಸಲು ಸೂಚಿಸಲಾಗಿ ಅದರಂತೆ ಅವಶ್ಯಕವಾಗಿ ಬೇಕಾಗುವಷ್ಟು ಸ್ಥಳವನ್ನು ಒದಗಿಸಲು ಒಮ್ಮತದಿಂದ ಸಿಂಡಿಕೇಟ ಒಪ್ಪಿಗೆಯನ್ನು ಸೂಚಿಸಿತು"

**ಮುಂದುವರೆದು, ಕಂಡಿಕೆ 8 ರಲ್ಲಿ ಮಾನ್ಯ ಕುಲಸಚಿವರು ಕನಕ ಪೀಠ ಮತ್ತು ವೇಮನಪೀಠದ ಮಧ್ಯಭಾಗದಲ್ಲಿ ಬರುವ ಖಾಲಿ ಜಾಗವನ್ನು ಪರಿಶೀಲಿಸಿ ಗುರುತಿಸಬಹುದು ಎಂದು ಆದೇಶಿಸಿರುತ್ತಾರೆ. ಸದರಿ ಕಂಡಿಕೆಗೆ ಮಾನ್ಯ ಕುಲಪತಿಗಳು ಒಪ್ಪಿಗೆ ಸೂಚಿಸಿರುತ್ತಾರೆ.**

ಅದೇ ದಿನ ದಿ: 14-6-2025 ರಂದು ಕುಲಸಚಿವರು ಮತ್ತು ಕುಲಪತಿಗಳ ಸಮ್ಮುಖದಲ್ಲಿ ಜಗದ್ಗುರು ಶ್ರೀ. ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಮಹರ್ಷಿ ವಾಲ್ಮೀಕಿ ಗುರುಪೀಠ ಟ್ರಸ್ಟ, ಶ್ರೀ ವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ, ತಾ:ಹರಿಹರ, ಜಿ: ದಾವಣಗೇರಿ ಹಾಗೂ ವಾಲ್ಮೀಕಿ ಅಧ್ಯಯನ ಪೀಠದ ಸಂಯೋಜಕರು, ಪ್ರಸ್ತುತ ಸಿಂಡಿಕೇಟ್ ಸದಸ್ಯರಾದ ಶ್ರೀ. ಮಹೇಶ ವೈ. ಹುಲೇನ್ನವರ, ಜಿಲ್ಲಾ ವಾಲ್ಮೀಕಿ ಸಂಘದ ಅಧಕ್ಷರು ಮತ್ತು ಸದಸ್ಯರು, ಶ್ರೀ. ರಾಬರ್ಟ ದದ್ದಪೂರಿ, ಡಾ. ಬಸವರಾಜ ಗೊರವರ, ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಸಿಂಡಿಕೇಟ ಸದಸ್ಯರು ಹಾಗೂ ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಅಧ್ಯಕ್ಷರು ಮತ್ತು ಸದಸ್ಯರು, ಪ್ರಾಧ್ಯಾಪಕರು, ಸಂಶೋಧನ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಆದಿಕವಿ ಶ್ರೀ ವಾಲ್ಮೀಕಿ ಅಧ್ಯಯನ ಪೀಠಕ್ಕೆ ಕ್ರೀಡಾ ಭವನದ ಹಾಗೂ ಪರೀಕ್ಷಾ ಭವನದ ಮಧ್ಯಂತರ ಜಮೀನು ನೀಡಲು ಒಪ್ಪಿಗೆ ವಿನಂತಿಸಿರುತ್ತಾರೆ.



**ಕುಲಸಚಿವರು** **ಕುಲಪತಿಗಳು**

ಈ ಹಿನ್ನೆಲೆಯಲ್ಲಿ ಆದಿ ಕವಿ ಮಹರ್ಷಿ ವಾಲ್ಮೀಕಿ ಪೀಠಕ್ಕಾಗಿ 2 ಎಕರೆ ಜಮೀನನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಹಳೆಯ ಕಮರ್ಶಿಯಲ್ ಕಾಂಪ್ಲೆಕ್ಸ್ (ಕ್ರೀಡಾ ಭವನದ ಎಡ ಭಾಗದಲ್ಲಿರುವ ಪರೀಕ್ಷಾ ವಿಭಾಗದ ಬಲ ಭಾಗದಲ್ಲಿರುವ) ಸ್ಥಳದಲ್ಲಿ ಒದಗಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಗೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ "ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಪೀಠದ" ಕಟ್ಟಡಕ್ಕಾಗಿ ಸ್ಥಳವನ್ನು ಒದಗಿಸುವ ಕುರಿತು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಮುಖ್ಯ ಗ್ರಂಥಾಲಯದ ಪರಿಸರದಲ್ಲಿರುವ ಜಾಗವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 21) ವಿಷಯ-: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಕಟ್ಟಡ ನಿರ್ಮಿಸಲು ಸೂಕ್ತ ಸ್ಥಳ ಒದಗಿಸುವ ಕುರಿತು ಪರಿಶೀಲಿಸುವುದು.

ನಿವೇದನೆ:

ಚೇರಮನ್, ವಾಣಿಜ್ಯಶಾಸ್ತ್ರ ವಿಭಾಗ, ಕ.ವಿ.ವಿ. ಧಾರವಾಡ ಇವರು ದಿ: 21-6-2023 ರ ಪತ್ರದಲ್ಲಿ "The department of Commerce sought administrative approval for new independent building to the department and accordingly the Honourable Vice-Chancellor, Karnatak University, Dharwad gave approval for the same. The department is requesting to allocate a suitable site for construction of new independent building in the main campus and also request to direct the Resident Engineer to prepare a detailed plan and to estimate probable cost of the proposed new independent building to the department of Commerce, KU Dharwad".

ಮುಂದುವರೆದು, ಸದರಿ ವಿಷಯವಾಗಿ ಸೂಕ್ತ ಸ್ಥಳವನ್ನು ವಿತರಿಸುವ ಕುರಿತು ಕರಡು ಕಲಂನ್ನು ತಯಾರಿಸಿದ್ದು ವಿಷಯವನ್ನು ಸಿಂಡಿಕೇಟ ಸಭೆಗೆ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಕಟ್ಟಡ ನಿರ್ಮಿಸಲು ಸೂಕ್ತ ಸ್ಥಳ ಒದಗಿಸುವ ಕುರಿತು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಮುಖ್ಯ ಗ್ರಂಥಾಲಯದ ಪರಿಸರದಲ್ಲಿರುವ ಜಾಗವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಲಾಯಿತು.**

-

-

-

-

-

-

-

-



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 22) ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ ಮುಂಬರುವ 75ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀಧಿಸುವ ಕುರಿತು ದಿನಾಂಕ: 16.06.2025 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆಯ ಕಲಂ ನಂ.4 ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

1. ಸನ್ 2023-24 ನೇ ಸಾಲಿನ ವಿಶ್ವವಿದ್ಯಾಲಯದ ಮುಂಬರುವ 75ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಪೂರ್ವಸಿದ್ಧತೆಗಾಗಿ ವಿವಿಧ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀಧಿಸಲಾಗುವುದು.

2. ಮುಂದುವರೆದು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಸುವರ್ಣಪದಕಗಳು ಸೇರಿ ಪ್ರಸ್ತುತ ವರ್ಷಕ್ಕೆ ಒಟ್ಟು 285 ಸುವರ್ಣಪದಕಗಳು ಸ್ಥಾಪಿತಗೊಂಡಿವೆ. (ಘಟಿಕೋತ್ಸವ ಸಮಾರಂಭದ ದಿನಾಂಕ ನಿಗದಿಯಾಗುವವರೆಗೆ ಸುವರ್ಣಪದಕಗಳ ಸಂಖ್ಯೆ ಹೆಚ್ಚಾಗಬಹುದು.) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗಿಸಿದ ವಿವಿಧ ಸ್ನಾತಕ/ಸ್ನಾತಕೋತ್ತರ ಮತ್ತು ಡಿಪ್ಲೋಮಾ ಕೋರ್ಸಗಳ ಪದವಿ ಪರೀಕ್ಷೆಗಳಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುವರ್ಣಪದಕಗಳನ್ನು ದಾನಿಗಳು ರೂಪಿಸಿದ ನಿಯಮಾವಳಿಗಳ ಅನುಗುಣವಾಗಿ ಪ್ರದಾನ ಮಾಡುವ ಕುರಿತು ಸುವರ್ಣಪದಕಗಳನ್ನು ಸಿದ್ಧಪಡಿಸಿ ಪೂರೈಸಲಾಗುವುದು.

3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ, 2000 ರ (ಕರ್ನಾಟಕ ರಾಜ್ಯಪತ್ರ ಸಂಖ್ಯೆ :758 ರ FD 574(A) Exp-12/2019, Bengaluru dated : 7th September 2019ರಲ್ಲಿ 30 ದಿನಗಳ ಕಾಲಾವಕಾಶವನ್ನು ಕಡಿತಗೊಳಿಸಿ 15 ದಿನಗಳಿಗೆ ನಿಗದಿಪಡಿಸಿದೆ.) ನಿಯಮದಂತೆ ಸುವರ್ಣ ಪದಕಗಳನ್ನು ಖರೀಧಿಸಲು ಇ-ಟೆಂಡರ ಆಹ್ವಾನಿಸಿ ಖರೀಧಿಸಲಾಗುವುದು.

4. ವಿಶ್ವವಿದ್ಯಾಲಯದ ಸನ್ 2022-23 ನೇ ಸಾಲಿನಲ್ಲಿ (ದಿನಾಂಕ : 24.09.2024ರಂದು) ಜರುಗಿದ 74ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾದ ಒಟ್ಟು 278 ಚಿನ್ನದ ಪದಕಗಳನ್ನು ತಯಾರಿಸಿ ಪೂರೈಸಿದ Shiv Awaards, Chandni Chawk, Delhi ಇವರಿಗೆ ರೂ. 8,97,103/- (ಎಂಟು ಲಕ್ಷ ತೊಂಬತ್ತ ಏಳು ಸಾವಿರದಾ ಒಂದು ನೂರಾ ಮೂರು ರೂಪಾಯಿಗಳು ಮಾತ್ರ) ಪಾವತಿಸಲಾಗಿದೆ. ಕಾರಣ ಪ್ರಸ್ತುತ ವರ್ಷದ 75ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಖರೀದಿಸಲು ಅಂದಾಜು **ರೂ.9,50,000/-**(ರೂಪಾಯಿ ಒಂಬತ್ತು ಲಕ್ಷ ಐವತ್ತು ಸಾವಿರಗಳು) ಗಳ ವೆಚ್ಚವನ್ನು ಪಾವತಿಸಬೇಕಾಗುವದು. ಸದರಿ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಸಂಖ್ಯೆ-**21501** (Endowment Scholarship/ Gold Medal ETC) ದಿಂದ ಭರಿಸಲಾಗುವುದು.

5. ದಿನಾಂಕ 16-06-2025 ರಂದು ಜರುಗಿದ ದೊಡ್ಡ ಖರೀಧಿ ಸಮಿತಿ ಸಭೆಯ ಕಲಂ. ನಂ- 04 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

> 'ಕರ್ನಾಟಕ ವಿಶ್ವವಿದ್ಯಾಲಯದ **75**ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ, 2000 ರ ಕರ್ನಾಟಕ ರಾಜ್ಯಪತ್ರ ಸಂಖ್ಯೆ :758 ರ FD 574(A) Exp-12/2019, Bengaluru dated : 7th September 2019ರಲ್ಲಿ 30 ದಿನಗಳ ಕಾಲಾವಕಾಶವನ್ನು ಕಡಿತಗೊಳಿಸಿ 15 ದಿನಗಳಿಗೆ ನಿಗದಿಪಡಿಸಿದ ನಿಯಮದಂತೆ ಸುವರ್ಣ ಪದಕಗಳನ್ನು ಖರೀಧಿಸಲು ಇ-ಟೆಂಡರ ಆಹ್ವಾನಿಸಿ ಪ್ರಸ್ತುತ ವರ್ಷದಲ್ಲಿ ಅಂದಾಜು **ರೂ.9,50,000/-**(ರೂಪಾಯಿ ಒಂಬತ್ತು ಲಕ್ಷ ಐವತ್ತು ಸಾವಿರಗಳು) ಗಳ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ **21501 Endowment Scholarship/ Gold Medal Etc** ಯಿಂದ ಪಾವತಿಸುವುದಕ್ಕೆ ಕೆಟಿಪಿಪಿ ನಿಯಮಾವಳಿಗಳನ್ನು ಪಾಲಿಸಿ ಖರೀಧಿಸಲು ದೊಡ್ಡ ಖರೀಧಿ ಸಮಿತಿಯು ಒಪ್ಪಿಗೆ ಸೂಚಿಸಿತು.'



ಕುಲಸಚಿವರು ಕುಲಪತಿಗಳು

6. ದೊಡ್ಡ ಖರೀಧಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಕರ್ನಾಟಕ ವಿಶ್ವವಿದ್ಯಾಲಯದ ಮುಂಬರುವ 75ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀಧಿಸುವ ಕುರಿತು ದಿನಾಂಕ: 16.06.2025 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆಯ ಕಲಂ ನಂ.4 ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

–

–

–

–

–

–

–

–

–

–

–

–

–



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 23) ವಿಷಯ–:** ಜುಲೈ–2025 ರಲ್ಲಿ ಸ್ನಾತಕೋತ್ತರ ರಾಜ್ಯಶಾಸ್ತ್ರ ಹಾಗೂ ಇಂಗ್ಲೀಷ್ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣಿ:**

ಜುಲೈ–2025 ರಲ್ಲಿ ಸ್ನಾತಕೋತ್ತರ ರಾಜ್ಯಶಾಸ್ತ್ರ ಹಾಗೂ ಇಂಗ್ಲೀಷ್ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳ ಅಧಿಕಾರದ ಅವಧಿಯು ಈ ಕೆಳಗೆ ನಮೂದಿಸಿದ ದಿನಾಂಕಗಳಂದು ಕೊನೆಗೊಂಡ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಸದರಿ ವಿಭಾಗಗಳಿಗೆ ಜೇಷ್ಠತೆಯ ಅನುಸಾರ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದ್ದಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತಾ ಯಾದಿಯ ಪ್ರಕಾರ ಈ ಕೆಳಕಾಣಿಸಿದ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳ ಆದೇಶದಂತೆ, ಸ್ನಾತಕೋತ್ತರ ರಾಜ್ಯಶಾಸ್ತ್ರ ಹಾಗೂ ಇಂಗ್ಲೀಷ್ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

| ಅ. ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ ಪ್ರಯುಕ್ತ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ರಾಜ್ಯಶಾಸ್ತ್ರ ವಿಭಾಗ | ಡಾ. ಬಿ. ಎಮ್. ರತ್ನಾಕರ, ಪ್ರಾಧ್ಯಾಪಕರು | 09.07.2025 | ಡಾ. ಯರಿಸ್ವಾಮಿ ಎಮ್., ಪ್ರಾಧ್ಯಾಪಕರು | 10.07.2025 | 07.07.2025 |
| 2) | ಇಂಗ್ಲೀಷ್ ವಿಭಾಗ | ಡಾ. ಎನ್. ಎಚ್. ಕಲ್ಲೂರ ಪ್ರಾಧ್ಯಾಪಕರು | 27.07.2025 | ಡಾ. ಮಲ್ಲಿಕಾರ್ಜುನ ಪಾಟೀಲ ಹಿ.ಪ್ರಾಧ್ಯಾಪಕರು | 28.07.2025 | 25.07.2025 |

ಆದ್ದರಿಂದ, ಮೇಲ್ಕಾಣಿಸಿದಂತೆ, ಸ್ನಾತಕೋತ್ತರ ರಾಜ್ಯಶಾಸ್ತ್ರ ಹಾಗೂ ಇಂಗ್ಲೀಷ್ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಸ್ನಾತಕೋತ್ತರ ರಾಜ್ಯಶಾಸ್ತ್ರ ಹಾಗೂ ಇಂಗ್ಲೀಷ್ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

–

–

–

–

–



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 24) ವಿಷಯ-: 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವ ಪ್ರಯುಕ್ತ ದಿನಾಂಕ 13.05.2025ರ ಸಿಂಡಿಕೇಟ್ ಸಭೆಯ ಅಂತಿಮ ನಿರ್ಣಯದಂತೆ ಡಾ.(ಶ್ರೀಮತಿ) ಶಶಿರೇಖಾ ಮಳಗಿ ಇವರಿಗೆ ದಿನಾಂಕ: 27.06.2025 ರಂದು ದಂಡ ಶುಲ್ಕ ಭರಿಸಲು ಪತ್ರದ ಮೂಲಕ ತಿಳಿಸಲಾಗಿ ಸದರಿಯವರು ದಂಡ ಶುಲ್ಕ ಭರಿಸುವ ಕುರಿತು ದಿನಾಂಕ: 16.05.2025 ಹಾಗೂ 01.07.2025 ರಂದು ಮನವಿ ಪತ್ರ ನೀಡಿದ್ದು, ಸದರಿಯವರ ವಿನಂತಿ ಪತ್ರ ಕುರಿತು ದಿನಾಂಕ: 04.07.2025 ರಂದು ಮಾನ್ಯ ಕುಲಪತಿಗಳು ಮರುಪರಿಶೀಲನೆ ಸಲುವಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಆದೇಶಿಸಿರುವುದರಿಂದ ಸಿಂಡಿಕೇಟ್ ಸಭೆಗೆ ಕಲಂ ತಯಾರಿಸಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ :**

1. "ನವ್ಹಂಬರ್/ಡಿಸೆಂಬರ್ 2022ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಫಲಿತಾಂಶವು ಪ್ರಕಟಗೊಂಡಿದ್ದು, ಕೆಲವೊಂದು ವಿದ್ಯಾರ್ಥಿಗಳು ಛಾಯಾಪ್ರತಿಗಳಿಗೆ ಅರ್ಜಿ ಸಲ್ಲಿಸಿ ಪಡೆದ ಉತ್ತರ ಪ್ರತಿಗಳಲ್ಲಿರುವ ಕೈಬರಹ ನಮ್ಮವುಗಳಲ್ಲ. ಪರಿಶೀಲಿಸಿ ತಮ್ಮ ಉತ್ತರ ಪತ್ರಿಕೆ ನೀಡಲು ವಿನಂತಿಸಿಕೊಂಡಿರುವುದರಿಂದ ಮುಖ್ಯ ಸಂಯೋಜಕರು ಪರಿಶೀಲಿಸಿ ಉತ್ತರ ಪತ್ರಿಕೆಯ ಪಾಕೇಟ್‌ನಲ್ಲಿ ಮ್ಯಾನ್ಯುವಲ್ ಅಂಕಗಳ ಯಾದಿ ಹಾಗೂ ಹಾಜರಾತಿ ವರದಿಯು ಪರಿಶೀಲಿಸಿ ವ್ಯತ್ಯಾಸ ಕಂಡು ಬಂದ Administrative Law ವಿಷಯದ ಅಂಕಗಳು ಹಾಗೂ Property Law ವಿಷಯದ ಕೋಡಿಂಗ್ ನಂಬರ್ ಪ್ರಕಾರ ಅಂಕಗಳನ್ನು ಕ್ರಮವಾಗಿ ವಿಷಯದ ಮೌಲ್ಯಮಾಪಕರು ನಮೂದಿಸದೇ ಅದಲು-ಬದಲು ಮಾಡಿದ್ದರಿಂದ ಅಲ್ಲಿ ವ್ಯತ್ಯಾಸವಾಗಿರುವುದು ಕಂಡು ಬಂದಿರುತ್ತದೆ.
2. ಆದಕಾರಣ Examination General Ordinance 0.119ರ ಪ್ರಕಾರ ಪ್ರಕಟಿಸಿದ ಫಲಿತಾಂಶವನ್ನು ಮರು ಪ್ರಕಟಿಸಲು ಅವಕಾಶವಿರುತ್ತದೆ.

**Ordinance 0.119**

0.119. If the result of an examination is discovered to be vitiated by error,malpractice, fraud, improper conduct or any other reason the Syndicate shall have the power to amend the result in such manner as to accord with true position and to make such declaration as the Syndicate may deem necessary in the behalf provided that (but subject to Ordinance 120) no result shall be amended after the expiration of six months from the date of publication.

ಮುಂದುವರೆದು, ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು Ordinance ನಲ್ಲಿ ಅವಕಾಶವಿರುತ್ತದೆ.

**"DRAFT ORDINANCE GOVERNING THE ACTS OF PUNISHMENT FOR BREACH OF DUTIES, MISBEHAVIOR AND INDISCIPLINE BY PERSONS INVOLVED IN UNIVERSITY EXAMINATION WORK."**

3. ಮುಂದುವರೆದು ಪ್ರಕಟಗೊಂಡಿರುವ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಫಲಿತಾಂಶ ಪ್ರಕಟಿಸಿದ್ದನ್ನು ಹಿಂಪಡೆದು ಸರಿಪಡಿಸಿ, ಪರೀಕ್ಷಾ ಫಲಿತಾಂಶವನ್ನು ಮರುಪ್ರಕಟಿಸುವ ಕುರಿತು ಆಡಳಿತ ಮಂಡಳಿಯ ಪರಿಶೀಲನೆಗೆ ಮಂಡಿಸಲಾಗಿತ್ತು.

ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ದಿನಾಂಕದಂತೆ ತಮ್ಮ ನಿರ್ಣಯವನ್ನು ಠರಾಯಿಸಿತು.

**Table Agenda No. 17. Dated: 28-07-2023**

**"3ನೇ ವರ್ಷದ ಕಾನೂನು ಪದವಿಯ 2ನೇ ಸೆಮಸ್ಟರಿನ ಫಲಿತಾಂಶ ಪ್ರಕಟಿಸಿದ್ದನ್ನು ಹಿಂಪಡೆಯುವ ಹಾಗೂ ತಿದ್ದುಪಡಿಗೊಳಿಸಿ ಪ್ರಕಟಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಪ್ಪಲಾಯಿತು. ಮತ್ತು ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು ಹಾಗೂ ಸತ್ಯಶೋಧನಾ ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ವಹಿಸಿ ಸದರ ವರದಿಯಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ಠರಾಯಿಸಿತು."**



ಕುಲಸಚಿವರು

ಕುಲಪತಿಗಳು

4. ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡಾ. ರಾಜೇಂದ್ರ ನಾಯಕ, ಡೀನರು, ಕಲಾ ವಿಭಾಗ, ಡಾ.ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷತೆಯಲ್ಲಿ ರಚಿಸಿದ ಸತ್ಯಶೋಧನಾ ಸಮಿತಿಯ ಮುಚ್ಚಿದ ಲಕೋಟೆಯ ಅಂತಿಮ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ತೆರೆದು ಓದಲಾಗಿ ಸಭೆಯು ವರದಿಯಲ್ಲಿನ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ತಮ್ಮ ನಿರ್ಣಯವನ್ನು ಠರಾಯಿಸಿತು.

**Table Agenda No. 05. Dated: 16-11-2023**

"ನವ್ಹಂಬರ್/ಡಿಸೆಂಬರ್ 2022ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ, Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ರಚಿಸಲಾದ ಸತ್ಯಶೋಧನಾ ಸಮಿತಿಯ ನೀಡಿದ ವರದಿಯ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್ ಸಭೆಯಲ್ಲಿ ತೆರೆದು ಓದಲಾಯಿತು. ಸಭೆಯು ವರದಿಯಲ್ಲಿನ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಕ್ರಮ ಕೈಕೊಳ್ಳಲು ನಿರ್ಣಯಿಸಿತು.

ಈ ಮೇಲಿನ ಎರಡು ವಿಷಯಗಳ ಕುರಿತು ಸಂಬಂಧಪಟ್ಟವರಗೆ ದಂಡ/ ಶಿಕ್ಷೆ ನಿಗದಿ ಪಡಿಸಲು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಕೊಳ್ಳಲಾಗುವುದೆಂದು ಸಿಂಡಿಕೇಟ್ ನಿರ್ಣಯಿಸಿತು."

**Table Agenda No. 07. Dated : 16-01-2024**

"ನವ್ಹಂಬರ್/ಡಿಸೆಂಬರ್ 2022ರಲ್ಲಿ ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ, Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ರಚಿಸಲಾದ ಸತ್ಯಶೋಧನಾ ಸಮಿತಿಯ ನೀಡಿದ ವರದಿಯನ್ನು ಚರ್ಚಿಸಲು ಪ್ರಸ್ತಾಪಿಸಿದಾಗ ಕುಲಸಚಿವರು (ಮೌಲ್ಯಮಾಪನ) ಈ ಬಗ್ಗೆ ಚರ್ಚಿಸಲು ಹೆಚ್ಚಿನ ಮಾಹಿತಿ ಅವಶ್ಯವಿರುವದಾಗಿ ತಿಳಿಸಿದಾಗ ಸದಸ್ಯರೆಲ್ಲರೂ ಒಮ್ಮತದಿಂದ ಮಾಹಿತಿಗಳೊಂದಿಗೆ ಮುಂದಿನ ಸಭೆಗೆ ಮಂಡಿಸಲು ಸೂಚಿಸಿ ವಿಷಯವನ್ನು ಮುಂದೂಡಲಾಯಿತು."

**Table Agenda No. 07. Dated: 07-03-2024**

"ನವ್ಹಂಬರ್/ಡಿಸೆಂಬರ್ 2022ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ, Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ಈ ಹಿಂದೆ ರಚಿಸಲಾದ ಸತ್ಯಶೋಧನಾ ಸಮಿತಿಯು ನೀಡಿದ ಮುಚ್ಚಿದ ಲಕೋಟೆಯನ್ನು ತೆರೆದು ವರದಿಯನ್ನು ಸಭೆಯಲ್ಲಿ ಓದಲಾಗಿ ಕೆಲವು ಸ್ಪಷ್ಟತೆಗಳಿಗಾಗಿ ಸಮಿತಿಯ ಗಮನಕ್ಕೆ ಪುನಃ ತಂದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಿತು."

**Table Agenda No. 14. Dated: 11-06-2024**

"ನವ್ಹಂಬರ್/ಡಿಸೆಂಬರ್ 2022ರಲ್ಲಿ ಜರುಗಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಫಲಿತಾಂಶವು UUCMS ತಂತ್ರಾಂಶದ ಮೂಲಕ ಪ್ರಕಟಗೊಂಡಿರುತ್ತದೆ. ಆದರೆ, Administrative Law ಹಾಗೂ Property Law ಈ ಎರಡು ವಿಷಯಗಳ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಬಗ್ಗೆ ರಚಿಸಲಾದ ಸತ್ಯಶೋಧನಾ ಸಮಿತಿಯ ನೀಡಿದ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್ ಸಭೆಯಲ್ಲಿ ತೆರೆದು ವರದಿಯನ್ನು ಎಲ್ಲ ಸದಸ್ಯರ ಮುಂದೆ ಓದಲಾಗಿ ಸದರಿ ಸಮಿತಿ ವರದಿಯನ್ವಯ ಕ್ರಮ ಜರುಗಿಸಲು ಆಡಳಿತ ಮಂಡಳಿ ಸಭೆಯು ನಿರ್ಣಯಿಸಿತು."

ಸಿಂಡಿಕೇಟ್ ನಿರ್ಣಯದ ಪ್ರಕಾರ ಡಾ.(ಶ್ರೀಮತಿ) ಶಶಿರೇಖಾ ಮಾಳಗಿ ಇವರಿಗೆ ಕವಿವಿ ನಿಯಮಾನುಸಾರ ದಂಡ ರೂ.82,500/-ಗಳನ್ನು ಭರಿಸುವಂತೆ ದಿನಾಂಕ: 29.07.2024 ರಂದು ಪತ್ರ ಬರೆಯಲಾಗಿತ್ತು.

ಅದರಂತೆ ಸದರಿಯವರು ದಂಡ ಶುಲ್ಕ ಭರಿಸುವ ಕುರಿತು 31.07.2024 ರಂದು ಆಕ್ಷೇಪಣಾ ಪತ್ರ ನೀಡಿದ್ದು, ಸದರಿಯವರ ಆಕ್ಷೇಪಣೆ ಕುರಿತು ಸಿಂಡಿಕೇಟ್ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಿತು.

**Table Agenda No. 05. Dated: 22-10-2024** ಹಾಗೂ ದಿನಾಂಕ 13-01-2025ರ ಸಿಂಡಿಕೇಟ್ ವಿಭಾಗದ ಕಚೇರಿ ಟಿಪ್ಪಣೆ ತಿದ್ದುಪಡೆಯಾದ ನಿರ್ಣಯ: (**Correction of resolution**) ಪ್ರಕಾರ



ಕುಲಸಚಿವರು ಕುಲಪತಿಗಳು

"ಮೂರು ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶದಲ್ಲಿ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವ ಪ್ರಯುಕ್ತ ಸತ್ಯಶೋಧನಾ ಸಮಿತಿ ವರದಿಯಲ್ಲಿ ಶ್ರೀಮತಿ. ಶಶಿರೇಖಾ ಮಳಗಿ ಇವರಿಗೆ ದಂಡ ವಿಧಿಸಿರುವದನ್ನು ಈ ಹಿಂದಿನ ಸಿಂಡಿಕೇಟ್ ಸಭೆಯು ಅನುಮೋದಿಸಿ ರೂ. 82,500/-ಗಳನ್ನು ವಸೂಲಿ ಮಾಡಲು ಸೂಚಿಸಲಾಗಿತ್ತು. ಆದರೆ, ಶ್ರೀಮತಿ. ಶಶಿರೇಖಾ ಮಾಳಗಿ ರವರು ಆಕ್ಷೇಪಿಸಿ ಸ್ವಾಭಾವಿಕ ನ್ಯಾಯ ಸಮ್ಮತವಾಗಿ ನನ್ನ ಹೇಳಿಕೆಯನ್ನು ದಾಖಲಿಸಲು ಸಮಿತಿಯವರು ಅವಕಾಶ ನೀಡಿರುವದಿಲ್ಲ. ಕಾರಣ ನನಗೆ ಒಂದು ಅವಕಾಶ ನೀಡಿ ಎಂದು ಕೋರಿರುವದರಿಂದ ಸದರಿಯವರ ಮನವಿ ಕುರಿತು ಸತ್ಯಶೋಧನಾ ಸಮಿತಿ ಪರಿಶೀಲಿಸಿ ಮರುವರದಿ ನೀಡಲು ತಿಳಿಸಬಹುದೆಂದು ಸಿಂಡಿಕೇಟ್ ಸಭೆ ನಿರ್ಣಯಿಸಿತು.

ದಂಡದ ಮೊತ್ತವು ಈಗಾಗಲೇ ಗೌರವಾನ್ವಿತ ರಾಜ್ಯಪಾಲರಿಂದ ಅನುಮೋದನೆಯಾದ ಅನುಶಾಸನದ ಪ್ರಕಾರವಾಗಿದ್ದು, ಅದರಲ್ಲಿ ತಿದ್ದುಪಡೆ ಮಾಡಲು ಬರುವದಿಲ್ಲವೆಂದು ಕುಲಸಚಿವರು (ಮೌಲ್ಯಮಾಪನ) ಇವರು ಸಿಂಡಿಕೇಟ್ ಗಮನಕ್ಕೆ ತಂದರು. ಸಿಂಡಿಕೇಟ್ ಸದಸ್ಯರು ಈ ಕುರಿತು ಚರ್ಚಿಸಿ ಸತ್ಯಶೋದನಾ ಸಮಿತಿ ಸ್ವಾಭಾವಿಕ ನ್ಯಾಯದನ್ವಯ ಸದರಿಯವರನ್ನು ವಿಚಾರಣೆಗೆ ಒಳಪಡಿಸಿ ಮರು ವರದಿ ನೀಡಿದ ನಂತರ ತೀರ್ಮಾನ ಮಾಡಲು ನಿರ್ಣಯಿಸಿತು."

## Table Agenda No. 20, Dated: 13.05.2025

"3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವ ಪ್ರಯುಕ್ತ ದಿನಾಂಕ: 22-10-2024ರ ಸಿಂಡಿಕೇಟ್ ಸಭೆಯ ಮರು ನಿರ್ಣಯದ ಪ್ರಕಾರ ಡಾ. ರಾಜೇಂದ್ರ ನಾಯಕ, ಡೀನರು ಇವರು ನಿವೃತ್ತಿಯಾದ ಕಾರಣ ಪ್ರೊ.ಎ.ವಿ. ಮೂಲಿಮನಿ ಡೀನರ ಅಧ್ಯಕ್ಷತೆಯಲ್ಲಿ ದಿನಾಂಕ: 11-04-2025 ರಂದು ಮತ್ತೊಮ್ಮೆ ಸತ್ಯಶೋಧನಾ ಸಮಿತಿ ಸಭೆ ನಡೆಸಿ ಶ್ರೀಮತಿ ಶಶಿರೇಖಾ ಮಾಳಗಿ ಇವರ ಉಪಸ್ಥಿತಿಯಲ್ಲಿ ಹೇಳಿಕೆಯನ್ನು ದಾಖಲೆಗಳನ್ನು ಮರುಪರಿಶೀಲಿಸಿ ನೀಡಿದ ವರದಿಯನ್ನು ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಈ ಹಿಂದೆ ನೀಡಿದ ವರದಿಯ ಅಂಶಗಳನ್ನು ಒಳಗೊಂಡಂತೆ ಸದರಿ ಸಮಿತಿ ವರದಿಯನ್ನು ಒಪ್ಪಿ ಅದರಂತೆ ಕ್ರಮ ವಹಿಸಲು ನಿರ್ಣಯಿಸಿತು."

ಪ್ರಸ್ತುತ

ಸದರ ಸಿಂಡಿಕೇಟ್ ನಿರ್ಣಯದಂತೆ ದಿನಾಂಕ: 27.06.2025 ರಂದು ದಂಡ ಶುಲ್ಕ ಭರಿಸಲು ಪತ್ರದ ಮೂಲಕ ತಿಳಿಸಲಾಯಿತು. ಅದಕ್ಕೆ ಡಾ.(ಶ್ರೀಮತಿ) ಶಶಿರೇಖಾ ಮಳಗಿ ಇವರು ದಿನಾಂಕ: 16.05.2025 ಹಾಗೂ 01.07.2025 ರಂದು ನೀಡಿದ ಪತ್ರದಲ್ಲಿ ಪ್ರೊ.ಅರವಿಂದ ಮೂಲಿಮನಿ ಇವರ ಅಧ್ಯಕ್ಷತೆಯಲ್ಲಿ ಸತ್ಯಶೋಧನಾ ಸಮಿತಿ ಸಭೆ ನಡೆಸಿದ ವಿಚಾರಣಾ ಸಮಿತಿ ಸಭೆಯ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ನನ್ನ ವಿನಂತಿಯನ್ನು ಪರಿಗಣಿಸಬೇಕೆಂದು ವಿನಂತಿಸಿ, ಆ ಬ್ಯಾಚ್‌ನಲ್ಲಿರುವ ಎಲ್ಲ ವಿದ್ಯಾರ್ಥಿಗಳು ವಿಷಯವನ್ನು ಯಶಸ್ವಿಯಾಗಿ ಉತ್ತೀರ್ಣರಾಗಿ ಪದವಿ ಪಡೆದಿರುತ್ತಾರೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ನಷ್ಟವಾಗಿರುವುದಿಲ್ಲ. ಹಾಗೂ ನನಗೆ ವಿಧಿಸಿದ ದಂಡದ ಮೊತ್ತ ರೂ.82,500 ಗಳನ್ನು ಪಾವತಿಸಲು ನಾನು ಯಾವುದೇ ರೀತಿಯಲ್ಲಿ ಬಾಧ್ಯಸ್ಥಳಾಗಿರುವುದಿಲ್ಲ. ಸದರ ವಿಷಯ ಕುರಿತು ನಾನು ಇಂದಿನವರೆಗೂ ವಿಶ್ವವಿದ್ಯಾಲಯದಿಂದ ನ್ಯಾಯವನ್ನು ಕೋರುತ್ತಿರುತ್ತೇನೆ ಎಂದು ವಿನಂತಿಸಿಕೊಂಡಿರುವರು.

ಈ ವಿಷಯ ಕುರಿತು 06 ಬಾರಿ ಆಡಳಿತ ಮಂಡಳಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಸಮಿತಿ ನೀಡಿದ ವರದಿಯಂತೆ ಗೌರವಾನ್ವಿತ ರಾಜ್ಯಪಾಲರಿಂದ ಅನುಮೋದನೆಗೊಂಡ ಅನುಶಾಸನದ ಅನುಸಾರ ಸೂಚಿಸಿದ ದಂಡ ಭರಿಸದೇ ಪತ್ರಗಳನ್ನು ನೀಡುತ್ತಿದ್ದು, ಅದೇ ರೀತಿ ಕಾನೂನು ವಿದ್ಯಾರ್ಥಿಗಳ ಸಂಘದಿಂದ ಸಹ ಪತ್ರಗಳನ್ನು ನೀಡುತ್ತಿರುವರು.

ಸದರಿಯವರ ವಿನಂತಿ ಪತ್ರ ಕುರಿತು ದಿನಾಂಕ: 04.07.2025 ರಂದು ಮಾನ್ಯ ಕುಲಪತಿಗಳು ಮರುಪರಿಶೀಲನೆ ಸಲುವಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಆದೇಶಿಸಿರುವುದರಿಂದ ಸಿಂಡಿಕೇಟ್ ಸಭೆಗೆ ಕಲಂ ತಯಾರಿಸಿ ಸಹಿಗಾಗಿ ಕಡತವನ್ನು ಮಂಡಿಸಲಾಯಿತು.

ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಮಹಾವಿದ್ಯಾಲಯಕ್ಕೆ ಸಂಬಂಧಿಸಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವ ಪ್ರಯುಕ್ತ ದಿನಾಂಕ 13.05.2025ರ ಸಿಂಡಿಕೇಟ್ ಸಭೆಯ ಅಂತಿಮ ನಿರ್ಣಯದಂತೆ ಡಾ.(ಶ್ರೀಮತಿ) ಶಶಿರೇಖಾ ಮಳಗಿ ಇವರಿಗೆ ದಿನಾಂಕ: 27.06.2025 ರಂದು ದಂಡ ಶುಲ್ಕ ಭರಿಸಲು ಪತ್ರದ ಮೂಲಕ ತಿಳಿಸಲಾಗಿ ಸದರಿಯವರು ದಂಡ ಶುಲ್ಕ ಭರಿಸುವ**



ಕುಲಸಚಿವರು ಕುಲಪತಿಗಳು

ಕುರಿತು ದಿನಾಂಕ: 16.05.2025 ಹಾಗೂ 01.07.2025 ರಂದು ಮನವಿ ಪತ್ರ ನೀಡಿದ್ದು, ಸದರಿಯವರ ವಿನಂತಿ ಪತ್ರ ಕುರಿತು ದಿನಾಂಕ: 04.07.2025 ರಂದು ಮಾನ್ಯ ಕುಲಪತಿಗಳು ಮರುಪರಿಶೀಲನೆ ಸಲುವಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಆದೇಶಿಸಿರುವುದರ ಕುರಿತು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಡಾ.(ಶ್ರೀಮತಿ) ಶಶಿರೇಖಾ ಮಳಗಿ ಇವರಿಗೆ ದಿನಾಂಕ 27.6.2025ರ ನಿರ್ಣಯದ ಪ್ರಕಾರ ದಂಡ ಶುಲ್ಕವನ್ನು ಭರಿಸಲು ಹಾಗೂ ಸದರಿಯವರ ದಂಡವನ್ನು ಭರಿಸುವವರೆಗೆ ಮಹಾವಿದ್ಯಾಲಯದ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳಿಂದ ನಿರ್ಬಂಧಿಸುವುದು ಅವರ ವೇತನ ಬಡ್ತಿ ತಡೆಹಿಡಿಯುವುದು ಹಾಗೂ ಇತರೆ ಸಮಿತಿಗಳಿಗೆ ಸಂಬಂಧಿಸಿದ ಯಾವುದೇ ಕಾರ್ಯಕ್ಕೆ ನಿಯೋಜನೆ ಮಾಡಬಾರದೆಂದು ಸಿಂಡಿಕೇಟ್ ಸಭೆಯು ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 25) ವಿಷಯ–: Ratification of the action taken by the Hon'ble Vice-Chancellor for having permitted Dr.M.N.Megeri, Professor, Dept. of Statistics, Karnatak Science College, Dharwad to visit his daughter from 24.06.2025 to 08.07.2025 during vacation period at Cadence, San Jose, California, United States of America (USA).

**NOTE :**

Dr.M.N.Megeri, Professor, Dept. of Statistics, Karnatak Science College, Dharwad vide his letter dated:26.03.2025 has requested the University to grant permission to visit Cadence, San Jose, California, United States of America to visit his daughter from 24.06.2025 to 08.07.2025 during vacation period.

It is submitted that the Syndicate (Vide Res.No.47 dated: 9.5.2009/23.6.2009 (Corrected) has resolved to authorize Hon'ble Vice-Chancellor to permit faculty Members to go abroad on Exchange Programmes/MOUs and other short visits and such actions may be placed before Syndicate for perusal only.

Accordingly, as per the orders of the Hon'ble Vice-Chancellor and vide this office letter No.169 dated 24.04.2025 Dr.M.N.Megeri, Professor, Dept. of Statistics, Karnatak Science College, Dharwad has been permitted to visit his daughter at Cadence, San Jose, California, United States of America (USA) from 24.06.2025 to 08.07.2025 during vacation period.

Hence, the action taken by the Hon'ble Vice-Chancellor for having permitted Dr.M.N.Megeri, Professor, Dept. of Statistics, Karnatak Science College, Dharwad to visit his daughter at Cadence, San Jose, California, United States of America (USA) from 24.06.2025 to 08.07.2025 during vacation period is placed before the Syndicate for ratification.

<u>ನಿರ್ಣಯ</u>

**Syndicate Ratified the action taken by the Honble Vice-Chancellor for having permitted Dr.M.N.Megeri, Professor, Dept.of Statistics, Karnatak Science College, Dharwad to meet his daughter from 24.06.2025 to 08.07.2025 during vacation period at Cadence San Jose, California, United States of America (USA).**

–

–

–

–

–



ಕುಲಸಚಿವರು

ಕುಲಪತಿಗಳು

| | |
|---|---|
| **ಕಾರ್ಯಸೂಚಿ ಸಂಖ್ಯೆ 26) ವಿಷಯ–:** | ಡಾ. ಬಸವರಾಜ ಗೊರವರ, ಸಿಂಡಿಕೇಟ್ ಸದಸ್ಯರು ಇವರು ದಿನಾಂಕ:04.07.2025 ರಂದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ಕವಿವಿ ಸ್ನಾತಕೋತ್ತರ ಕೇಂದ್ರ ಗದಗ ಮತ್ತು ಕಾರವಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಆಂತರಿಕ ವರ್ಗಾವಣೆಗೊಳಿಸುವ ಬಗ್ಗೆ ನಿಯಮಗಳನ್ನು ರಚಿಸುವ ವಿಷಯದ ಕುರಿತ ವರದಿಯನ್ನು ಪರಿಶೀಲಿಸುವ ಬಗ್ಗೆ. |

**ಟಿಪ್ಪಣಿ:**

ಡಾ. ಬಸವರಾಜ ಗೊರವರಮ ಸಿಂಡಿಕೇಟ್ ಸದಸ್ಯರು, ಕವಿವಿ ಧಾರವಾಡ ಇವರು ದಿನಾಂಕ:04.07.2025 ರ ತಮ್ಮ ಪತ್ರದಲ್ಲಿ ಕವಿವಿ ಸ್ನಾತಕೋತ್ತರ ಕೇಂದ್ರ ಗದಗ ಮತ್ತು ಕಾರವಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಆಂತರಿಕ ವರ್ಗಾವಣೆಗೊಳಿಸುವ ಬಗ್ಗೆ ನಿಯಮಗಳನ್ನು ರಚಿಸುವ ವಿಷಯದ ಕುರಿತ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಕವಿವಿ ಸ್ನಾತಕೋತ್ತರ ಕೇಂದ್ರ ಗದಗ ಮತ್ತು ಕಾರವಾರದಲ್ಲಿ ಕಾರ್ಯ ನಿರ್ಯಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಆಂತರಿಕ ವರ್ಗಾವಣೆಗೊಳಿಸುವ ಬಗ್ಗೆ ನಿಯಮಗಳನ್ನು ರಚಿಸುವ ವಿಷಯದ ಕುರಿತು ದಿನಾಂಕ:25.02.2025 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ:27 ರನ್ವಯ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ ದಿನಾಂಕ:20.03.2025 ರ ಅಧಿಸೂಚನೆ ಸಂಖ್ಯೆ:ಕವಿವಿ/ಸಿಆಸುವಿ/ಶಿಕ್ಷಕ-3/2025/3279 ರ ಮೂಲಕ ಅಧಿಸೂಚನೆ ಹೊರಡಿಸಲಾಗಿತ್ತು:

| | | |
|---|---|---|
| 1) | ಡಾ. ಬಸವರಾಜ ಗೊರವರ,<br>ಸಿಂಡಿಕೇಟ್ ಸದಸ್ಯರು, ಕವಿವಿ ಧಾರವಾಡ | -ಅಧ್ಯಕ್ಷರು |
| 2) | ಶ್ರೀಮತಿ.ಅಂಜನಾ ಬಸನಗೌಡರ,<br>ಸಿಂಡಿಕೇಟ್ ಸದಸ್ಯರು, ಕವಿವಿ ಧಾರವಾಡ | -ಸದಸ್ಯರು |
| 3) | ಡಾ.ಶೌಕತ್ ಅಜೀಮ್,<br>ಹಿರಿಯ ಪ್ರಾಧ್ಯಾಪಕರು ಹಾಗೂ<br>ಸಿಂಡಿಕೇಟ್ ಸದಸ್ಯರು, ಕವಿವಿ ಧಾರವಾಡ | -ಸದಸ್ಯರು |
| 4) | ಉಪ ಕುಲಸಚಿವರು, ಸಿಆಸು ವಿಭಾಗ | -ಸಂಚಾಲಕರು |

ಮುಂದುವರೆದು, ಇಲ್ಲಿ ನಿವೇದಿಸುವುದೇನೆಂದರೆ, ಮೇಲ್ಕಂಡ ಸದಸ್ಯರನ್ನೊಳಗೊಂಡಂತೆ ರಚಿತಗೊಂಡ ಸಮಿತಿಯು ದಿನಾಂಕ:05.05.2025, 18.06.2025 ಮತ್ತು 03.07.2025 ರಂದು ಸಭೆ ಸೇರಿ ಉದ್ದೇಶಿತ ವಿಷಯದ ಕುರಿತು ಕೂಲಂಕುಷವಾಗಿ ಚರ್ಚಿಸಿ ಅದರಂತೆ, ವರದಿಯನ್ನು ದಿನಾಂಕ:04.07.2025 ರಂದು ವರದಿಯನ್ನು ಸಲ್ಲಿಸಿದ್ದು ಇರುತ್ತದೆ.

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ ಡಾ. ಬಸವರಾಜ ಗೊರವರ, ಸಿಂಡಿಕೇಟ್ ಸದಸ್ಯರು ಇವರು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ಕವಿವಿ ಸ್ನಾತಕೋತ್ತರ ಕೇಂದ್ರ ಗದಗ ಮತ್ತು ಕಾರವಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಆಂತರಿಕ ವರ್ಗಾವಣೆಗೊಳಿಸುವ ಬಗ್ಗೆ ನಿಯಮಗಳನ್ನು ರಚಿಸುವ ಕುರಿತ ವಿಷಯದ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕವಿವಿ ಸ್ನಾತಕೋತ್ತರ ಕೇಂದ್ರ ಗದಗ ಮತ್ತು ಕಾರವಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಆಂತರಿಕ ವರ್ಗಾವಣೆಗೊಳಿಸುವ ಕುರಿತು ರಚಿಸಲಾದ ಸಮಿತಿಯು ಕೈಗೊಂಡ ವರದಿಯನ್ನು ಡಾ. ಬಸವರಾಜ ಗೊರವರ, ಸಿಂಡಿಕೇಟ್ ಸದಸ್ಯರು ಇವರು ದಿನಾಂಕ:07.07.2025 ರಂದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ**



ಕುಲಸಚಿವರು ಕುಲಪತಿಗಳು

ವರದಿಯನ್ನು ತೆರೆದು ಓದಲಾಯಿತು ಸಿಂಡಿಕೇಟ್ ಸಭೆಯು ಸದರಿ ವರದಿಯನ್ನು ಒಪ್ಪಿಕೊಂಡು ಮುಂದಿನ ಕ್ರಮ ಜರುಗಿಸಲು ಅನುಮೋದಿಸಿತು. ಮುಂದುವರೆದು, ಗದಗ ಮತ್ತು ಕಾರವಾರದಲ್ಲಿರುವ ಸಂಬಂದಪಟ್ಟ ವಿಭಾಗಗಳಿಗೆ ಬೋಧನೆ ಮಾಡಲು ಸಂಬಂಧಪಟ್ಟ ಡೀನರುಗಳು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ ವಾರಕ್ಕೆ ಒಮ್ಮೆ ವಿಶೇಷ ಉಪನ್ಯಾಸವನ್ನು ಕೈಗೊಳ್ಳುವಂತೆ ಕ್ರಮವಹಿಸಲು ಸಿಂಡಿಕೇಟ ಸಭೆಯು ತಿರ್ಮಾನಿಸಲಾಯಿತು.

–

–

–

–

–

–

–

–

–

–

–

–

–

–

–

–

–

–



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 27) ವಿಷಯ-:** ಶ್ರೀಮತಿ. ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಇಲ್ಲಿ ಖಾಲಿ ಇರುವ ಶಾಖಾಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನಿಯೋಜಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕರ್ನಾಟಕ ಸರ್ಕಾರ ಬೆಂಗಳೂರು ಇಲಾಖೆಗೆ ಬಿಟ್ಟುಕೊಡಲು. ಜರುಗಿಸಲಾದ ಕುಲಪತಿಗಳ ಆಡಳಿತಾತ್ಮಕ ಕ್ರಮದ ದೃಢೀಕರಣಕ್ಕಾಗಿ ಮಂಡಿಸಿದ ಕುರಿತು.

**<u>ಪ್ರಸ್ತಾವನೆ:</u>**

ಶ್ರೀಮತಿ. ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರನ್ನು ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಇಲ್ಲಿ ಖಾಲಿ ಇರುವ ಶಾಖಾಧಿಕಾರಿ ಹುದ್ದೆಗೆ ಬಿಟ್ಟು ಕೊಡಲು ಅಥವಾ ನಿಯೋಜನೆ ಮೇಲೆ ನೇಮಿಸಲು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಬಿಟ್ಟುಕೊಡಲು ಪ್ರಸ್ತುತ ವಿಶ್ವವಿದ್ಯಾಲಯವು ಚಾಲ್ತಿಯಲ್ಲಿಟ್ಟುಕೊಂಡಿರುವ ಪರಿನಿಯಮಗಳಲ್ಲಿ ನಿಯೋಜನೆ ಮೇಲೆ ನೇಮಿಸಲು ಅವಕಾಶವಿದೆಯೇ ಎಂಬುದನ್ನು ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯದೊಂದಿಗೆ ವರದಿಯನ್ನು ಸಲ್ಲಿಸಲು ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ. ಇಡಿ 85 ಯು.ಕೆ.ವಿ 2025 ದಿನಾಂಕ: 08.05.2025 ರಲ್ಲಿ ನಿರ್ದೇಶನವಿತ್ತು.

ಈ ಸಂಬಂಧವಾಗಿ ಕರ್ನಾಟಕ ವಿಶ್ವವಿದ್ಯಾಲಯದ ನೌಕರರನ್ನು ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ನೇಮಿಸಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಯಾವುದೇ ಪರಿನಿಯಮಗಳನ್ನು ಅಳವಡಿಸಿಕೊಂಡಿರುವದಿಲ್ಲವೆಂದು ತಿಳಿಸುತ್ತಾ ಆದರೆ ಕರ್ನಾಟಕ ರಾಜ್ಯ ಸರ್ಕಾರದ ನೌಕರರಿಗೆ ಅನ್ವಯವಾಗುವ ಕೆ.ಸಿ.ಎಸ್ ನಿಯಮಾವಳಿಗಳನ್ನು ಅಳವಡಿಸಿಕೊಂಡು ಅದರ ಪ್ರಕಾರವೇ ಇಲ್ಲಿಯವರೆಗೆ ನೌಕರರನ್ನು ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ನಿಯೋಜಿಸುತ್ತಾ ಬಂದಿದ್ದು ಇರುತ್ತದೆ ಎಂಬ ಅಂಶವನ್ನು ಸರ್ಕಾರದ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-2) ಇವರಿಗೆ ತಿಳಿಸಿ ಮುಂಬರುವ ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಿಸಿ ಅವರನ್ನು ನಿಯೋಜನೆ ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ವಿಶ್ವವಿದ್ಯಾಲಯದ ಸಹಮತಿ ಇರುತ್ತದೆ ಎಂದು ಸರ್ಕಾರದ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-2) ಬೆಂಗಳೂರು ಇವರಿಗೆ ಈ ಕಚೇರಿ ಪತ್ರ ಸಂ. ಕವಿವಿ/ಸಿಆಸುವಿ/ ಶಿಕ್ಷಕೇತರ/4/2025/384 ದಿನಾಂಕ: 02.06.2025 ರ ಮೂಲಕ ತಿಳಿಸಲಾಗಿತ್ತು.

ಅದರಂತೆ, ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,(ಆಸು) (ತರಬೇತಿ ಮತ್ತು ಮಾಹಿತಿ ಹಕ್ಕು ಶಾಖೆ) ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರ ಅಧಿಸೂಚನೆ ಸಂ. ಸಿಆಸುಇ (ಆಸು)179 ಆರ್ ಟಿಐ 2025 ದಿನಾಂಕ: 19.06.2025 ರಲ್ಲಿ ಶ್ರೀಮತಿ ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 16(ಎ) (ii) ರನ್ವಯ ನಿಯೋಜನೆ ಮೇರೆಗೆ ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇಲ್ಲಿ ಖಾಲಿಯಿರುವ ಶಾಖಾಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನೇಮಿಸಿ ಆದೇಶಿಸಿದ್ದು ಇರುತ್ತದೆ.

ಶ್ರೀಮತಿ ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಹಣಕಾಸು ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ದಿನಾಂಕ 23.06.2025 ರಂದು ಮನವಿ ಸಲ್ಲಿಸಿ ಸರ್ಕಾರದ ಆದೇಶದಂತೆ ನಿಯೋಜಿತ ಹುದ್ದೆಗೆ ಹಾಜರಾಗಲು ಅನುಕೂಲವಾಗುವಂತೆ ತಮ್ಮನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಲು ವಿನಂತಿಸಿಕೊಂಡಿದ್ದರು.

ಈ ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಶ್ರೀಮತಿ ಮಂಜುಳಾ ಚಂದ್ರಕಾಂತ, ಕಚೇರಿ ಅಧೀಕ್ಷಕರು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರನ್ನು ಸರ್ಕಾರದ ಅಧಿಸೂಚನೆಯ ಪ್ರಕಾರ ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇಲ್ಲಿ ಖಾಲಿಯಿರುವ ಶಾಖಾಧಿಕಾರಿ ಹುದ್ದೆಗೆ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ



ಕುಲಸಚಿವರು ಕುಲಪತಿಗಳು

ನಿಯೋಜನೆ ಮೇಲೆ ಹಾಜರಾಗಲು ನೇಮಿಸಿ ಆದೇಶಿಸಿರುವ ಪ್ರಯುಕ್ತ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ದೃಢೀಕರಣಕ್ಕೆ ಒಳಪಟ್ಟು ಈ ಕಚೇರಿ ಆದೇಶ ಸಂ. ಕವಿವಿ/ಸಿಆಸುವಿ/ಶಿಕ್ಷಕೇತರ/04/2025/618 ದಿನಾಂಕ 05.07.2025 ರ ಮೂಲಕ ಶ್ರೀಮತಿ ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಹಣಕಾಸು ವಿಭಾಗ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

ಆದ್ದರಿಂದ ಶ್ರೀಮತಿ ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಹಣಕಾಸು ವಿಭಾಗ ಇವರನ್ನು ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇಲ್ಲಿ ಖಾಲಿಯಿರುವ ಶಾಖಾಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನಿಯೋಜಿಸಲು ಸಹಮತಿ ನೀಡಿದ ಬಗ್ಗೆ ಮತ್ತು ನಿಯೋಜಿತ ಸ್ಥಳಕ್ಕೆ ಹಾಜರಾಗಲು ಸದರಿಯವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡಿಗಡೆಗೊಳಿಸಿ ಆದೇಶಿಸಿದ ಮಾನ್ಯ ಕುಲಪತಿಗಳ ಆಡಳಿತಾತ್ಮಕ ಕ್ರಮವನ್ನು ಸಿಂಡಿಕೇಟ್ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀಮತಿ. ಮಂಜುಳಾ ಚಂದ್ರಕಾಂತ, ಅಧೀಕ್ಷಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಇಲ್ಲಿ ಖಾಲಿ ಇರುವ ಶಾಖಾಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನಿಯೋಜಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ, ಕರ್ನಾಟಕ ಸರ್ಕಾರ ಬೆಂಗಳೂರು ಇಲ್ಲಿಗೆ ಹಾಜರಾಗಲು ಬಿಡುಗಡೆಗೊಳಿಸಲು ಜರುಗಿಸಲಾದ ಕುಲಪತಿಗಳ ಆಡಳಿತಾತ್ಮಕ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.**

-

-

-

-

-

-

-

-

-

-

ಕುಲಸಚಿವರು



ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 28) ವಿಷಯ–: ಶ್ರೀ ಮಹಾದೇವ ಪಿ., ಕಿರಿಯ ಸಹಾಯಕರು ಇವರನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನಭಾರತಿ) ಇಲ್ಲಿನ ಕಿರಿಯ ಸಹಾಯಕ ಹುದ್ದೆಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಪ್ರಯುಕ್ತ ದಿನಾಂಕ : 13.05.2025 ರಂದು ಸೇವೆಯಿಂದ ಬಿಡುಗಡೆ ಮಾಡಿದ ಮಾನ್ಯ ಕುಲಪತಿಗಳ ಕ್ರಮವನ್ನು ಆಡಳಿತ ಮಂಡಳಿಯ ದೃಢೀಕರಣಕ್ಕಾಗಿ ಪ್ರಸ್ತಾವನೆ.

## ಪ್ರಸ್ತಾವನೆ

ಶ್ರೀ ಮಹಾದೇವ ಪಿ.,ಇವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ದಿನಾಂಕ : 21.10.2019 ರಂದು ಮಾಲಿ/ಕೂಲಿ ಹುದ್ದೆಗೆ ನೇಮಕಾತಿ ಹೊಂದಿದ್ದು, ಸದರಿಯವರು ದಿನಾಂಕ : 27.10.2023 ರಂದು ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಹೊಂದಿರುತ್ತಾರೆ.

ಶ್ರೀ ಮಹಾದೇವ ಪಿ., ಇವರು ದಿನಾಂಕ : 15.12.2023 ತಮ್ಮ ಮನವಿಯಲ್ಲಿ, ಅವರ ವಯಸ್ಸಾದ ತಂದೆ-ತಾಯಿ ಮತ್ತು ಅತ್ತೆ-ಮಾವ ಇವರು ಮೈಸೂರು ಜಿಲ್ಲೆಯಲ್ಲಿ ವಾಸವಾಗಿರುವದರಿಂದ ಅವರೆಲ್ಲರ ಆರೈಕೆಯನ್ನು ತಾವೇ ಮಾಡಬೇಕಾಗಿರುವದರಿಂದ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (ಜ್ಞಾನಭಾರತಿ) ಇಲ್ಲಿಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿದರು.

ಮುಂದುವರೆದು, ಶ್ರೀ ಮಹಾದೇವ ಪಿ., ಇವರ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಅಡಿಯಲ್ಲಿ ಬೆಂಗಳೂರು
ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಕೋರಿದ ವಿಷಯದ ಕುರಿತು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿತ್ತು. ಅದರಂತೆ ಸಿಂಡಿಕೇಟ್ ಸಭೆ ತನ್ನ ಠರಾವು ಸಂಖ್ಯೆ: 17 ದಿನಾಂಕ : 17.08.2024 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

> **"ಶ್ರೀ ಮಹಾದೇವ ಪಿ., ಕಿರಿಯ ಸಹಾಯಕರು, ಹಣಕಾಸು ವಿಭಾಗ ಇವರನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹುದ್ದೆರಹಿತವಾಗಿ ವರ್ಗಾವಣೆಗೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇದ 58 ರ ನಿಯಮಗಳ ಅಡಿ ಅನುಮತಿಸಿ ಸಹಮತಿಯನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು."**

ಅದರಂತೆ, ಶ್ರೀ ಮಹಾದೇವ ಪಿ., ಕಿರಿಯ ಸಹಾಯಕರು ಇವರನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನಭಾರತಿ) ಇಲ್ಲಿಗೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡಲು ಕರ್ನಾಟಕ ವಿಶ್ವವಿದ್ಯಾಲಯದ ಸಹಮತಿ ಇದೆಯೆಂದು ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಪತ್ರದ ಮೂಲಕ ತಿಳಿಸಲಾಯಿತು.

ಅದರಂತೆ, ಸರ್ಕಾರದ ಆದೇಶ ಸಂಖ್ಯೆ : ಇಡಿ 103 ಯುಕೆವಿ 2024 ಬೆಂಗಳೂರು ದಿನಾಂಕ : 24.04.2025 ರ ಅನುಸಾರ ಶ್ರೀ ಮಹಾದೇವ ಪಿ. ಇವರನ್ನು ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡಲು ಈ ಕೆಳಗಿನಂತೆ ಆದೇಶಿಸಲಾಗಿದೆ.

"ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಮಹದೇವ ಪಿ., ಕಿರಿಯ ಸಹಾಯಕರು, ಮೂಲತಃ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 58 ರನ್ವಯ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಹುದ್ದೆ ರಹಿತವಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನಭಾರತಿ), ಇಲ್ಲಿನ ಕಿರಿಯ ಸಹಾಯಕ ಹುದ್ದೆಗೆ ಈ ಕೆಳಕಂಡ ಷರತ್ತುಗೊಳಪಟ್ಟು ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡಿ ಆದೇಶಿಸಿದೆ."

**ಸೇವಾ ಷರತ್ತುಗಳು :**

ಕುಲಸಚಿವರು



ಕುಲಪತಿಗಳು

1. ಸದರಿ ನೌಕರರು ಬೆಂಗಳೂರು ವಿಶ್ವವಿದ್ಯಾಲಯದ ಕಿರಿಯ ಸಹಾಯಕ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಅತ್ಯಂತ ಕಿರಿಯ ನೌಕರರಾಗಿರುತ್ತಾರೆ.
2. ಸದರಿ ನೌಕರರು ಬೆಂಗಳೂರು ವಿಶ್ವವಿದ್ಯಾಲಯದ ಕಿರಿಯ ಸಹಾಯಕ ವೃಂದದ ವೇತನ ಶ್ರೇಣಿ ರೂ. 34,100-67,600 ರಲ್ಲಿ ಕಾರ್ಯನಿರ್ವಹಿಸುವುದು.
3. ಸದರಿ ನೌಕರರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅವಧಿಯವರೆಗಿನ ನಿವೃತ್ತಿ ಉಪಧನ ಹಾಗೂ ರಜೆ ವಂತಿಕೆಯನ್ನು ಕರ್ನಾಟಕ ವಿಶ್ವವಿದ್ಯಾಲಯವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವುದು.
4. ಸದರಿ ನೌಕರರು ಬೆಂಗಳೂರು ವಿಶ್ವವಿದ್ಯಾಲಯದ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತಾರೆ.

ಮೇಲ್ಕಾಣಿಸಿದ ಸರ್ಕಾರದ ಆದೇಶದ ಹಿನ್ನಲೆಯಲ್ಲಿ ಈ ಕಚೇರಿ ಆದೇಶ ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/9/2025/252 ದಿನಾಂಕ : 13.05.2025 ರ ಪ್ರಕಾರ ಶ್ರೀ ಮಹಾದೇವ ಪಿ., ಇವರನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಬೆಂಗಳೂರು ವಿಶ್ವವಿದ್ಯಾಲಯ, (ಜ್ಞಾನಭಾರತಿ) ಇಲ್ಲಿಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಪ್ರಯುಕ್ತ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ಕಾರ್ಯವಿಮುಕ್ತಿಗೊಳಿಸಲಾಗಿರುತ್ತದೆ.

ಕಾರಣ, ಶ್ರೀ ಮಹಾದೇವ ಪಿ., ಇವರ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಪ್ರಯುಕ್ತ ಸದರಿಯವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಿದ ಕುಲಪತಿಗಳ ಕ್ರಮವನ್ನು ದೃಢೀಕರಣಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಲಾಯಿತು.

<u>ನಿರ್ಣಯ</u>

**ಸರ್ಕಾರದ ಆದೇಶ ಸಂಖ್ಯೆ: ಇಡಿ 103 ಯುಕೆವಿ 2024 ಬೆಂಗಳೂರು ದಿನಾಂಕ: 24.04.2025ರ ಅನ್ವಯ ಶ್ರೀ. ಮಹಾದೇವ ಪಿ., ಕಿರಿಯ ಸಹಾಯಕರು ಇವರನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನಭಾರತಿ) ಇಲ್ಲಿ ಕಿರಿಯ ಸಹಾಯಕ ಹುದ್ದೆಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಪ್ರಯುಕ್ತ ದಿನಾಂಕ: 13.05.2025 ರಂದು ಸೇವೆಯಿಂದ ಬಿಡುಗಡೆಗೊಳಿಸಲು ಮಾನ್ಯ ಕುಲಪತಿಗಳ ಆಡಳಿತಾತ್ಮಕ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.**

–

–

–

–

–

–

–

–

–



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 29) **ವಿಷಯ**-: ಕವಿವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಮತ್ತು ವೇತನವನ್ನು ನಿಗದಿಪಡಿಸುವ ಕುರಿತು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ

ಪ್ರಸ್ತಾವನೆ:

ವಿಶ್ವವಿದ್ಯಾಲಯದಲ್ಲಿ ನಿವೃತ್ತಿ ಹೊಂದುತ್ತಿರುವ ಸಿಬ್ಬಂದಿ/ ಅಧಿಕಾರಿಗಳ ಸಂಖ್ಯೆ ಹೆಚ್ಚಿಗೆ ಇರುವುದರಿಂದ, ಮತ್ತು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಶೈಕ್ಷಣಿಕ ಮತ್ತು ಆಡಳಿತ ಕಾರ್ಯಗಳು ಸುಗಮವಾಗಿ ಸಾಗಲು ವ್ಯತಿರಿಕ್ತ ಪರಿಣಾಮ ಬೀರದಂತೆ ವಿಶ್ವವಿದ್ಯಾಲಯದ ಹಿತದೃಷ್ಠಿಯಿಂದ ತಾಂತ್ರಿಕ ಮತ್ತು ಇನ್ನಿತರ ತಾಂತ್ರಿಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕ ಸಂಚಿತ/ ಕರಾರಿನ ವೇತನ / ಗೌರವ ಧನದ ಆಧಾರದ ಮೇಲೆ ಸೇವೆಯನ್ನು ಪಡೆಯುವುದಕ್ಕೆ ಅವಕಾಶವನ್ನು ನೀಡಲಾಗಿದೆ. ಇವುಗಳಲ್ಲಿ ಕೆಲವೊಂದು ಮಾತ್ರ ಕವಿವಿಯಲ್ಲಿ ಖಾಯಂ ಮಂಜೂರಾದ ಹುದ್ದೆಗಳು ಇರುವುದಿಲ್ಲ. ಆದರೆ, ವಿಶ್ವವಿದ್ಯಾಲಯದಲ್ಲಿ ಬದಲಾವಣೆಯಾದ ತಾಂತ್ರಿಕ ಕೌಶಲ್ಯದ ಕಾರ್ಯಗಳಿಗೆ ಅನುಗುಣವಾಗಿ ಪ್ರತಿ ಆರು ತಿಂಗಳಿಗೊಮ್ಮೆ ಒಂದು ದಿನ ಬ್ರೇಕ್ ಮಾಡಿ ತಾತ್ಕಾಲಿಕ ಸಂಚಿತ/ ಕರಾರಿನ ವೇತನ / ಗೌರವ ಧನದ ಆಧಾರದ ಮೇಲೆ ಸೇವೆಯನ್ನು ಪಡೆದುಕೊಳ್ಳಲು ಸಂಬಂಧಿಸಿದ ವಿಭಾಗದ ಮುಖ್ಯಸ್ಥರಿಗೆ ಅನುಮತಿಯನ್ನು ನೀಡುತ್ತಾ ಬಂದಿರುತ್ತದೆ.

ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ.ಇಡಿ 213 ಯುಎನಇ 2020 ದಿನಾಂಕ.04.08.2020 ರ ಪ್ರಕಾರ ಖಾಲಿ ಇರುವ ಹುದ್ದೆಗಳ ಎದುರಾಗಿ ಹೊರಗುತ್ತಿಗೆ/ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಲು ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ, ಕವಿವಿಯಲ್ಲಿ ನಿವೃತ್ತಿ / ಮರಣ ಮತ್ತು ಇತರೆ ಕಾರಣಗಳಿಂದ ಖಾಲಿಯಾಗಿರುವ ಹುದ್ದೆಗಳ ಎದುರಾಗಿಯೇ ವಿಶ್ವವಿದ್ಯಾಲಯದಲ್ಲಿ ಬದಲಾವಣೆಯಾದ ತಾಂತ್ರಿಕ ಕೌಶಲ್ಯದ ಕಾರ್ಯಗಳಿಗೆ ಅನುಗುಣವಾಗಿ ಪ್ರತಿ ಆರು ತಿಂಗಳಿಗೊಮ್ಮೆ ಒಂದು ದಿನ ಬ್ರೇಕ್ ಮಾಡಿ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ 41 ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗಿದ್ದು ಇರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ರ ಸೆಕ್ಷನ್ 56 ರಲ್ಲಿ ತಾತ್ಕಾಲಿಕ ನೇಮಕದ ಕುರಿತು ಈ ಕೆಳಗಿನಂತೆ ವಿವರಿಸಲಾಗಿರುತ್ತದೆ.

1) 53, 54,55 ಮತ್ತು 57 ನೇ ಪ್ರಕರಣಗಳಲ್ಲಿ ಏನೇ ಇದ್ದರೂ ಕುಲಪತಿಯವರು ಅಂಥ ಹುದ್ದೆಗಳನ್ನು ತಾತ್ಕಾಲಿಕವಾಗಿಯಾಗಲೀ ಅಥವಾ ಅಂಥ ಹುದ್ದೆಗಳ ನೇಮಕಾತಿಗಳನ್ನಾಗಲೀ 53, 54, 55 ಮತ್ತು 57ನೇ ಪ್ರಕರಣಗಳ ಪ್ರಕಾರ ಮಾಡಕೂಡದೆಂದು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ ಒಂದು ವರ್ಷಕ್ಕೆ ಹೆಚ್ಚಾಗದಂತೆ ಅವಧಿಗೆ ವಿಳಂಬವಿಲ್ಲದೇ ತಾತ್ಕಾಲಿಕ ನೇಮಕಾತಿಗಳನ್ನು ಮಾಡತಕ್ಕದ್ದು.

2) (1) ನೇ ಉಪಪ್ರಕರಣದ ಅಡಿಯಲ್ಲಿ ನೇಮಕಾತಿಗಳನ್ನು ಮಂಜೂರಾದ ಹುದ್ದೆಗಳಿಗೆ ಮಾತ್ರ ಮತ್ತು ಪರಿನಿಯಮಗಳ ಮೂಲಕ ನಿಯಮಿಸಲಾದ ವಿಧಾನದಲ್ಲಿ ಮಾಡತಕ್ಕದ್ದು.

ಮುಂದುವರೆದು, ಕವಿವಿ ವೃಂದ ಮತ್ತು ನೇಮಕಾತಿ ಅನುಶಾಸನದ ನಿಯಮ 9(1) ಈ ಕೆಳಗಿನಂತೆ ಇರುತ್ತದೆ.

Not withstanding anything contained in the Statute, the appointing authority may if it considers necessary for reasons to be recorded in writing. Appoint to a post- a person who in its opinion is able to discharge the duties of such post on contract on such terms and conditions as may be determined.

ಅದರಂತೆ ಕರ್ನಾಟಕ ವಿಶ್ವವಿದ್ಯಾನಿಲಯ ಅನುಶಾಸನ ಸಂಖ್ಯೆ : S&S/SYS/86-87-364 dated : 10.11.1986 ರ ಪ್ರಕಾರ ತಾತ್ಕಾಲಿಕ ಬೋಧಕ/ ಬೋಧಕೇತರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವ ಕುರಿತು ಈ ಕೆಳಗಿನಂತೆ ವಿವರಿಸಲಾಗಿರುತ್ತದೆ.

**STATUTE :**



ಕುಲಸಚಿವರು ಕುಲಪತಿಗಳು

The temporary appointments for the post of lecturer in the PG Departments and the Constituent Colleges and for the non teaching posts specified in the Statute framed under Section 51 B (1) shall be made for a period not exceeding six months in the following manner ;

1) Applications for the temporary appointments will be invited by giving an advertisement in at least local daily paper.
2) The temporary appointments shall be made only in case where there is an urgent need to make appointments in the interests of the teaching work and the office work.

ಕ.ವಿ.ವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನ ಗೌರವ ಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನವು ಹುದ್ದೆಗಳ ಅನುಸಾರವಾಗಿ ಬೇರೆ ಬೇರೆಯಾಗಿರುತ್ತದೆ. ಸದರಿಯವರನ್ನು ವಿಶ್ವವಿದ್ಯಾಲಯದಲ್ಲಿ ಬದಲಾವಣೆಯಾದ ತಾಂತ್ರಿಕ ಕೌಶಲ್ಯದ ಕಾರ್ಯಗಳಿಗೆ ಅನುಗುಣವಾಗಿ ಪ್ರತಿ ಆರು ತಿಂಗಳಿಗೊಮ್ಮೆ ಒಂದು ದಿನ ಬ್ರೇಕ್ ಮಾಡಿ ತಾತ್ಕಾಲಿಕ ಸಂಚಿತ/ ಕರಾರಿನ ವೇತನ ಗೌರವ ಧನದ ಆಧಾರದ ಮೇಲೆ ಸೇವೆಯನ್ನು ಪಡೆದುಕೊಳ್ಳಲು ಸಂಬಂಧಿಸಿದ ವಿಭಾಗದ ಮುಖ್ಯಸ್ಥರಿಗೆ ಅನುಮತಿಯನ್ನು ನೀಡುತ್ತಾ ಬಂದಿರುತ್ತದೆ. ಆದ್ದರಿಂದ, ಕವಿವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 41 ಸಿಬ್ಬಂದಿಗಳ ವೇತನವನ್ನು ಕವಿವಿ ಆಂತರಿಕ ಸಂಪನ್ಮೂಲಗಳಿಂದ ವಾರ್ಷಿಕವಾಗಿ ಅಂದಾಜು ರೂ.1,06,67,880/- ಗಳನ್ನು ಭರಿಸಲಾಗುತ್ತಿದೆ. ಸದರಿ ಸಿಬ್ಬಂದಿಗಳಿಗೆ ವೇತನದಲ್ಲಿ ಪಿ.ಎಫ್, ಇ.ಎಸ್.ಐ ಹಾಗೂ ಇತರೆ ತೆರಿಗೆಯನ್ನು ನೀಡಲಾಗುಗುವುದಿಲ್ಲ/ ಒಳಗೊಂಡಿರುವುದಿಲ್ಲ.

ಆದ್ದರಿಂದ, ಕವಿವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಮತ್ತು ವೇತನವನ್ನು ನಿಗದಿಪಡಿಸುವ ಕುರಿತು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಕವಿವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ವೇತನವನ್ನು ನಿಗದಿಪಡಿಸುವ ಕುರಿತು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಈ ಬಗ್ಗೆ ತಾತ್ಕಾಲಿಕ ಸಂಚಿತ/ ಕರಾರಿನ (Contractual Basis) ವೇತನದ ಆಧಾರದ ಮೇಲೆ ಸುಮಾರು 43 ಹೆಚ್ಚುವರಿ ಸಿಬ್ಬಂದಿಗಳ ಅವಶ್ಯಕತೆಯನ್ನು ಪರಿಶೀಲಿಸಿ ಎಷ್ಟು ಸಿಬ್ಬಂದಿಗಳನ್ನು ಮುಂದುವರೆಸಬೇಕೆಂದು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ಘಟನೋತ್ತರ ಮಂಜೂರಾತಿ ಪಡೆದು ಮುಂದಿನ ಸಭೆಗೆ ಮಂಡಿಸಲು ಸಿಂಡಿಕೇಟ ಸಭೆಯು ನಿರ್ಣಯಿಸಿತು.**

-

-

-

-

-

-



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 30) ವಿಷಯ–: ಶ್ರೀ ಎನ್. ಸಿ. ಕುಂಬಾರ, ಸಹಾಯಕರು, ಪರೀಕ್ಷಾ ವಿಭಾಗ, ಕವಿವಿ ಧಾರವಾಡ ಇವರು ಕಚೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಿ ಉಳಿದಿರುವ ವಿಷಯ ಮತ್ತು ಇವರ ವಿರುದ್ಧ ಸ್ವೀಕೃತವಾಗಿರುವ ದೂರಿನ ಕುರಿತು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಪ್ರಸ್ತಾವನೆ.

ಪ್ರಸ್ತಾವನೆ :

ಶ್ರೀ ಎನ್. ಸಿ. ಕುಂಬಾರ, ಸಹಾಯಕರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ದಿನಾಂಕ: 01.07.2003 ರಂದು ಸಿಪಾಯಿ ಹುದ್ದೆಗೆ ಹಾಜರಾಗಿರುತ್ತಾರೆ.

ಈಗ ಕುಲಸಚಿವರು (ಮೌಲ್ಯಮಾಪನ) ಇವರು ತಮ್ಮ ಪತ್ರದ ದಿನಾಂಕ: 21.08.2024 ರ ಪ್ರಕಾರ ಶ್ರೀ ಎನ್. ಸಿ. ಕುಂಬಾರ ಇವರು ದಿನಾಂಕ: 17.05.2024 ರಿಂದ 01.08.2024 ರ ವರೆಗೆ 78 ದಿನಗಳ ಅವಧಿಗೆ ಪರಿವರ್ತಿತ ರಜೆಗೆ ಅರ್ಜಿ ಸಲ್ಲಿಸಿ ಹಾಜರಾತಿ ವರದಿಯನ್ನು ನೀಡದೇ ಪುನಃ ದಿನಾಂಕ: 03.08.2024 ರಿಂದ ಕಚೇರಿ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಾಗಿರುವುದಾಗಿ ವರದಿ ಮಾಡಿರುತ್ತಾರೆ. ಮುಂದುವರೆದು, ಶ್ರೀ ಮಂಜುನಾಥ ಕುಂಬಾರ, ಗದಗ, ಶ್ರೀ ಸೋಮಣ್ಣಾ ಕೋಳಿ, ಆಥಣಿ, ಶ್ರೀ ವಿರೇಶ ಪಡಸಲಗಿ, ಧಾರವಾಡ, ಶ್ರೀಮತಿ ವಿಜಯಲಕ್ಷ್ಮಿ ಕುಂಬಾರ, ಗದಗ ಇವರುಗಳು ಜಂಟಿಯಾಗಿ ಸಲ್ಲಿಸಿರುವ ದಿನಾಂಕ: 18.07.2024 ರ ಪತ್ರದಲ್ಲಿ ಶ್ರೀ ಎನ್. ಸಿ. ಕುಂಬಾರ ಇವರು ಅರ್ಜಿದಾರರಿಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ನೇಮಕಾತಿ ಪತ್ರ ಕೊಡಿಸುವದಾಗಿ ಒಟ್ಟು 36,40,000/– ರೂಪಾಯಿಗಳನ್ನು ಪಡೆದುಕೊಂಡಿರುವ ಬಗ್ಗೆ ದೂರು ನೀಡಿರುತ್ತಾರೆ. ಮತ್ತು ವಿಶ್ವವಿದ್ಯಾಲಯದ ಕುಲಸಚಿವರು, ಅಧ್ಯಕ್ಷರು, ಉಪಾಧ್ಯಕ್ಷರು, ಉಪಕುಲಸಚಿವರ ಹಾಗೂ ಸಹಾಯಕ ಕುಲಸಚಿವರು ಸಹಿಯನ್ನು ವಿಶ್ವವಿದ್ಯಾಲಯದ ಲೇಟರ್ ಹೆಡ್ ಮೇಲೆ ಸಹಿ ಮಾಡಿಸಿ ಅವರಿಗೆ ಕೊಟ್ಟಿರುವುದಾಗಿ ತಮ್ಮ ಪತ್ರದ ಮೂಲಕ ದೂರು ನೀಡಿರುತ್ತಾರೆ. ಹಾಗೂ ಸದರಿ ದೂರಿಗೆ ಲಗತ್ತಿಸಲಾದ ದಾಖಲೆಗಳ ಪ್ರಕಾರ ಶ್ರೀ ಎನ್. ಸಿ. ಕುಂಬಾರ ಇವರ ತಪ್ಪೊಪ್ಪಿಗೆ ನೀಡಿರುವದರ ಬಗ್ಗೆ ತಿಳಿಸಿರುತ್ತಾರೆ. ಈ ವಿಷಯವಾಗಿ ಶ್ರೀ ಎನ್. ಸಿ. ಕುಂಬಾರ, ಇವರಿಗೆ ದಿನಾಂಕ: 29.07.2024 ರಂದು ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು. ಅದಕ್ಕೆ ಪ್ರತಿಯಾಗಿ ಶ್ರೀ ಎನ್. ಸಿ. ಕುಂಬಾರ, ಇವರು ದಿನಾಂಕ: 02.08.2024 ರಂದು ನೀಡಿದ ವಿವರಣೆಯಲ್ಲಿ ಅವರ ಕಚೇರಿ ಕೆಲಸಕ್ಕೆ ಗೈರುಹಾಜರಿ ಉಳಿದಿರುವುದಕ್ಕೆ ಮಾತ್ರ ಕ್ಷಮೆ ಕೋರಿ ಸೇವೆಗೆ ಹಾಜರಾಗಲು ಅನುಮತಿ ಕೋರಿದ್ದು, ಇದೆ. ಆದರೆ, ಅವರ ಮೇಲೆ ನೇಮಕಾತಿ ಕೊಡಿಸುವದಾಗಿ ಹಣ ಪಡೆದಿರುವ ಆರೋಪವನ್ನು ಅವರು ಒಪ್ಪಿಕೊಂಡಿರುವದಿಲ್ಲ.

ಆದ್ದರಿಂದ, ಶ್ರೀ ಎನ್. ಸಿ. ಕುಂಬಾರ, ಸಹಾಯಕರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರ ಅನಧಿಕೃತ ಗೈರು ಹಾಜರಿ ಮತ್ತು ಇವರ ವಿರುದ್ಧ ದೂರು ಬಂದಿರುವ ಕಾರಣ ಮುಂದಿನ ಕ್ರಮ ಜರುಗಿಸುವ ವಿಷಯದ ಕುರಿತು ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

**ಶ್ರೀ. ಎನ್.ಸಿ. ಕುಂಬಾರ, ಸಹಾಯಕರು, ಪರೀಕ್ಷಾ ವಿಭಾಗ, ಕವಿವಿ ಧಾರವಾಡ ಇವರು ಕಚೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಿ ಹಾಗೂ ಇತರೆ ಆರೋಪಗಳಿಗೆ ಸಂಬಂಧಪಟ್ಟಂತೆ ರಚಿಸಲಾಗಿದ್ದ ಇಲಾಖಾ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ಕವಿವಿ ಸಿಸಿಎ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲು ಸಿಂಡಿಕೇಟ ಸಭೆಯು ತೀರ್ಮಾನಿಸಿತು.**



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 31) ವಿಷಯ-: ದಿನಾಂಕ 16-07-2025 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಅನೂಕೂಲವಾಗುವ ದೃಷ್ಟಿಯಿಂದ "ತ್ವರಿತ ಮರು ಮೌಲ್ಯಮಾಪನ" ಯೋಜನೆಯನ್ನು ಪರೀಕ್ಷಾ ವಿಭಾಗದಲ್ಲಿ ಅಳವಡಿಸುವ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣೆ:**

ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜರುಗಿಸುವ ಕುರಿತು ಅಧಿಕಾರಿಗಳ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 16-07-2025 ರಂದು ಜರುಗಿದ ಸಿಂಡಿಕೇಟ್ ಸಭಾ ಭವನದಲ್ಲಿ ಸುಧೀರ್ಘವಾಗಿ ಚರ್ಚಿಸಿ ಅ. ಸಂ. 10 ರಲ್ಲಿ ಸೂಚಿಸಿದಂತೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ತ್ವರಿತ ಮರು ಮೌಲ್ಯಮಾಪನ ಯೋಜನೆಯನ್ನು ಪರೀಕ್ಷಾ ವಿಭಾಗದಲ್ಲಿ ಅಳವಡಿಸಲು ಸಿಂಡಿಕೇಟ .ಕಲಂ ಮಂಡಿಸಿ ಕ್ರಮ ಕೈಕೊಳ್ಳಲು ನಿರ್ಣಯಿಸಲಾಯಿತು.

ಸದರ ವಿಷಯಕ್ಕೆ ಸಂಬಂಧಿಸಿದಂತೆ, ಇಲ್ಲಿ ನಿವೇದಿಸುವುದೇನೆಂದರೆ ಪ್ರಸ್ತುತವಾಗಿ ಸ್ನಾತಕ/ಸ್ನಾತಕೋತ್ತರ ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ದಿನಾಂಕವನ್ನು ನಮೂದಿಸಿ ನಂತರ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಯ ಛಾಯಾ ಪ್ರತಿ/ಅಂಕಗಳ ಮರು ಎಣಿಕೆ ಹಾಗೂ ಮರು ಮೌಲ್ಯಮಾಪನಕ್ಕೆ (ಎರಡು ವಿಷಯಗಳಿಗೆ ಮಾತ್ರ) ಅರ್ಜಿ ಸಲ್ಲಿಸಲು ಸುತ್ತೋಲೆ ಹೊರಡಿಸಲಾಗುತ್ತದೆ ಸದರ ಶುಲ್ಕದ ವಿವರಗಳು ಈ ಕೆಳಗಿನಂತಿದೆ

| | | |
|---|---|---|
| i. ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಪ್ರತಿ ಉತ್ತರ ಪತ್ರಿಕೆಗೆ | ರೂ. | 650=00 |
| ii. ಅಂಕಗಳ ಮರು ಎಣಿಕೆಗಾಗಿ ಪ್ರತಿ ಉತ್ತರ ಪತ್ರಿಕೆಗೆ | ರೂ. | 230=00 |
| iii. ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಪ್ರತಿ ಉತ್ತರ ಪತ್ರಿಕೆಗೆ | ರೂ. | 113=00 |
| iv. ಕಾನೂನು ವಿದ್ಯಾರ್ಥಿಗಳಿಗೆ ಮರು ಮೌಲ್ಯಮಾಪನಕ್ಕೆ ಪ್ರತಿ ಉತ್ತರ ಪತ್ರಿಕೆಗೆ | ರೂ. | 755=00 |

ಪ್ರಸ್ತುತ ಮರು ಮೌಲ್ಯಮಾಪನ ಕಾರ್ಯವನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಯ Ordinance Governing "Revaluation/Challenge Valuation of Answer Books of the University Examinations" ಪ್ರಕಾರ ಕ್ರಮ ಕೈಕೊಳ್ಳಲಾಗುತ್ತಿರುವುದನ್ನು ತಮ್ಮ ಅವಗಾಹನೆಗಾಗಿ ತರಲಾಗಿದೆ. (ಪ್ರತಿಯನ್ನು ಲಗತ್ತಿಸಿದೆ)

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಅವಲೋಕಿಸಿ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 16-07-2025 ರಂದು ಜರುಗಿದ ಸಭೆಯ ನಿರ್ಣಯದಂತೆ ಪರೀಕ್ಷಾ ವಿಭಾಗದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ "ತ್ವರಿತ ಮೌಲ್ಯಮಾಪನ" ಯೋಜನೆಯನ್ನು ಅಳವಡಿಸಿಕೊಳ್ಳುವ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 16-07-2025 ರಂದು ಜರುಗಿದ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಅನೂಕೂಲವಾಗುವ ದೃಷ್ಟಿಯಿಂದ "ತ್ವರಿತ ಮರು ಮೌಲ್ಯಮಾಪನ" (Fast Revaluation) ಯೋಜನೆಯನ್ನು ಪರೀಕ್ಷಾ ವಿಭಾಗದಲ್ಲಿ ಅಳವಡಿಸುವ ವಿಷಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. ಮುಂದುವರಿದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷಾ ವಿಭಾಗದಲ್ಲಿ ನೀಡುತ್ತಿರುವ ಪದವಿ ಪ್ರಮಾಣ ಪತ್ರಗಳನ್ನು Tatkal Scheme ಅಡಿಯಲ್ಲಿ ನೀಡಲು ಹಾಗೂ ಪ್ರಾವಿಜನಲ್ ಪ್ರಮಾಣ ಪತ್ರಗಳನ್ನು (Provisional Degree Certificates) ನೀಡುವ ಕುರಿತು ಶುಲ್ಕ ಸಮಿತಿಗೆ ಮಂಡಿಸಲು ತಿರ್ಮಾನಿಸಲಾಯಿತು.**



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 32) ವಿಷಯ–: Item for permission to attend International Conference to be held in UIN Sunan Kalijaga, Yogyakarta, Indonesia to present the research paper and for financial assistance.

**Preamble:**

Dr. Gururaj S. Hadagali, Professor, Dept. of Library and Information Science, K. U. Dharwad requested to provide financial assistance to present the research paper entitled **"The Fate of Web References: A Study on URL Stability in Web Citation Research Papers"** for the International Conference i.e. UIN Sunan Kalijaga, Yogyakarta, Indonesia from August 20 to August 22, 2025. Further, he has requested the University to provide financial assistance of Rs. 1.57 lakhs (approximate) to bear TA/DA, Registration fees, Visa charges, Land arrangements to attend the said programme.

His research paper is evaluated by two experts viz Dr. P. G. Tadasad, Professor, Dept. of Library & Information Science, Akkamahadevi State Women's University, Vijayapura and Dr. Satish Kanamadi, Librarian, Sir Dorabji Tata Memorial Library, Tata Institute of Social Sciences, Deonar. The experts have given favourable reports.

Further, as per the opinion of Registrar due to lack of funds and financial burden to the University it is better not to consider the above request for financial assistance.

The item is placed before Syndicate for the visit of 9th I-LISS International Conference to be held in UIN Sunan Kalijaga, Yogyakarta, Indonesia and financial assistance to the faculty is subject to the release of funds approved by the University.

<u>ನಿರ್ಣಯ</u>

**ಡಾ. ಗುರುರಾಜ ಹಡಗಲಿ, ಪ್ರಾಧ್ಯಾಪಕರು, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ, ಕವಿವಿ ಧಾರವಾಡ ಇವರು ಸಂಶೋಧನೆ ಪ್ರಬಂಧವನ್ನು ಮಂಡಿಸಲು ದಿನಾಂಕ 20.8.2025ರಿಂದ 22.8.2025ರವರೆಗೆ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು UIN Sunan Kalijaga, Yogyakarta, Indonesia ಪ್ರವಾಸ ಭತ್ಯೆ/ದಿನ ಭತ್ಯೆ ನೋಂದಣಿ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಪಾವತಿಸಲು ವಿನಂತಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು 2025-26ನೇ ಸಾಲಿನ ಲೆಕ್ಕ ಶಿರ್ಷಿಕೆ ಸಂಖ್ಯೆ: 1436 ರಿಂದ ರೂ.75,000/-ಗಳನ್ನು ಮಾತ್ರ ಮಂಜೂರು ಮಾಡಲು ಅನುಮೋದಿಸಿತು.**

**ಮುಂದುವರೆದು, ಇಂತಹ ಪ್ರಕರಣಗಳಲ್ಲಿ ಇನ್ನು ಮುಂದೆ ಹಾಜರಾಗುವ ಶಿಕ್ಷಕರುಗಳಿಗೆ ಅಂತರಾಷ್ಟ್ರೀಯ ಸಮ್ಮೇಳನಕ್ಕೆ ರೂ.60,000/- ಹಾಗೂ ರಾಷ್ಟ್ರೀಯ ಸಮೇಳನಕ್ಕೆ ರೂ.10,000/- ಗಳನ್ನು ನಿಗದಿ ಪಡಿಸಲು ಸಿಂಡಿಕೇಟ ನಿರ್ಣಯಿಸಿತು.**



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 33) ವಿಷಯ–: ಅಲ್-ಮಿಜಾನ್ ಎಜುಕೇಶನಲ್ ಅಸೋಸಿಯೇಟ್ಸ್, ಶಿಕ್ಷಣ ಮಹಾವಿದ್ಯಾಲಯ, ಹೈಲ್ಯಾಂಡ್, ಆನಂದನಗರ, ಹಳೆ-ಹುಬ್ಬಳ್ಳಿ, ಇದರ ಮಾನ್ಯತೆಯನ್ನು NCTE, New Delhi ಯಿಂದ ಹಿಂಪಡೆದುಕೊಂಡಿರುವ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿರುವ ಅಲ್-ಮಿಜಾನ್ ಎಜುಕೇಶನಲ್ ಅಸೋಸಿಯೇಟ್ಸ್, ಶಿಕ್ಷಣ ಮಹಾವಿದ್ಯಾಲಯ, ಹೈಲ್ಯಾಂಡ್, ಆನಂದನಗರ, ಹಳೆ-ಹುಬ್ಬಳ್ಳಿ, ಇದರ ಮಾನ್ಯತೆಯನ್ನು 2022-23ನೇ ಶೈಕ್ಷಣಿಕ ಸಾಲಿನಿಂದ ಹಿಂಪಡೆದುಕೊಂಡಿರುವ ಬಗ್ಗೆ NCTE, New Delhi ಕಚೇರಿ ಪತ್ರ ಸಂಖ್ಯೆ FSRO/NCTE/APS03724/B.Ed.(KA)/2021/129746 dt: 30-12-2021 ರಲ್ಲಿ ತಿಳಿಸಿದ್ದರೂ ಸಹ ಸದರ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಈವರೆಗೆ NCTE, New Delhi ಯಿಂದ ಮಾನ್ಯತೆ ಮುಂದುವರಿಕೆಯ ಆದೇಶವನ್ನು ಹಾಜರಪಡಿಸಿರುವುದಿಲ್ಲ. ಸದರ ಮಹಾವಿದ್ಯಾಲಯದವರು NCTE, New Delhi ಕಚೇರಿಗೆ ಅಪೀಲ್ ಮಾಡಿಕೊಳ್ಳಲಾಗಿದೆ ಎಂದು ತಿಳಿಸುತ್ತಾ ಇನ್ನೂ NCTE, New Delhi ಯಿಂದ ಮಾನ್ಯತೆ ಮುಂದುವರಿಕೆಯ ದಾಖಲಾತಿ ಹಾಜರಪಡಿಸಲು 60 ದಿನಗಳ ಕಾಲಾವಕಾಶ ಬೇಕೆಂದು ದಿನಾಂಕ: 10-06-2025 ರಂದು ಮನವಿ ಮಾಡಿಕೊಂಡಿರುವುದನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲಾಗಿತ್ತು.

ಆದರೆ, ಮಾನ್ಯ ಕುಲಪತಿಗಳು ಹೆಚ್ಚಿನ ಕಾಲಾವಕಾಶ ನೀಡಲು ನಿರಾಕರಿಸಿರುವ ವಿಷಯವನ್ನು ಹಾಗೂ 2025-26ನೇ ಶೈಕ್ಷಣಿಕ ಸಾಲಿನಿಂದ ಬಿ.ಎಡ್. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದೆಂದು ತಿಳಿಸಲಾಗಿದೆ.

ಆದ್ದರಿಂದ, ಸದರ ಮಹಾವಿದ್ಯಾಲಯದ ಮೇಲೆ ಯಾವ ಕ್ರಮ ಜರುಗಿಸಬೇಕೆಂಬುದರ ಬಗ್ಗೆ ಪರಿಶೀಲಿಸಲು ಆಡಳಿತ ಮಂಡಳಿಯ ಸಭೆಯ ಮುಂದೆ ಕಡತವನ್ನು ಮಂಡಿಸಲಾಯಿತು.

**ನಿರ್ಣಯ**

**ಅಲ್-ಮಿಜಾನ್ ಎಜುಕೇಶನಲ್ ಅಸೋಸಿಯೇಟ್ಸ್, ಶಿಕ್ಷಣ ಮಹಾವಿದ್ಯಾಲಯ, ಹೈಲ್ಯಾಂಡ್, ಆನಂದನಗರ, ಹಳೆ-ಹುಬ್ಬಳ್ಳಿ ಇದರ ಮಾನ್ಯತೆಯನ್ನು NCTE, New Delhi ಯಿಂದ ಹಿಂಪಡೆದುಕೊಂಡಿರುವ ವಿಷಯವನ್ನು ಪರಿಶೀಲಿಸಿದ ಸಭೆಯು ಸನ್ 2021-22ನೇ ಸಾಲಿನ ನಂತರ ಸಿಡಿಸಿ ವಿಭಾಗದಲ್ಲಿ ಸಂಯೋಜನೆ ಮಾಡಿರುವುದರ ಕುರಿತು ಪರಿಶೀಲಿಸುವುದು ಮತ್ತು ಯು.ಯು.ಸಿ.ಎಮ್.ಎಸ್. ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ನೀಡಿರುವದರ ಕುರಿತು ಪರಿಶೀಲಿಸಿ NCTE, ಮಾನ್ಯತೆ ಪಡೆಯಲು ಅಂತೀಮವಾಗಿ 15 ದಿನಗಳವರೆಗೆ ಕಾಲಾವಕಾಶ ನೀಡಬಹುದು ಎಂದು ನಿರ್ಣಯಿಸಲಾಯಿತು. ಆದರೆ, NCTE ಮಾನ್ಯತೆ ಇಲ್ಲದಿದ್ದಲ್ಲಿ ಯಾವ ಕಾಲೇಜಿಗೆ ಸಂಯೋಜನೆ ನೀಡಲಾಗುವುದಿಲ್ಲ ಎಂದು ನಿರ್ಣಯಿಸಲಾಯಿತು.**



ಕುಲಸಚಿವರು

ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 34) ವಿಷಯ–: ಕರ್ನಾಟಕ ವಿಶ್ವವಿದ್ಯಾಲಯ / ಕರ್ನಾಟಕ ಮಹಾವಿದ್ಯಾಲಯಗಳ ಅತಿಥಿ/ ಸಹಾಯಕ ಉಪನ್ಯಾಸಕರ ಸಂಘದ ಬೇಡಿಕೆಗಳ ಪರಿಹಾರಾತ್ಮಕ ಕ್ರಮದ ಕುರಿತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಿಂಡಿಕೇಟ ಉಪಸಮಿತಿ ನೀಡಿದ ವರದಿಯನ್ನು ಕ.ವಿ.ವಿ ಸಿಂಡಿಕೇಟ ಸಭೆಯಲ್ಲಿ ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯ / ಕರ್ನಾಟಕ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯಗಳು, ಧಾರವಾಡ ಅತಿಥಿ/ ಸಹಾಯಕ ಉಪನ್ಯಾಸಕರ ಸಂಘದ ಬೇಡಿಕೆಗಳ ಕುರಿತಾದ ಮನವಿ ದಿನಾಂಕ: 22.03.2025ರಂದು ಸಲ್ಲಿಸಲಾಗಿ, ಸಂಘವು ದಿನಾಂಕ 24.03.2025ರಂದು ಮುಷ್ಕರ ಹಮ್ಮಿಕೊಂಡ ಹಿನ್ನೆಲೆಯಲ್ಲಿ ದಿನಾಂಕ: 12 ಹಾಗೂ 13 ಮೇ 2025ರಂದು ಜರುಗಿದ ಸದರಿ ಬೇಡಿಕೆಗಳ ವಿಷಯವಾಗಿ ಹಾಗೂ ಸಂಭಾವನೆ ಹೆಚ್ಚಳ ಸಂಬಂಧ ಸಿಂಡಿಕೇಟ ಸಭೆಯು ಈ ಕೆಳಗಿನಂತೆ ನಿರ್ಣಯಿಸಿದೆ.

**ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳ ಅತಿಥಿ / ಸಹಾಯಕ ಉಪನ್ಯಾಸಕರ ಸಂಘ, ಧಾರವಾಡ ಇವರ ಸಂಭಾವನೆ ಹೆಚ್ಚಳ ಹಾಗೂ ಇತರೇ ಬೇಡಿಗಳ ಕುರಿತಂತೆ ದಿನಾಂಕ 07.04.2025ರಂದು ಜರುಗಿದ ಸಮೀತಿ ಸಭೆಯ ನಡಾವಳಿ ಪರಿಶೀಲಿಸಿದ ಸಿಂಡಿಕೇಟ ಸಭೆಯು ಸಹಾಯಕ ಉಪನ್ಯಾಸಕರಿಗೆ ಮಾತ್ರ ರೂ.2000/– ಗಳನ್ನು ಹೆಚ್ಚಿಸಲು ಹಾಗೂ ಸೇವಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಹಂತಗಳನ್ನು (Slab) ನಿಗದಿಪಡಿಸಲು ರಚಿಸಿರುವ ಸಮೀತಿಯು ಆದಷ್ಟು ಶಿರ್ಘ ವರದಿಯನ್ನು ನೀಡಲು ಸೂಚಿಸಲಾಯಿತು.**

ಸಿಂಡಿಕೇಟ ಉಪಸಮಿತಿ ಈ ಕೆಳಗಿನಂತಿರುತ್ತದೆ.

| ಅ.ಸಂ | ಅಧ್ಯಕ್ಷರು/ಸದಸ್ಯರುಗಳ ಹೆಸರು | ಪದನಾಮ |
|---|---|---|
| 1 | ಶ್ರೀಮತಿ. ರತ್ನಾ ಪಾಟೀಲ, ಸಿಂಡಿಕೇಟ್ ಸದಸ್ಯರು, ಕ.ವಿ.ವಿ., ಧಾರವಾಡ. | ಅಧ್ಯಕ್ಷರು |
| 2 | ಶ್ರೀ.ರಾಬರ್ಟ ದದ್ದಾಪುರಿ, ಸಿಂಡಿಕೇಟ್ ಸದಸ್ಯರು, ಕ.ವಿ.ವಿ., ಧಾರವಾಡ. | ಸದಸ್ಯರು |
| 3 | ಶ್ರೀ ಶ್ಯಾಮ ಮಲ್ಲನಗೌಡರ, ಸಿಂಡಿಕೇಟ್ ಸದಸ್ಯರು, ಕ.ವಿ.ವಿ., ಧಾರವಾಡ. | ಸದಸ್ಯರು |
| 4 | ಡಾ. ಎ.ಎ. ಮೂಲಿಮನಿ, ಸಿಂಡಿಕೇಟ್ ಸದಸ್ಯರು/ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ ಹಾಗೂ ಹಿರಿಯ ಪ್ರಾಧ್ಯಾಪಕರು ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ., ಧಾರವಾಡ. | ಸದಸ್ಯರು |
| 5 | ಶ್ರೀಮತಿ. ಎಸ್.ವಿ ಭಟ್, ವಿದ್ಯಾವಿಷಯಕ ಪರಿಷತ್, ಸದಸ್ಯರು, ಕ.ವಿ.ವಿ., ಧಾರವಾಡ. | ಸದಸ್ಯರು |
| 6 | ವಿತ್ತಾಧಿಕಾರಿಗಳು, ಹಣಕಾಸು ವಿಭಾಗ , ಕ.ವಿ.ವಿ., ಧಾರವಾಡ. | ಸದಸ್ಯರು |
| 7 | ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ., ಧಾರವಾಡ. | ಸಂಯೋಜಕರು |

ಮುಂದುವರೆದು, ಮೇಲಿನ ಸಿಂಡಿಕೇಟ ಸಭೆಯ ನಿರ್ಣಯದ ಮೇರೆಗೆ ದಿನಾಂಕ: 30.05.2025ರಂದು ಸಿಂಡಿಕೇಟ ಉಪ ಸಮೀತಿ ನೇಮಕಾತಿ ಆದೇಶ ಜಾರಿ ಮಾಡಲಾಯಿತು, ಅದರಂತೆ ದಿನಾಂಕ: 04.06.2025 ಹಾಗೂ 28.06.2025 ರಂದು ಸಿಂಡಿಕೇಟ ಉಪ ಸಮೀತಿ ಜರುಗಿಸಲಾಗಿದ್ದು, ಸಂಘದ ಬೇಡಿಕೆಗಳನ್ನು ಪೂರಕ ದಾಖಲೆ ಹಾಗೂ



ಕುಲಸಚಿವರು ಕುಲಪತಿಗಳು

ಮಾಹಿತಿಯೊಂದಿಗೆ ಸುಧೀರ್ಘವಾಗಿ ಚರ್ಚಿಸಲಾಗಿ ಸಮೀತಿಯು ದಿನಾಂಕ: 25.07.2025 ರಂದು ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯ ಲಕೋಟೆಯನ್ನು ಲಗತ್ತಿಸಿದೆ.

ಸದರಿ ವರದಿಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯ / ಕರ್ನಾಟಕ ಮಹಾವಿದ್ಯಾಲಯಗಳ ಅತಿಥಿ/ ಸಹಾಯಕ ಉಪನ್ಯಾಸಕರ ಸಂಘದ ಬೇಡಿಕೆಗಳ ಪರಿಹಾರಾತ್ಮಕ ಕ್ರಮದ ಕುರಿತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಿಂಡಿಕೇಟ ಉಪಸಮಿತಿ ನೀಡಿದ ಮುಚ್ಚಿದ ಲಕೋಟೆಯಲ್ಲಿರುವ ವರದಿಯನ್ನು ಸಭೆಯಲ್ಲಿ ತೆರೆದು ಓದಲಾಯಿತು. ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಕ್ರಮವಹಿಸಲು ಸಿಂಡಿಕೇಟ ನಿರ್ಣಯಿಸಿತು.**

1) **ವಿಶ್ವವಿದ್ಯಾಲಯದ ಅತಿಥಿ/ ಸಹಾಯಕ ಉಪನ್ಯಾಸಕರು ಎಂಬ ನಾಮಕರಣವನ್ನು ಪೂರ್ಣಕಾಲಿಕ ಉಪನ್ಯಾಸಕರು ಮತ್ತು ಅರೇ ಕಾಲಿಕ ಉಪನ್ಯಾಸಕರು ಎಂದು ಬದಲಾವಣೆ ಮಾಡುವುದು.**
2) **ಅ) PG ಉಪನ್ಯಾಸಕರಿಗೆ ರೂ.30,000/-**
   **ಬ) PG/NET or PG/Ph.D/ ಉಪನ್ಯಾಸಕರಿಗೆ ರೂ.32,000/-**
   **ಕ) PG/NET/Ph.D ಉಪನ್ಯಾಸಕರಿಗೆ ರೂ.35,000/-**
3) **2025-26ನೇ ಸಾಲಿಗೆ ಜಾರಿಗೆ ಬರುವಂತೆ ಸ್ನಾತಕ/ ಸ್ನಾತಕೋತ್ತರ ಪೂರ್ಣಕಾಲಿಕ ಮತ್ತು ಅರೇ ಕಾಲಿಕ ಅತಿಥಿ ಉಪನ್ಯಾಸಕರಿಗೆ 10 ತಿಂಗಳ ಅವಧಿಗೆ ನಿಗದಿಪಡಿಸುವುದು.**
4) **ಸದರಿ ಉಪನ್ಯಾಸಕರ ಸೇವೆ ಪಡೆಯಲು ಅರ್ಜಿ ಆಹ್ವಾನಿಸಿ, ಸಂರ್ಧಶನದ ಮೂಲಕ ಮೆರಿಟ್ಸ್/ ರೋಸ್ಟರ ಅನುಗುಣವಾಗಿ ಮಾಡತಕ್ಕದ್ದು.**
5) **ಸಂದರ್ಶನದ ನಂತರ ಆಯ್ಕೆಯಾಗುವ ಉಪನ್ಯಾಸಕರನ್ನು ಕ್ಯಾಲೆಂಡರ ಆಫ್ ಇವೆಂಟ್ಸ ತಕ್ಕಂತೆ ಪೂರ್ವದಲ್ಲಿ ಮತ್ತು 10 ತಿಂಗಳ ನಂತರ ಅವಧಿಯಲ್ಲಿ ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸುವ ಗೌರವಧನಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.**
6) **ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳು/ ಸ್ನಾತಕೋತ್ತರ ವಿಭಾಗಗಳಿಗೆ ವಾರ್ಷಿಕ ವೇಳಾಪಟ್ಟಿಯಂತೆ (ಕ್ಯಾಲೆಂಡರ್ ಆಫ್ ಇವೆಂಟ್ಸ್) ಪ್ರಾರಂಭವಾಗುವ ದಿನಾಂಕದ ಪೂರ್ವದಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸದರಿಯವರಿಗೆ ಆದೇಶದ ಪ್ರತಿಗಳನ್ನು ನೀಡುವ ಕುರಿತು ಕ್ರಮಗಕ್ಕೈಗೊಳ್ಳುವುದು.**
7) **ಕರ್ನಾಟಕ ಕಲಾ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಪಿ 137 ಎಸ್‌ಇಎಸ್ 2025 ದಿನಾಂಕ: 15.05.2025ರ ಸೂತ್ತೋಲೆಯ ಪ್ರಕಾರ ರೂ.14,000/- ಗಳನ್ನು ನೀಡಲು ಕ್ರಮ ಕೈಗೊಳ್ಳಲಾಯಿತು.**

–

–

–

–

–



ಕುಲಸಚಿವರು

ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 35) ವಿಷಯ-: 2025-26ನೇ ಸಾಲಿನ ಸ್ನಾತಕ ಮತ್ತು ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಆಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ (ಸೆಮೆಸ್ಟರ್/ನಾನ್ ಸೆಮೆಸ್ಟರ್) ಮತ್ತು ಅಧೀನ ಮಹಾವಿದ್ಯಾಲಯಗಳ ಕೋರ್ಸುಗಳ ಪ್ರವೇಶ ಶುಲ್ಕಗಳ ಅಲ್ಪಪ್ರಮಾಣದಲ್ಲಿ ಹೆಚ್ಚಿಸಿದ ಕುರಿತು.

**ಟಿಪ್ಪಣಿ:**

2025-26ನೇ ಸಾಲಿನ ಸ್ನಾತಕ ಮತ್ತು ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಆಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ (ಸೆಮೆಸ್ಟರ್/ನಾನ್ ಸೆಮೆಸ್ಟರ್) ಮತ್ತು ಅಧೀನ ಮಹಾವಿದ್ಯಾಲಯಗಳ ಕೋರ್ಸುಗಳ ಪ್ರವೇಶ ಶುಲ್ಕಗಳ ಕುರಿತು ಮಾನ್ಯ ಕುಲಪತಿಗಳು ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ಶಿಫಾರಸ್ಸಿನಂತೆ ಎಲ್ಲ ನಿಖಾಯಗಳ ಡೀನರುಗಳ ಸಭೆಯನ್ನು ದಿನಾಂಕ:17.07.2025ರಂದು ಸಾಯಂಕಾಲ 4.00ಗಂಟೆಗೆ ಸಿಂಡಿಕೇಟ್ ಹಾಲ್‌ನಲ್ಲಿ ಸಭೆ ಜರುಗಿಸಿದ್ದು. ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

**ಡೀನರ ಸಭೆಯ ನಿರ್ಣಯಗಳು:**

1. ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವೇಶ ಶುಲ್ಕದಲ್ಲಿ ಅಲ್ಪಪ್ರಮಾಣದಲ್ಲಿ ಹೆಚ್ಚುವರಿಗೊಳಿಸಲು ನಿರ್ಣಯಿಸಲಾಯಿತು. ಸದರ ನಿರ್ಣಯದಂತೆ ಅಗತ್ಯಕ್ರಮದೊಂದಿಗೆ ಸುತ್ತೋಲೆ ಹೊರಡಿಸುವುದು.
2. ಎಂ.ಎಡ್. ಕೋರ್ಸಿನ ಹೆಚ್ಚುವರಿ ಶುಲ್ಕವನ್ನು ಶೇ 50% ಸದ್ಯದ ಮಟ್ಟಿಗೆ ಕಡಿತಗೊಳಿಸುವುದು ಸದರಿ ಕೋರ್ಸಿಗೆ ಗಣನೀಯವಾಗಿ ಪ್ರವೇಶ ಬೇಡಿಕೆ ಬಂದ ಸಂದರ್ಭದಲ್ಲಿ ನಿಗದಿತ ಶುಲ್ಕ ಆಕರಣೆಯನ್ನು ಮುಂದುವರಿಸಲು ನಿರ್ಣಯಿಸಲಾಯಿತು.
3. ಕೆಲ ವಿಭಾಗದಲ್ಲಿ ನಿಗದಿಪಡಿಸಿದ ಒಳಮಿತಿಗಿಂತ ಕಡಿಮೆ ಪ್ರವೇಶಾತಿ ಆಗುವ ವಿಭಾಗದ ಅಧ್ಯಕ್ಷರುಗಳ ವಿನಂತಿಯ ಪತ್ರದಂತೆ ಮೇಲಾಧಿಕಾರಿಗಳಿಗೆ ನಿವೇದನೆ ಮಂಡಿಸಿ ಆದೇಶದಂತೆ ಕ್ರಮವಹಿಸಲು ನಿರ್ಣಯಿಸಲಾಯಿತು.
4. 2.5 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಶುಲ್ಕ ವಿನಾಯಿತಿ ನೀಡುವಾಗ ಆದಷ್ಟು ಪೂರ್ಣ ಪ್ರಮಾಣದ ಶುಲ್ಕವನ್ನು ಭರಿಸಲು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವುದು ಒಂದು ವೇಳೆ ಶುಲ್ಕ ವಿನಾಯಿತಿ ನೀಡಿದ ಸಂದರ್ಭದಲ್ಲಿ ಬಾಕಿ ಶುಲ್ಕಗಳನ್ನು ಮೊದಲನೇ ವರ್ಷದ ವಿದ್ಯಾರ್ಥಿಗೆ 2ನೇ ಸೆಮೆಸ್ಟರ್ ಮುಗಿಯುವುದರೊಳಗಾಗಿ ಹಾಗೂ 2ನೇ ವರ್ಷದ ವಿದ್ಯಾರ್ಥಿಗಳಿಗೆ 4ನೇ ಸೆಮೆಸ್ಟರ್ ಮುಗಿಯುವುದರೊಳಗಾಗಿ ಪ್ರವೇಶ ಬಾಕಿ ಶುಲ್ಕವನ್ನು ಕಡ್ಡಾಯವಾಗಿ ಭರಿಸಿಕೊಂಡ ನಂತರ ಪರೀಕ್ಷೆಯ ಪ್ರವೇಶ ಪತ್ರ ನೀಡಲು ನಿರ್ಣಯಿಸಲಾಯಿತು.

ಈ ಮೇಲ್ಕಾಣಿಸಿದ ನಿರ್ಣಯಗಳಂತೆ ಸನ್ 2025-26ನೇ ಶೈಕ್ಷಣಿಕ ಸಾಲಿಗೆ ಸ್ನಾತಕ/ಸ್ನಾತಕೋತ್ತರ 1ನೇ ವರ್ಷದ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ ಪದವಿಗಳ ಪ್ರವೇಶ ಶುಲ್ಕದ ರಚನಾ ಯಾದಿಯಂತೆ ಆಕರಿಸಲು ಮಾನ್ಯ ಕುಲಪತಿಗಳು ನಿರ್ದೇಶಿಸಿರುತ್ತಾರೆ. ಸದರಿ ವಿಷಯವಾಗಿ ಮಾನ್ಯ ಕುಲಪತಿಗಳು ತೆಗೆದುಕೊಂಡ ನಿರ್ಣಯವನ್ನು ಕ.ವಿ.ವಿ. ಆಡಳಿತ ಮಂಡಳಿಯ ಸಭೆಯ ಪರಿಶೀಲನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಯಿತು.

**<u>ನಿರ್ಣಯ</u>**

**2025-26ನೇ ಸಾಲಿನ ಸ್ನಾತಕ ಮತ್ತು ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಪಿಕೇಟ್ (ಸೆಮೆಸ್ಟರ್/ ನಾನ್ ಸೆಮೆಸ್ಟರ್) ಮತ್ತು ಅಧೀನ ಮಹಾವಿದ್ಯಾಲಯಗಳ ಕೋರ್ಸುಗಳ ಪ್ರವೇಶ ಶುಲ್ಕಗಳನ್ನು ಡೀನರ ಸಭೆಯಲ್ಲಿ ಶಿಫಾರಸ್ಸುಗೊಂಡಂತೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.**



ಕುಲಸಚಿವರು ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 36) ವಿಷಯ-: ಪಿಎಚ್.ಡಿ ಪ್ರವೇಶ ಖಾಲಿ ಸ್ಥಾನಗಳ ಕುರಿತಂತೆ 02 ವರ್ಷಗಳಿಗಿಂತ ಕಡಿಮೆ ಸೇವೆಯಲ್ಲಿರುವ ಸಂಶೋಧನಾ ಮಾರ್ಗದರ್ಶಕರಡಿಯಲ್ಲಿ ಖಾಲಿ ಇರುವ ಸ್ಥಾನಗಳನ್ನು ಪ್ರವೇಶಕ್ಕೆ ಪರಿಗಣನೆ ಕುರಿತು.

**ಟಿಪ್ಪಣಿ:**

2025-26ನೇ ಸಾಲಿನ ಪಿಎಚ್.ಡಿ ಅಧಿಸೂಚನೆ ಹೊರಡಿಸಲು 2012-13ರ ಪಿಎಚ್.ಡಿ ನಿಯಮ 17.10ರ (ಪ್ರತಿ ಲಗತ್ತಿಸಲಾಗಿದೆ) ಪ್ರಕಾರ 02ವರ್ಷಗಳಿಗಿಂತ ಅಧಿಕ ಸೇವೆಯಲ್ಲಿರುವ ಸಂಶೋಧನಾ ಮಾರ್ಗದರ್ಶಕರ ಖಾಲಿ ಸ್ಥಾನಗಳನ್ನು ಮಾತ್ರ ಪ್ರವೇಶಕ್ಕೆ ಪರಿಗಣಿಸಲು ಅವಕಾಶವಿದೆ. ಆದರೆ, ಡಾ. ಎಂ.ಎಚ್. ಅಗಡಿ, ಸಂಶೋಧನಾ ಮಾರ್ಗದರ್ಶಕರು, ಡೀನರು, ಕಲಾ ನಿಖಾಯ, ಇವರು ದಿನಾಂಕ:07.02.2027 ರಂದು ನಿವೃತ್ತಿ ಹೊಂದುತ್ತಿದ್ದರೂ ಸಹ 2025-26ನೇ ಸಾಲಿಗೆ 03 ಖಾಲಿ ಸ್ಥಾನಗಳನ್ನು ಪರಿಗಣಿಸಲು ದಿ:10.07.2025ರ ಪತ್ರದ ಮೂಲಕ ವಿನಂತಿಸಿರುತ್ತಾರೆ.

ದಿನಾಂಕ:10.07.2025 ರಂದು ಜರುಗಿದ ಡೀನರ ಸಭೆಯಲ್ಲಿ 02 ವರ್ಷಗಳಿಗಿಂತ ಕಡಿಮೆ ಸೇವೆಯಲ್ಲಿರುವ ಸಂಶೋಧನಾ ಮಾರ್ಗದರ್ಶಕರಿಗೆ ಪಿಎಚ್.ಡಿ ಖಾಲಿ ಸ್ಥಾನಗಳನ್ನು ನೀಡಲು ಅವಕಾಶವಿರುವುದಿಲ್ಲವೆಂದು ನಿರ್ಣಯಿಸಲಾಗಿದೆ. ಆದಾಗ್ಯೂ ಸಹ ಡಾ.ಎಂ.ಎಚ್. ಅಗಡಿ ಇವರು ದಿ:10.07.2025ರಂದು ಪತ್ರದ ಮೂಲಕ ತಮ್ಮ ಬಳಿ ಇರುವ 03 ಖಾಲಿ ಸ್ಥಾನಗಳನ್ನು ಪ್ರಸ್ತುತ ಸಾಲಿಗೆ ಪ್ರವೇಶಕ್ಕಾಗಿ ಪರಿಗಣಿಸುವಂತೆ ವಿನಂತಿಸಿಕೊಂಡಿರುತ್ತಾರೆ. ಸದರಿ ಪಿಎಚ್.ಡಿ ನಿಯಮ 17.10ರ ಪ್ರಕಾರ 2ವರ್ಷಗಳಿಗಿಂತ ಅಧಿಕ ಸೇವೆಯಲ್ಲಿ ಇರುವ ಸಂಶೋಧನಾ ಮಾರ್ಗದರ್ಶಕರಿಗೆ ಖಾಲಿ ಸ್ಥಾನಗಳನ್ನು ಮಾತ್ರ ಪರಿಗಣಿಸಲು ಅವಕಾಶವಿದ್ದು 2 ವರ್ಷಗಳಿಗಿಂತ ಕಡಿಮೆ ಸೇವೆ ಇರುವ ಸಂಶೋಧನಾ ಮಾರ್ಗದರ್ಶಕರಿಗೆ ಖಾಲಿ ಸ್ಥಾನಗಳನ್ನು ಹಂಚಿಕೆ ಮಾಡುವ ವಿಷಯದ ಕುರಿತಂತೆ ಆಡಳಿತ ಮಂಡಳಿ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಸದರಿ ವಿಷಯವಾಗಿ ಪಿಎಚ್‌ಡಿ ಖಾಲಿ ಸ್ಥಾನಗಳ ಕುರಿತಂತೆ 02 ವರ್ಷಗಳಿಗಿಂತ ಕಡಿಮೆ ಸೇವೆಯಲ್ಲಿರುವ ಸಂಶೋಧನಾ ಮಾರ್ಗದರ್ಶಕರ ಅಡಿಯಲ್ಲಿ ಖಾಲಿ ಸ್ಥಾನಗಳನ್ನು ಪ್ರವೇಶಕ್ಕೆ ಪರಿಗಣನೆ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು ಸದರಿ ಸಂಶೋಧನಾ ಮಾರ್ಗದರ್ಶಕರು ನಿವೃತ್ತಿಯಾಗುವವರೆಗೆ ಪಿಎಚ್.ಡಿ ಗರಿಷ್ಠ 04 ಸ್ಥಾನಗಳನ್ನು ಸ್ವ-ಇಚ್ಛಿಸಿದಲ್ಲಿ ಅವರಿಂದ ಮನವಿಗಳನ್ನು ಪಡೆದು ವಿಭಾಗದ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಒಪ್ಪಿದ ಸಂಶೋಧನಾ ಮಾರ್ಗದರ್ಶಕರಿಂದ ಹಂಚಿಕೆಯಾದ ವಿಧ್ಯಾರ್ಥಿಗಳ ಸಂಶೋಧನಾ ಮಹಾಪ್ರಬಂಧ ಪೂರ್ಣಗೊಳ್ಳುವವರೆಗೆ ಮಾರ್ಗದರ್ಶನ ನೀಡಬೇಕೆಂದು ಸದರಿಯವರಿಂದ ಮುಚ್ಚಳಿಕೆ ಪತ್ರ ಪಡೆದು, ಆಡಳಿತಾತ್ಮಕ ಪ್ರಕ್ರಿಯೆ ಜಾರಿಗೊಳಿಸಬಹುದೆಂದು ಸಭೆಯು ಅನುಮೋದಿಸಿತು.**



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 37) ವಿಷಯ–:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು ಇವರು ಬ್ರಿಟಿಷ್ ಕೌನ್ಸಿಲ್ ಇವರ ಸಹಯೋಗದೊಂದಿಗೆ ಲಂಡನ್ (U.K) ನಲ್ಲಿ ದಿನಾಂಕ:08 ರಿಂದ 18ನೇ ಸಪ್ಟಂಬರ್ 2025 ರವರೆಗೆ ಜರುಗುವ 'Leadership Development Programmé ಗೆ ಮಾನ್ಯ ಕುಲಪತಿಗಳ ಜೊತೆಗೆ ವಿಶ್ವವಿದ್ಯಾಲಯದ Overseas Educational Centre and Office of International Affairs ಕೋಶದ ಸಮನ್ವಯ ಅಧಿಕಾರಿಗಳಾದ ಡಾ.ಎಲ್.ಎ.ಶಾಸ್ತ್ರಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರನ್ನು ಸಮನ್ವಯ ಅಧಿಕಾರಿಯೆಂದು ಬೆಂಗಳೂರಿನಿಂದ ಲಂಡನ್ (UK) ಗೆ ನಿಯೋಜಿಸುವ ಹಾಗೂ ಸದರಿ ಕಾರ್ಯಕ್ರಮಕ್ಕೆ ಹಾಜರಾಗಲು ಪ್ರಯಾಣ ಮತ್ತು ದಿನಭತ್ಯೆ ಪ್ರತಿಯೊಬ್ಬರಿಗೆ ಅಂದಾಜು ರೂ.5.00 ಲಕ್ಷಗಳಂತೆ ವಿಶ್ವವಿದ್ಯಾಲಯದ ವತಿಯಿಂದ ಭರಿಸುವ ಕುರಿತು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

ಮಾನ್ಯ ಕುಲಪತಿಗಳ ಕಾರ್ಯಾಲಯದ ಟಿಪ್ಪಣಿ ದಿನಾಂಕ: 19.07.2025 ರಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ದಿನಾಂಕ:08.07.2025 ರ ಪತ್ರವನ್ನು ಲಗತ್ತಿಸುತ್ತಾ, "ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ಬ್ರಿಟಿಷ್ ಕೌನ್ಸಿಲ್ ಇವರ ಸಹಯೋಗದೊಂದಿಗೆ ಲಂಡನ್ (U.K) ನಲ್ಲಿ ದಿನಾಂಕ:08 ರಿಂದ 18ನೇ ಸಪ್ಟಂಬರ್ 2025 ರವರೆಗೆ ಜರುಗುವ 'Leadership Development Programme ಗೆ ಹಾಜರಾಗಲು ಕುಲಪತಿಗಳು ಮತ್ತು Internationalization Cell ದ ಸಮನ್ವಯ ಅಧಿಕಾರಿಗಳು ಹಾಜರಾಗಬೇಕೆಂದು ತಿಳಿಸಿರುತ್ತಾರೆ. ಸದರಿ ಕಾರ್ಯಕ್ರಮಕ್ಕೆ ಹಾಜರಾಗಲು ಪ್ರಯಾಣ ಮತ್ತು ದಿನಭತ್ಯೆ ಒಬ್ಬೊಬ್ಬರಿಗೆ ಅಂದಾಜು ರೂ.5.00 ಲಕ್ಷಗಳಾಗಬಹುದೆಂದು ತಿಳಿಸಿ, ಸದರಿ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ವತಿಯಿಂದ ಭರಿಸಬೇಕೆಂದು ತಿಳಿಸಿರುತ್ತಾರೆ ಅದರಂತೆ, ಡಾ.ಎ.ಎ.ಮೂಲಿಮನಿ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಭೂಗೋಳಶಾಸ್ತ್ರ, ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರ ಬದಲಿಗೆ ಈಗಾಗಲೇ ವಿಶ್ವವಿದ್ಯಾಲಯದ Overseas Educational Centre and Office of International Affairs ಕೋಶದ ಸಮನ್ವಯ ಅಧಿಕಾರಿಯಾದ ಡಾ.ಎಲ್.ಎ.ಶಾಸ್ತ್ರಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರನ್ನು ನಿಯೋಜಿಸಲು ಕಚೇರಿ ಆದೇಶ ಹೊರಡಿಸಿ ವಿಶ್ವವಿದ್ಯಾಲಯದ ಪ್ರಾಧಿಕಾರಗಳಿಂದ ಅನುಮತಿ ಪಡೆದು ಸದರಿ ಕಾರ್ಯಕ್ರಮಕ್ಕೆ ಹಾಜರಾಗಲು ತಿಳಿಸುತ್ತಾ ಈ ಕುರಿತು ಕ್ರಮ ವಹಿಸಲು ತಿಳಿಸಿರುತ್ತಾರೆ.

ಆದ್ದರಿಂದ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು ಇವರು ಬ್ರಿಟಿಷ್ ಕೌನ್ಸಿಲ್ ಇವರ ಸಹಯೋಗದೊಂದಿಗೆ ಲಂಡನ್ (U.K) ನಲ್ಲಿ ದಿನಾಂಕ:08 ರಿಂದ 18ನೇ ಸಪ್ಟಂಬರ್ 2025 ರವರೆಗೆ ಜರುಗುವ 'Leadership Development Programmé ಗೆ ಮಾನ್ಯ ಕುಲಪತಿಗಳ ಜೊತೆಗೆ ವಿಶ್ವವಿದ್ಯಾಲಯದ Overseas Educational Centre and Office of International Affairs ಕೋಶದ ಸಮನ್ವಯ ಅಧಿಕಾರಿಗಳಾದ ಡಾ.ಎಲ್.ಎ.ಶಾಸ್ತ್ರಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರನ್ನು ಸಮನ್ವಯ ಅಧಿಕಾರಿಯೆಂದು ಬೆಂಗಳೂರಿನಿಂದ ಲಂಡನ್ (UK) ಗೆ ನಿಯೋಜಿಸುವ ಹಾಗೂ ಸದರಿ ಕಾರ್ಯಕ್ರಮಕ್ಕೆ ಹಾಜರಾಗಲು ಪ್ರಯಾಣ ಮತ್ತು ದಿನಭತ್ಯೆ ಪ್ರತಿಯೊಬ್ಬರಿಗೆ ಅಂದಾಜು ರೂ.5.00 ಲಕ್ಷಗಳಂತೆ ವಿಶ್ವವಿದ್ಯಾಲಯದ ವತಿಯಿಂದ ಭರಿಸುವ ಕುರಿತು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಆದೇಶದ ಪತ್ರ ಸಂಖ್ಯೆ: KSHEC/VCP-LDP/6/2025/506 ದಿನಾಂಕ: 08.07.2025 ರ ಪ್ರಕಾರ ಇವರು ಬ್ರಿಟಿಷ್ ಕೌನ್ಸಿಲ್ ಇವರ ಸಹಯೋಗದೊಂದಿಗೆ ಲಂಡನ್(U.K)ನಲ್ಲಿ ದಿನಾಂಕ 8/9/2025ರಿಂದ 18/9/2025ರ ವರೆಗೆ ಜರುಗುವ Leadership Development Programme ಗೆ ಮಾನ್ಯ ಕುಲಪತಿಗಳ ಜೊತೆಗೆ ವಿಶ್ವವಿದ್ಯಾಲಯದ Overseas Educational Centre and Office of International Affairs ಕೋಶದ ಸಮನ್ವಯ ಅಧಿಕಾರಿಗಳಾದ ಡಾ.ಎಲ್.ಎ.ಶಾಸ್ತ್ರಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ, ಅಧ್ಯಯನ ವಿಭಾಗ, ಕವಿವಿ, ಧಾರವಾಡ**



ಕುಲಸಚಿವರು ಕುಲಪತಿಗಳು

ಇವರನ್ನು ಸಮನ್ವಯ ಅಧಿಕಾರಿಯೆಂದು ಬೆಂಗಳೂರಿನಿಂದ ಲಂಡನ್(UK) ಗೆ ನಿಯೋಜಿಸುವ ಹಾಗೂ ಸದರಿ ಕಾರ್ಯಕ್ರಮಕ್ಕೆ ಹಾಜರಾಗಲು ಪ್ರಯಾಣ ಮತ್ತು ದಿನಭತ್ಯೆ ಪ್ರತಿಯೊಬ್ಬರಿಗೆ 2025-26ನೇ ಸಾಲಿನ ಲೆಕ್ಕ ಶಿರ್ಷಿಕೆ ಸಂಖ್ಯೆ: 1436 ರಿಂದ ಅಂದಾಜು ರೂ.5.00 ಲಕ್ಷಗಳಂತೆ ವಿಶ್ವವಿದ್ಯಾಲಯದ ವತಿಯಿಂದ ಭರಿಸುವ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 38) ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವನ್ನು ಉನ್ನತೀಕರಿಸಲು ಕೈಗೊಳ್ಳಬೇಕಾದ ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸುವ ಕುರಿತು.

**ಪ್ರಾಸ್ತಾವನೆ :**

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವನ್ನು ಉನ್ನತೀಕರಿಸಲು ಡಾ. ಎಂ. ಡಿ. ಒಕ್ಕುಂದ, ಸಿಂಡಿಕೇಟ್ ಸದಸ್ಯರು ಹಾಗೂ ಪ್ರಾಚಾರ್ಯರು, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಅಂಬೇವಾಡಿ, ದಾಂಡೇಲಿ ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿರುತ್ತದೆ.

ಸದರ ಸಮಿತಿಯು ಪ್ರಸಾರಾಂಗ ವಿಭಾಗವನ್ನು ಉನ್ನತೀಕರಿಸಲು ಕೈಗೊಳ್ಳಬೇಕಾದ ರಚನಾತ್ಮಕ ಅಂಶಗಳನ್ನೊಳಗೊಂಡ ಅಂತಿಮ ವರದಿಯನ್ನು ಸಲ್ಲಿಸಿದ್ದು ಸದರಿ ಅಂತಿಮ ವರದಿಯ ಮುಚ್ಚಿದ ಲಕೋಟೆಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವನ್ನು ಉನ್ನತೀಕರಿಸಲು ಕೈಗೊಳ್ಳಬೇಕಾದ ವಿಷಯವಾಗಿ ಡಾ. ಎಮ್. ಡಿ. ಒಕ್ಕುಂದ, ಸಿಂಡಿಕೇಟ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಸಲ್ಲಿಸಿದ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ ಸಭೆಯಲ್ಲಿ ತೆರೆದು ಓದಲಾಯಿತು. ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ವರದಿಯನ್ನು ಸವಿಸ್ತಾರವಾಗಿ ತಿಳಿದುಕೊಂಡು ಹಂತ ಹಂತವಾಗಿ ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆ ಪರಿಗಣಿಸಿ ಕ್ರಮ ಕೈಗೊಳ್ಳಲು ಸಿಂಡಿಕೇಟ ನಿರ್ಣಯಿಸಿತು.**

-
-
-
-
-
-
-
-
-
-
-



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 39) **ವಿಷಯ–:** ಉರ್ದು ಪಿಎಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿ ಶ್ರೀ. ಸೈಯದ ತಾಜವುದ್ದಿನ ಖಾದರಿ ಇವರ ದೂರಿನ ವಿಷಯದ ಕುರಿತು ಸತ್ಯಶೋಧನಾ ಸಮಿತಿ ರಚಿಸಿದ್ದು ಸದರಿ ಸಮಿತಿ ದಿನಾಂಕ: 31.07.2025 ರಂದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ಯಥಾವತ್ತಾದ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಕುರಿತು.

**ಪೀಠಿಕೆ**

1. ದಿನಾಂಕ: 12.04.2024 ರಂದು ನಡೆದ ಉರ್ದು ಪಿಎಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಶ್ರೀ. ಸೈಯದ ತಾಜವುದ್ದಿನ ಖಾದರಿ ಇವರು ಸಲ್ಲಿಸಿದ ದೂರಿನ ವಿಷಯವಾಗಿ ಶ್ರೀ. ರಾಬರ್ಟ ದದ್ದಾಪೂರಿ ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಮನವಿಯನ್ನು ಪರಿಶೀಲಿಸಲು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ದಿನಾಂಕ; 22.10.2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಿದ್ದು ಇರುತ್ತದೆ.

**ಸಿಂಡಿಕೇಟ್ ಕಲಂ 23 ದಿನಾಂಕ 22.10.2024**

ದಿನಾಂಕ: 12.04.2024 ರಂದು ನಡೆದ ಉರ್ದು ಪಿಎಚ್.ಡಿ. ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಶ್ರೀ. ಸೈಯದ ತಾಜವುದ್ದಿನ ಖಾದರಿ ಇವರು ಸಲ್ಲಿಸಿದ ದೂರಿನ ವಿಷಯವಾಗಿ ಶ್ರೀ. ರಾಬರ್ಟ ದದ್ದಾಪೂರಿ ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಈ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಪಡೆದು ಕ್ರಮ ಕೈಗೊಳ್ಳಲು ತನಿಖಾ ಸಮಿತಿಯನ್ನು ಈ ಕೆಳಗಿನಂತೆ ರಚಿಸಲು ತೀರ್ಮಾನಿಸಿರುತ್ತದೆ.

1. ಶ್ರೀ. ರಾಬರ್ಟ ದದ್ದಾಪೂರಿ ಸಿಂಡಿಕೇಟ್ ಸದಸ್ಯರು – ಅಧ್ಯಕ್ಷರು
2. ಡಾ. ಎಮ್. ಎಚ್. ಅಗಡಿ ಡೀನರು ಕಲಾ ನಿಖಾಯ – ಸದಸ್ಯರು
3. ಉರ್ದು ವಿಷಯಕ್ಕೆ ಸಂಬಂಧಿಸಿದ ಇತರೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು/ಇತರ ಮಹಾವಿದ್ಯಾಲಯಗಳ ಉರ್ದು ವಿಷಯದ ಶಿಕಕ್ಷರು – ಸದಸ್ಯರು
4. ಉಪ ಕುಲಸಚಿವರು ಪರೀಕ್ಷಾ ವಿಭಾಗ – ಸಂಚಾಲಕರು

2 ಸದರಿ ಸಿಂಡಿಕೇಟ್ ನಿರ್ಣಯದನ್ವಯ ಸಮಿತಿಯನ್ನು ರಚಿಸಲಾಗಿತ್ತು. ಮುಂದುವರೆದು, ಡಾ.ಅಮೀನಉಲ್ಲಾ, ಸ್ನಾತಕೋತ್ತರ ಉರ್ದು ವಿಭಾಗ, ಎಸ್.ವಿ. ಯುನಿರ್ವಸಿಟಿ, ತಿರುಪತಿ. ಇವರನ್ನು ಸೇರ್ಪಡೆ ಕಚೇರಿ ಪತ್ರ ನಂ. ಕವಿವಿ/ಪರೀಕ್ಷಾ/ಗೌಪ್ಯ/2024/224, ದಿನಾಂಕ: 16.12.2024 ರನ್ವಯ ಪುನರ್‌ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: 24.12.2024, 04.04.2025 ಹಾಗೂ 23.07.2025 ರಂದು ತನಿಖಾ ಸಮಿತಿಯು ಪರೀಕ್ಷಾ ವಿಭಾಗದ ಮಿಟಿಂಗ್ ಹಾಲ್‌ನಲ್ಲಿ ಸಭೆ ಸೇರಿ ವರದಿಯನ್ನು ಮುಚ್ಚಿದ ಲಕೋಟಿಯಲ್ಲಿ ಕುಲಸಚಿವರು(ಮೌಲ್ಯಮಾಪನ) ಇವರಿಗೆ ದಿನಾಂಕ 31.07.2025 ರಂದು ಅಧ್ಯಕ್ಷರು ಸಲ್ಲಿಸಿರುವರು.



ಕುಲಸಚಿವರು ಕುಲಪತಿಗಳು

3 ಕುಲಾಧಿಪತಿಗಳಿಂದ ಅಂಕಿತವಾದ ಅಧ್ಯಾದೇಶವನ್ನು ಕಚೇರಿ ಪತ್ರ ನಂ.ಕವಿವಿ/ಪರೀಕ್ಷಾ/ಗೌಪ್ಯ/ 2018/234(A) ದಿನಾಂಕ:31.07.2018 ರನ್ವಯ ಅಧಿಸೂಚನೆ ಮುಖಾಂತರ ಹೊರಡಿಸಲಾಗಿದೆ. ಸದರಿ ಅಧ್ಯಾದೇಶದ ಕ್ರಮಸಂಖ್ಯೆ–R.5 ಈ ಕೆಳಗಿನಂತಿದೆ.

**R.5 Procedure for action after submitting the Enquiry Report:**

a) The Registrar (Evaluation) shall submit the Committee report/s to the Vice-Chancellor for administrative approval for immediate intimation to the individual candidate.

i. The Vice Chancellor may accept the recommendation of the Committee and decide to implement the recommended action immediately or it may be referred back to the Committee, for review with specific remark/s. In such cases, the Committee shall review the report within 07 days.

ii. The decision of such a reviewed report shall be final.

b) The Registrar (Evaluation) shall intimate the final decision by Registered Post to the concerned Persons and a copy of the same shall be sent to the Head of the concerned Institutions for needful action within 07 days.

4. ಮೇಲಿನ ಅಂಶಗಳನ್ನು ಅವಲೋಕಿಸಿ ಸತ್ಯಶೋಧನಾ ಸಮಿತಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ದಿನಾಂಕ: 31.07.2025 ರ ಯಥಾವತ್ತಾದ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಉರ್ದು ಪಿಎಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿ ಶ್ರೀ. ಸೈಯದ ತಾಜವುದ್ದಿನ ಖಾದರಿ ಇವರ ದೂರಿನ ವಿಷಯದ ಕುರಿತು ಸತ್ಯಶೋಧನಾ ಸಮಿತಿ ರಚಿಸಿದ್ದು, ಸದರಿ ಸಮಿತಿಯು ದಿನಾಂಕ:31.07.2025 ರಂದು ಸಲ್ಲಿಸಿದ ಮುಚ್ಚಿದ ಲಕೋಟೆಯಲ್ಲಿನ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ತೆರೆದು ಓದಲಾಗಿ ಸೀಟುಗಳ ಲಭ್ಯತೆಯ ಆಧಾರದ ಮೇಲೆ ಸದರಿ ವರದಿಯಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಲಾಯಿತು.**

–

–

–

–

–

ಕುಲಸಚಿವರು

ಕುಲಪತಿಗಳು

ಕಾರ್ಯಸೂಚಿ ಸಂಖ್ಯೆ 40) ವಿಷಯ-: ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು ಒಟ್ಟು ಹತ್ತು ಜನ ಸಿಂಡಿಕೇಟ ಸದಸ್ಯರುಗಳು ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಮಂಡಿಸುವ ಕುರಿತು.

**ಟಿಪ್ಪಣಿ:**

ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು 08 ಜನ ಸಿಂಡಿಕೇಟ ಸದಸ್ಯರುಗಳು ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಗೆ ಮಂಡಿಸಲಾಯಿತು.

**ನಿರ್ಣಯ**

**ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು ಒಟ್ಟು 8 ಜನ ಸಿಂಡಿಕೇಟ ಸದಸ್ಯರುಗಳು ದಿನಾಂಕ: 31.07.2025 ರಂದು ಸಭೆಯಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯು ಚರ್ಚಿಸಿ, ಸದರ ಮಹಾವಿದ್ಯಾಲಯದ ಪರೀಕ್ಷಾ ಕೇಂದ್ರ ರದ್ದಾದ ಬಗ್ಗೆ ಹಿಂದಿನ ಸಭೆಯಲ್ಲಿ ತೆಗದುಕೊಂಡ ನಿರ್ಣಯವನ್ನು ಕೂಲಂಕುಷವಾಗಿ ಪರಿಶೀಲಿಸಿ ನಿರ್ಣಯ ಕೈಗೊಳ್ಳಲು ಸಮಯಾವಕಾಶ ಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ಮುಂದಿನ ಸಿಂಡಿಕೇಟ ಸಭೆಗೆ ಮರು ಮಂಡಿಸಲು ಸಿಂಡಿಕೇಟ ಠರಾಯಿಸಿತು.**

-

-

-

-

-

-

-

-

-

-

-

-

-

-



ಕುಲಸಚಿವರು ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 41) ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ **ಪ್ರೊ.ಎಸ್.ಎಮ್.ತುವಾರ, ಪ್ರೊ(ಶ್ರೀಮತಿ) ಎಂ.ಎಸ್.ಸಾಳುಂಕೆ ಹಾಗೂ ಡಾ.ಆರ್.ಜಿ.ಕಲಖಾಂಬಕರ ಪ್ರಾಧ್ಯಾಪಕರಿಂದ ಆದ ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವ-ಕೃತಿ ಚೌರ್ಯ (Self Plagiarism) ಪ್ರಕರಣದ ತನಿಖೆಗಾಗಿ** ಕವಿವಿ/ಯುಜಿಸಿ ನಿಯಮಗಳ ಪ್ರಕಾರ ಸಮಿತಿಯನ್ನು ರಚಿಸಿ ಕ್ರಮ ಜರುಗಿಸುವಂತೆ **ಸಿಂಡಿಕೇಟ ಸದಸ್ಯರುಗಳಾದ ಶ್ರೀ. ಮಹೇಶ ಹುಲೆನ್ನವರ ಹಾಗೂ ಡಾ.ಬಸವರಾಜ ಗೊರವರ ಇವರು ಸಲ್ಲಿಸಿದ ದಿನಾಂಕ:23.06.2025 ರ ಮನವಿಯನ್ನು ಪರಿಶೀಲಿಸುವ ಕುರಿತು.**

**<u>ಟಿಪ್ಪಣಿ:</u>**

ಸದರ ಮನವಿ ಪತ್ರದಲ್ಲಿ ಕೃತಿ ಚೌರ್ಯವೆಂದರೆ ಈಗಾಗಲೇ ಬೇರೆಯವರು ಪ್ರಕಟಿಸಿದ ಪ್ರತಿಗಳನ್ನು ಅಂದರೆ, ಪುಸ್ತಕ ಪ್ರಕಟಣೆ, ವೈಜ್ಞಾನಿಕ ಪ್ರಬಂಧಗಳ ಪ್ರಕಟಣೆ, ಸಂಶೋಧನಾ ಪ್ರಬಂಧಗಳ ಪ್ರಕಟಣೆಗಳನ್ನು/ಪ್ರಕಟಣಾ ಪ್ರಬಂಧಗಳ ವಿಷಯವನ್ನು ನಕಲು ಮಾಡಿ ತಮ್ಮ ಅನುಕೂಲಕ್ಕೆ ತಕ್ಕಂತೆ ಹೊಂದಿಸಿಕೊಂಡು ತಮ್ಮ ಹೆಸರಿನಲ್ಲಿ ತಮ್ಮ ಆದಾಯಗೋಸ್ಕರ ಪ್ರಕಟಿಸಿಕೊಳ್ಳುವುದು ಕೃತಿಚೌರ್ಯ ಎಂದಿನಿಸುತ್ತದೆ. ಯುಜಿಸಿ ನವದೆಹಲಿ ಯು ಕೃತಿಚೌರ್ಯ/ಸ್ವಕೃತಿಚೌರ್ಯ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಪ್ರಮುಖವಾಗಿ ಪ್ರಾಧ್ಯಾಪಕರು/ ಶಿಕ್ಷಕರು ಇಂತಹ ಅಪರಾಧಗಳನ್ನು ಎಸಗಬಾರದೆಂಬ ಉದ್ದೇಶದಿಂದ ಕಾಲಕಾಲಕ್ಕೆ ಸೂಕ್ತ ಕಾನೂನುಗಳನ್ನು ಜಾರಿಗೆ ತಂದಿರುತ್ತದೆ (F.1-18/2010 (CPP II) 23rd July 2018 ರಲ್ಲಿ UGC New Delhi ಗೆಜೆಟ್ ಮುಖಾಂತರ ಕೃತಿಚೌರ್ಯ ಪ್ರಕರಣ ಸಾಬೀತಾದಲ್ಲಿ ಅಂತಹ ಪ್ರಾಧ್ಯಾಪಕರುಗಳಿಗೆ/ಶಿಕ್ಷಕರುಗಳಿಗೆ/ಸಂಶೋಧಕರುಗಳಿಗೆ ಕಠಿಣ ಕ್ರಮ ಜರುಗಿಸಲು ನಿಯಮಾವಳಿಗಳನ್ನು ದೇಶದ ಎಲ್ಲ ವಿಶ್ವವಿದ್ಯಾಲಯಗಳಿಗೆ ಆದೇಶ ಮಾಡಿದೆ. ಕೃತಿಚೌರ್ಯ ಪ್ರಕರಣಗಳು ಯಾವ ಸಂಸ್ಥೆಯಲ್ಲಿ ಉಲ್ಬಣಗೊಳ್ಳುವ ಮೊದಲೇ ಪ್ರಾಥಮಿತ ಹಂತದಲ್ಲಿ ಅಥವಾ ದೂರು ಬಂದಾಕ್ಷಣವೇ ಸೋ-ಮೋಟೋ (suomotu) ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ಸಮಿತಿಯನ್ನು ರಚಿಸಿ ಪರಿಶೀಲನೆ ಮಾಡಿ ಕೃತಿಚೌರ್ಯ ಸಾಬೀತಾದಲ್ಲಿ ಕಠಿಣ ಕ್ರಮ ಜರುಗಿಸುವಂತೆ ಆದೇಶಿಸಿದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು **ಡಾ.ಓ.ಕೊಟ್ರೇಶ ಹಾಗೂ ಡಾ.ಕೆ.ಎಸ್ ಕಟಗಿ** ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಇವರು ಸಲ್ಲಿಸಿದ ದೂರಿನ ಅನ್ವಯ ಸದರ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ.ಎಸ್.ಎಮ್.ತುವಾರ, ಪ್ರೊ(ಶ್ರೀಮತಿ) ಎಂ.ಎಸ್.ಸಾಳುಂಕೆ ಹಾಗೂ ಡಾ.ಆರ್.ಜಿ.ಕಲಖಾಂಬಕರ ಇವರಿಂದ ಆದ ಕೃತಿಚೌರ್ಯ ಪ್ರಕರಣ 2 ಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ವಿವರಗಳನ್ನು ಸದರ ಮನವಿ ಪತ್ರದಲ್ಲಿ ನಮೂದಿಸುತ್ತಾ ದಿನಾಂಕ: 16.08.2024 ರಂದು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರುದಾರರು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ, ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಹಾಗೂ ಡೀನ್ ವಿಜ್ಞಾನ ನಿಕಾಯ ಕವಿವಿ ಧಾರವಾಡ ಇವರುಗಳಿಗೆ ಅಡಕಗಳನ್ನೊಳಗೊಂಡ ದೂರಿನ ಪ್ರತಿಗಳನ್ನು ಕ.ವಿಜ್ಞಾನ ಮಹಾವಿದ್ಯಾಲಯ ಪ್ರಾಚಾರ್ಯರಾದ ಡಾ.ಎಮ್.ಎಸ್ ಸಾಳುಂಕೆ ಯವರಿಗೆ ಸಲ್ಲಿಸಲಾಗಿತ್ತು. ಆದರೆ ಇಂದಿನವರೆಗೂ ಸದರಿ ದೂರುಗಳನ್ನು ಮೇಲಾಧಿಕಾರಿಗಳಿಗೆ ರವಾನಿಸಿಲ್ಲವೆಂದು ಎಂಬುದು ಕವಿವಿ ಕುಲಸಚಿವರ ಪತ್ರದ ದಿನಾಂಕ: 18.10.2024 ಮುಖಾಂತರ ತಿಳಿದು ಬಂದಿದೆ ಆದಾಗ್ಯೂ ದೂರುದಾರರು ಮೇಲಾಧಿಕಾರಿಗಳಿಗೆ ಅಡ್ವಾನ್ಸ್ ಪ್ರತಿಗಳನ್ನು ಅಂಚೆಯ ಮೂಲಕ ಕಳಿಸಿದ್ದಾರೆ ಇಲ್ಲಿಯವರೆಗೂ ವಿಚಾರಣಾ ಸಮಿತಿಯ ಬಗ್ಗೆ ಸುಳಿವಿಲ್ಲ ಎಂಬುದು ವಿಷಾದದ ಸಂಗತಿ. ಪ್ರಾಚಾರ್ಯರು ತಮ್ಮ ಮೇಲೆ ಬಂದ ಆರೋಪವನ್ನು ಮುಚ್ಚಿ ಹಾಕಲು ಅಧಿಕಾರ ದುರ್ಬಳಕೆ ಮಾಡಕೊಂಡಿದ್ದಾರೆಂದು ತಿಳಿದು ಬರುತ್ತದೆ. ಆದ್ದರಿಂದ ಮೇಲೆ ತಿಳಿಸಿದ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಯುಜಿಸಿ/ಕವಿವಿ ಯ ಕೃತಿಚೌರ್ಯ ಪ್ರತಿಬಂಧಕ ನಿಮಯಗಳಂತೆ ಕೃತಿಚೌರ್ಯ ಪರಿಶೀಲನಾ ಸಮಿತಿಗೆ ಒಳಪಡಿಸಲು ಸಿಂಡಿಕೇಟ ಸಭೆಯಲ್ಲಿ ಚರ್ಚಿಸಿ ತಪ್ಪತಸ್ತರಿಗೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಹಾಗೂ ಸಿಂಡಿಕೇಟ ವಿಷಯಕ್ಕೆ ತೆಗೆದುಕೊಂಡ ನಿರ್ಣಯಕ್ಕೆ ಕೃತಿಚೌ ರ್ಯವೆಸಗಿದ ತಪ್ಪಿತಸ್ಥ ಶಿಕ್ಷಕರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದು ಕಾಲಹರಣ ಮಾಡುವ ಸಾಧ್ಯತೆ ಇರುವುದರಿಂದ ಸದರಿ ನಿರ್ಣಯಕ್ಕೆ ಕವಿವಿ ಉಚ್ಚ ನ್ಯಾಯಾಲಯದಲ್ಲಿ ಕೇವಿಯಟ್ ಹಾಕಲು ಸೂಚಿಸಬೇಕೆಂದು ತಿಳಿಸಿರುತ್ತಾರೆ.

**ಸದರ ವಿಷಯವಾಗಿ ನಿವೇದಿಸಿಕೊಳ್ಳುವುದೇನೆಂದರೆ**, ಸದರ ಕೃತಿಚೌರ್ಯ-2 ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರಾದ ಡಾ.ಕೆ.ಎಸ್.ಕಟಗಿ ಇವರ ಪರ ವಕೀಲರು ಆದ ಶ್ರೀ ಸಬೀಲ್ ಅಹ್ಮದ್ ಇವರು ನೀಡಿರುವ ದಿನಾಂಕ: 03.11.2023 ರ ಲೀಗಲ್ ನೋಟಿಸ್ ಗೆ ದಿನಾಂಕ 27.11.2023 ರಂದು ಕವಿವಿ ಕೋಶದಿಂದ ಪತ್ರ



**ಕುಲಸಚಿವರು** **ಕುಲಪತಿಗಳು**

ಸಂಖ್ಯೆ. **KU/Legal Cell/2023-24/1672 ದಿನಾಂಕ: 27.11.2023** ರ ಮೂಲಕ ಸಂಬಂಧಿಸಿದ ಉತ್ತರವನ್ನು ಅವರ ಪರ ವಕೀಲರಿಗೆ ಕಳುಹಿಸಲಾಗಿರುತ್ತದೆ. ಅಲ್ಲದೇ **ಡಾ.ಕೆ.ಎಸ್.ಕಟಗಿ, ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕವಿವಿ ಧಾರವಾಡ ಇವರು ತಮ್ಮ ಪತ್ರ ದಿನಾಂಕ: 06.09.2024 ರ ಮೂಲಕ** ಕೃತಿಚೌರ್ಯ ಪ್ರಕರಣ 2 ಕ್ಕೆ ಸಂಬಂಧಿಸಿದಂತೆ ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ, ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಹಾಗೂ ಡೀನ್ ವಿಜ್ಞಾನ ನಿಕಾಯ ಕವಿವಿ ಧಾರವಾಡ ಇವರಿಗೆ ವಿಳಾಸಿಸಿ ಬರೆದ **156 ಪುಟಗಳುಳ್ಳ ದೂರಿನ ಪುಸ್ತಕದ ಪ್ರತಿಗಳನ್ನು** ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಇವರಿಗೆ ದಿನಾಂಕ: 16.08.2024 ರಂದು ಸಲ್ಲಿಸಿರುವುದಾಗಿ ತಿಳಿಸಿ ಸದರ ವಿಷಯದ ಕುರಿತು ದೂರಿನ ಪ್ರತಿಗಳನ್ನು ರವಾನಿಸಿದರ ಬಗ್ಗೆ ವಸ್ತುಸ್ಥಿತಿ ಯನ್ನು ತಿಳಿಸಲು ವಿನಂತಿಸಿದ್ದರು. ಸದರಿಯವರ ಮನವಿಯನ್ನು ಪರಿಶೀಲಿಸಿ ಸದರಿಯವರು ದಿನಾಂಕ: 16.08.2024 ರಂದು ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಇವರಿಗೆ ಸಲ್ಲಿಸಿದ ದೂರಿನ ಪುಸ್ತಕದ ಪ್ರತಿಗಳು ಈ ಕಚೇರಿಗೆ (ಸಿ.ಆ.ಸು ವಿಭಾಗ) ಸ್ವೀಕೃತಿಯಾಗಿರುವುದಿಲ್ಲವೆಂದು ವಸ್ತುಸ್ಥಿತಿಯ ಮಾಹಿತಿಯನ್ನು ಈ ಕಚೇರಿ ಪತ್ರ ಸಂಖ್ಯೆ.ಕೆಯು/ಡಿಪಿಎಆರ್/ಟಿ-6/2024/1929 ದಿನಾಂಕ:18.10.2024 ರ ಮೂಲಕ ಡಾ.ಕೆ.ಎಸ್.ಕಟಗಿ ಇವರಿಗೆ ತಿಳಿಸಲಾಗಿರುತ್ತದೆ.

ಮುಂದುವರೆದು ನಿವೇದಿಸಿಕೊಳ್ಳುವುದೇನೆಂದರೆ, ಸಿ.ಆಸು ವಿಭಾಗದಿಂದ ನೌಕರರ ಸೇವಾ ವಿಷಯಕ್ಕೆ ಸಂಬಂಧಿಸಿದ ಕಾರ್ಯವನ್ನು ಮಾತ್ರ ನಿರ್ವಹಿಸಲಾಗುತ್ತದೆ. ಆದರೆ ಸದರ ಪ್ರಕರಣವು ಪುಸ್ತಕ ಪ್ರಕಟಣೆ, ವೈಜ್ಞಾನಿಕ ಪ್ರಬಂಧಗಳ ಪ್ರಕಟಣೆ, ಸಂಶೋಧನಾ ಪ್ರಬಂಧಗಳ ಪ್ರಕಟಣೆಗಳನ್ನು/ಪ್ರಕಟಣಾ ಪ್ರಬಂಧಗಳ, ಕೃತಿಚೌರ್ಯ ಮತ್ತು ಪಠ್ಯಕ್ರಮಗಳು ಇತ್ಯಾದಿ ಇದಕ್ಕೆ ಸಂಬಂಧಿಸಿದ ವಿಷಯಗಳು ವಿದ್ಯಾಮಂಡಳ ವಿಭಾಗದ ವ್ಯಾಪ್ತಿಗೆ ಒಳಪಡುವುದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ವಿದ್ಯಾಮಂಡಳ ವಿಭಾಗಕ್ಕೆ ಮುಂದಿನ ಅವಶ್ಯ ಕ್ರಮಕ್ಕಾಗಿ ಕಳುಹಿಸಿಕೊಡಬಹುದಾಗಿದೆ.

ಪ್ರಸ್ತುತವಾಗಿ, ಕರ್ನಾಟಕ ವಿಶ್ವವಿದ್ಯಾಲಯದ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಎಸ್.ಎಮ್.ತುವಾರ, ಪ್ರೊ(ಶ್ರೀಮತಿ) ಎಂ.ಎಸ್.ಸಾಳುಂಕೆ ಹಾಗೂ ಡಾ.ಆರ್.ಜಿ.ಕಲಖಾಂಬಕರ ಪ್ರಾಧ್ಯಾಪಕರಿಂದ ಆದ ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವ-ಕೃತಿ ಚೌರ್ಯ (Self Plagiarism) ಪ್ರಕರಣದ ತನಿಖೆಗಾಗಿ ಕವಿವಿ/ಯುಜಿಸಿ ನಿಯಮಗಳ ಪ್ರಕಾರ ಸಮಿತಿಯನ್ನು ರಚಿಸಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುವಂತೆ ಹಾಗೂ ಸಿಂಡಿಕೇಟ ವಿಷಯಕ್ಕೆ ತೆಗೆದುಕೊಂಡ ನಿರ್ಣಯಕ್ಕೆ ಕೃತಿಚೌರ್ಯವೆಸಗಿದ ತಪ್ಪಿತಸ್ಥ ಶಿಕ್ಷಕರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದು ಕಾಲಹರಣ ಮಾಡುವ ಸಾಧ್ಯತೆ ಇರುವುದರಿಂದ ಸದರಿ ನಿರ್ಣಯಕ್ಕೆ ಕವಿವಿ ಉಚ್ಚ ನ್ಯಾಯಾಲಯದಲ್ಲಿ ಕೇವಿಯಟ್ ಹಾಕಲು ಸೂಚಿಸಬೇಕೆಂದು **ಸಿಂಡಿಕೇಟ ಸದಸ್ಯರುಗಳಾದ ಶ್ರೀ. ಮಹೇಶ ಹುಲೆನ್ನವರ ಹಾಗೂ ಡಾ.ಬಸವರಾಜ ಗೊರವರ ಇವರು ಸಲ್ಲಿಸಿದ ದಿನಾಂಕ:23.06.2025 ರ ಮನವಿಯನ್ನು** ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಕರ್ನಾಟಕ ವಿಶ್ವವಿದ್ಯಾಲಯದ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಎಸ್.ಎಮ್.ತುವಾರ, ಪ್ರೊ(ಶ್ರೀಮತಿ) ಎಂ.ಎಸ್.ಸಾಳುಂಕೆ ಹಾಗೂ ಡಾ.ಆರ್.ಜಿ.ಕಲಖಾಂಬಕರ ಪ್ರಾಧ್ಯಾಪಕರಿಂದ ಆದ ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವ-ಕೃತಿ ಚೌರ್ಯ (Self Plagiarism) ಪ್ರಕರಣದ ತನಿಖೆಗಾಗಿ ಕವಿವಿ/ಯುಜಿಸಿ ನಿಯಮಗಳ ಪ್ರಕಾರ ಸಮಿತಿಯನ್ನು ರಚಿಸಿ ಕ್ರಮ ಜರುಗಿಸುವಂತೆ ಸಿಂಡಿಕೇಟ ಸದಸ್ಯರುಗಳಾದ ಶ್ರೀ. ಮಹೇಶ ಹುಲೆನ್ನವರ ಹಾಗೂ ಡಾ. ಬಸವರಾಜ ಗೊರವರ ಇವರು ಸಲ್ಲಿಸಿದ ದಿನಾಂಕ:23.06.2025ರ ಮನವಿಯನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಸದರಿ ವಿಷಯವನ್ನು ಸಂಬಂದಪಟ್ಟ ವಿಷಯದ ವಿಭಾಗಿಯ ಪರಿಷತ್ತಿಗೆ(Departmental Council) ಮಂಡಿಸಿ ವರದಿ ಪಡೆದು ಮುಂದಿನ ಸಿಂಡಿಕೇಟ ಸಭೆಗೆ ಮಂಡಿಸಲು ಸಭೆಯು ತಿರ್ಮಾನಿಸಿತು.**



ಕುಲಸಚಿವರು

ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ 42) ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ ಲಾಂಛನ (Emblem) ದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಲಹೆಯ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅಳವಡಿಸುವ ವಿಷಯವನ್ನು ಸಿಂಡಿಕೇಟ ಸಭೆ ಅನುಮೋದಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ಲಾಂಛನ (Emblem) ದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಲಹೆಯ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅಳವಡಿಸುವ ವಿಷಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗೆ ಮಂಡಿಸಲಾಯಿತು.

## ನಿರ್ಣಯ

**ಮಾನ್ಯ ಸಿಂಡಿಕೇಟ ಸದಸ್ಯರುಗಳು ಪ್ರಸ್ತಾವನೆಯನ್ನು ಸಲ್ಲಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಲಾಂಛನ (Emblem) ದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಲಹೆಯ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅಳವಡಿಸುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಒಮ್ಮತದಿಂದ ಒಪ್ಪಿ ಅನುಮೋದಿಸಿತು.**

ಕುಲಸಚಿವರು



ಕುಲಪತಿಗಳು

**ಕಾರ್ಯಸೂಚಿ ಸಂಖ್ಯೆ** 43) **ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯವಾದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಕವಿವಿ ಆದೇಶವನ್ನು ಕಾಲಮಿತಿಯೊಳಗೆ ಜಾರಿಗೆ ಮಾಡದೆ ಬೇಜವಾಬ್ದಾರಿ ತೋರಿದ ಹಿನ್ನೆಲೆಯಲ್ಲಿ ಪ್ರಾಚಾರ್ಯರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು ಸಿಂಡಿಕೇಟ ಸದಸ್ಯರು ಪತ್ರ ಸಲ್ಲಿಸಿದ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯವಾದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಕವಿವಿ ಆದೇಶವನ್ನು ಕಾಲಮಿತಿಯೊಳಗೆ ಜಾರಿಗೆ ಮಾಡದೆ ಬೇಜವಾಬ್ದಾರಿ ತೋರಿದ ಹಿನ್ನೆಲೆಯಲ್ಲಿ ಪ್ರಾಚಾರ್ಯರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು ಸಿಂಡಿಕೇಟ ಸದಸ್ಯರು ಸಲ್ಲಿಸಿದ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲಾಯಿತು.

**ನಿರ್ಣಯ**

**ದಿನಾಂಕ: 31.07.2025 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಮಾನ್ಯ ಸಿಂಡಿಕೇಟ ಸದಸ್ಯರುಗಳು ಪ್ರಸ್ತಾವನೆಯನ್ನು ಸಲ್ಲಿಸಿ ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯವಾದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಕವಿವಿ ಆದೇಶವನ್ನು ಕಾಲಮಿತಿಯೊಳಗೆ ಜಾರಿಗೆ ಮಾಡದೆ ಬೇಜವಾಬ್ದಾರಿ ತೋರಿದ ಹಿನ್ನೆಲೆಯಲ್ಲಿ ಪ್ರಾಚಾರ್ಯರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು ಪರಿಶೀಲಿಸಿದ ಸಭೆಯು ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರಿಗೆ ಸದರ ವಿಷಯವಾಗಿ ಕಾಲವಿಳಂಬಕ್ಕೆ ಸಮಗ್ರ ವರದಿಯನ್ನು 7 ದಿನಗಳಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.**

**ಮುಂದುವರೆದು, ಕರ್ನಾಟಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ ಪತ್ರ ಬರೆದು ಆಡಳಿತ ಮಂಡಳಿ (Governing council) ರಚನೆಯಾದಾಗಿನಿಂದ ಇಲ್ಲಿಯವರೆಗೂ ಎಷ್ಟು ಸಭೆಗಳಾಗಿವೆ, ಪ್ರತಿಯೊಂದು ಸಭೆಯ ನಡಾವಳಿಗಳು ಹಾಗೂ ಆ ಸಭೆಯ ನಡಾವಳಿಗಳಿಗೆ ತಕ್ಕಂತೆ ಕೈಗೊಂಡ ಕ್ರಮದ ಬಗ್ಗೆ ಸಂಕ್ಷಿಪ್ತ ವರದಿಯನ್ನು ಸಲ್ಲಿಸುವಂತೆ ನಿರ್ಣಯಿಸಿತು.**

–

–

–

–

–

–

–



ಕುಲಸಚಿವರು

ಕುಲಪತಿಗಳು